ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 20 ಮಂಗಳವಾರ 2023

ಸಂಪುಟ: 44 | ಸಂಚಿಕೆ: 65 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಅಕ್ಕಿಗಾಗಿ ಮುಂದುವರೆದ ಅನ್ವೇಷಣೆ

ಅನ್ನಭಾಗ್ಯಕ್ಕೆ ಜು.1ರಂದು ಚಾಲನೆ ನೀಡಲು ಮೈಸೂರಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮ ರದ್ದು

● ಎನ್‌ಸಿಸಿಎಫ್, ನಾಫೆಡ್, ಕೇಂದ್ರೀಯ ಭಂಡಾರಗಳಿಂದ ಅಕ್ಕಿ ಪಡೆಯಲು ಕ್ರಮ: ಸಿದ್ದರಾಮಯ್ಯ ● ಮತ್ತೆ ಕೇಂದ್ರ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ನಡೆಸಿದ ಮುಖ್ಯಮಂತ್ರಿ





ಬೆಂಗಳೂರು, ಜೂ.19(ಕೆಎಂಶಿ)–ಕೇಂದ್ರ ಸರ್ಕಾರ ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ ನೀಡಲು ನಿರಾಕರಿಸಿರುವ ಹಿನ್ನೆಲೆಯಲ್ಲಿ ಜುಲೈ ಒಂದರಂದು ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಚಾಲನಾ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ರದ್ದುಪಡಿಸಿದೆ.

ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಯಲ್ಲಿ ಅನ್ನಭಾಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ತವರು ಜಿಲ್ಲೆಯಿಂದಲೇ ಚಾಲನೆ ನೀಡಲು ಕಾರ್ಯಕ್ರಮ ರೂಪಿಸಿದರು. ಕೇಂದ್ರ ಸರ್ಕಾರ ಹಾಗೂ ನೆರೆಯ ತೆಲಂಗಾಣ, ಅಗತ್ಯವಿರುವ 2.28 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಪೂರೈಸಲು ನಿರಾಕರಿಸಿರುವ ಹಿನ್ನೆಲೆಯಲ್ಲಿ ನಿಗದಿತ ಕಾರ್ಯಕ್ರಮ ಮುಂದೂಡಲಾಗಿದೆ. ಅಷ್ಟೇ ಅಲ್ಲ, ಸರ್ಕಾರ ಅಂದುಕೊಂಡಂತೆ ಜುಲೈ ತಿಂಗಳಿನಿಂದ ಅನ್ನಭಾಗ್ಯ ಕಾರ್ಯಕ್ರಮ ಅನುಷ್ಠಾನಗೊಳ್ಳುವುದು ಅನುಮಾನ. ಆದರೆ, ಎಂದಿನಂತೆ ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡುದಾರರಿಗೆ 5 ಕೆಜಿ. ಅಕ್ಕಿ ದೊರೆಯಲಿದೆ. ಅನ್ನಭಾಗ್ಯ ಯೋಜನಾ ಕಾರ್ಯಕ್ರಮವನ್ನು ಜಾರಿಗೊಳಿಸಲೇಬೇಕೆಂದು ಪಣತೊಟ್ಟಿರುವ ಮುಖ್ಯಮಂತ್ರಿಗಳು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕೇಂದ್ರ ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿ ಅಕ್ಕಿ ಖರೀದಿಸುವ ತೀರ್ಮಾನ ಕೈಗೊಂಡಿದ್ದಾರೆ. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸಲು ಸಮಯಾವಕಾಶ ಬೇಕಾಗಿದ್ದು, ಅನ್ನಭಾಗ್ಯದಡಿ ಹೆಚ್ಚುವರಿಯಾಗಿ ಆಹಾರ ಧಾನ್ಯ ನೀಡುವ ಕಾರ್ಯಕ್ರಮ ಒಂದಷ್ಟು ದಿನ ವಿಳಂಬವಾಗಲಿದೆ. ಅಧಿಕಾರಿಗಳ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ನ್ಯಾಷನಲ್ ಕೋ-ಆಪರೇಟಿವ್ ಕನ್ಸೂಮರ್ಸ್ ಫೆಡರೇಷನ್ (ಎನ್‌ಸಿಸಿಎಫ್), ನ್ಯಾಷನಲ್ ▶ 8ನೇ ಪುಟಕ್ಕೆ

ಸ್ಥಳದಲ್ಲೇ ಹಲವಾರು ಪ್ರಕರಣ ಇತ್ಯರ್ಥಪಡಿಸಿದ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ

ಮೂರು ದಿನಗಳಿಂದ ಸಾರ್ವಜನಿಕರಿಂದ ದೂರುಗಳ ಸುರಿಮಳೆ

■ ಪುಟ–4

ಪರಿಷತ್ ಉಪ ಚುನಾವಣೆ

ಜಗದೀಶ್‌ಶೆಟ್ಟರ್, ಬೋಸರಾಜ್, ತಿಪ್ಪಣ್ಣ ಕಮಕನೂರು ಕಾಂಗ್ರೆಸ್ ಅಭ್ಯರ್ಥಿಗಳು



ಬೆಂಗಳೂರು, ಜೂ.19–(ಕೆಎಂಶಿ) ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಉಪ ಚುನಾವಣೆಗೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವ ಬೋಸರಾಜ್ ಹಾಗೂ ಕೋಲಿ ಸಮಾಜದ ಮುಖಂಡ ತಿಪ್ಪಣ್ಣ ಕಮಕನೂರು ಅವರು ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ.

ನಾಳೆ ನಾಮಪತ್ರ ಸಲ್ಲಿಸಲು ಕಡೇ ದಿನವಾಗಿದ್ದು, ಮೂವರು ಅಭ್ಯರ್ಥಿಗಳಾಗಿ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಆಡಳಿತಾರೂಢ ಕಾಂಗ್ರೆಸ್‌ಗೆ ಈ ಮೂರು ಸ್ಥಾನಗಳು ಸುಲಭವಾಗಿ ಲಭ್ಯವಾಗಲಿವೆ. ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಮಾಜಿ ಸಚಿವರಾದ ಆರ್.ಶಂಕರ್ ಹಾಗೂ ಬಾಬುರಾವ್ ಚಿಂಚನಸೂರು ಅವರು ವಿಧಾನಸಭೆ ಚುನಾವಣೆಗೆ ಕಣಕ್ಕಿಳಿಯುವ ಉದ್ದೇಶದಿಂದ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರಿಂದ ತೆರವಾಗಿರುವ ಈ ಮೂರು ಸ್ಥಾನಗಳಿಗೆ ಕೇಂದ್ರ ಚುನಾವಣಾ ಆಯೋಗ ಮೂರು ಪ್ರತ್ಯೇಕ ಅಧಿಸೂಚನೆ ಹೊರಡಿಸಿತ್ತು. ಪ್ರತ್ಯೇಕವಾಗಿ ಅಧಿಸೂಚನೆ ಹೊರಬಿದ್ದಿರುವುದರಿಂದ ಮೂರು ಸ್ಥಾನಗಳು ಕಾಂಗ್ರೆಸ್‌ಗೆ ದೊರೆಯಲಿವೆ. "ಕಳೆದ ವಿಧಾನಸಭಾ ಚುನಾವಣೆಯ ಅಂತಿಮ ಘಟ್ಟದಲ್ಲಿ ಜಗದೀಶ್ ಶೆಟ್ಟರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರಿಂದ ಚುನಾವಣೆಯಲ್ಲಿ ಪಕ್ಷಕ್ಕೆ ಲಾಭವಾಗಿತ್ತು. ಇದನ್ನು ಮನಗಂಡ ದೆಹಲಿ ವರಿಷ್ಠರು ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಶೆಟ್ಟರ್ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡಿದ್ದರೂ ಅವರನ್ನು ಪರಿಷತ್ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದೆ. ವಿಧಾನಮಂಡಲದ ಸದಸ್ಯರಲ್ಲದಿದ್ದರೂ ಬೋಸರಾಜ್ ಅವರನ್ನು ವರಿಷ್ಠರು ಸಿದ್ದರಾಮಯ್ಯ ಅವರ ಸಂಪುಟಕ್ಕೆ ಸೇರ್ಪಡೆ ಮಾಡಿಸಿದ್ದರು. ಇನ್ನು ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕೋಲಿ ಸಮಾಜದ ಮತವನ್ನು ಗಮನದಲ್ಲಿಟ್ಟುಕೊಂಡು ಪರಿಷತ್ತಿನ ಮಾಜಿ ಸದಸ್ಯ ತಿಪ್ಪಣ್ಣ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ.

ನಾನೇ ಐದು ವರ್ಷ ಸಿಎಂ ಆಗಿರ್ತೇನೆ ಅಂತ ಹೇಳೋಕೆ ಸಿದ್ದರಾಮಯ್ಯರಿಗೆ ಹೆದರಿಕೆ, ಪುಕ್ಕಲತನ

● ಸಂಸದ ಪ್ರತಾಪ್‌ಸಿಂಹ ಲೇವಡಿ ● ತಾವು ಹೇಳಲಾಗದ್ದನ್ನು ಚೇಲಾಗಳ ಮೂಲಕ ಹೇಳಿಸುತ್ತಿದ್ದಾರೆ ● ಇಂತಹ ಚೇಲಾ ಪಡೆ ಮುಖ್ಯಸ್ಥನೇ ಎಂ.ಬಿ.ಪಾಟೀಲ್!



ಮೈಸೂರು, ಜೂ.19(ಬಿಎಲ್‌ಯು)– ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್‌ಗೆ ಬಿಟ್ಟುಕೊಡಲ್ಲ ಅಂತ ಹೇಳಲು ಸಿದ್ದರಾಮಯ್ಯ ಅವರಿಗೆ ಹೆದರಿಕೆ, ಪುಕ್ಕಲತನ ಎಂದು ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ. ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಹೈಕಮಾಂಡ್ ರೂಪಿಸಿರುವ ಮುಖ್ಯಮಂತ್ರಿ ಸ್ಥಾನದ ಅಧಿಕಾರ ಹಂಚಿಕೆ ಸೂತ್ರದಂತೆ ಎರಡೂವರೆ ವರ್ಷದ ನಂತರ ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್‌ಗೆ ಬಿಟ್ಟು ಕೊಡಬೇಕು. ಆದರೆ ಈ ಇರಾದೆ ಸಿದ್ದರಾಮಯ್ಯಗೆ ಇಲ್ಲ. ಈ ಮಾತನ್ನು ನೇರವಾಗಿ ಹೇಳಲು ಸಿದ್ದರಾಮಯ್ಯಗೆ ಹೆದರಿಕೆ, ಪುಕ್ಕಲತನ. ಈ ಕಾರಣದಿಂದಲೇ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಎಂ.ಬಿ.ಪಾಟೀಲ್ ಹೆಗಲಮೇಲೆ ಬಂದೂಕು ಇಟ್ಟು ಟ್ರಿಗರ್ ಒತ್ತಿ ಗುಂಡು ಹಾರಿಸುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಕುಟುಕಿದರು. ನಿಮಗೆ ಅಷ್ಟು ಧೈರ್ಯವಿದ್ದರೆ ಡಾ.ಮಹದೇವಪ್ಪ ಹಾಗೂ ಎಂ.ಬಿ.ಪಾಟೀಲ್ ಅವರಿಂದ ಏಕೆ ಈ ಮಾತು ಹೇಳಿಸುತ್ತಿದ್ದೀರಾ. ನಾನೇ ಪೂರ್ಣಾವಧಿ ಮುಖ್ಯಮಂತ್ರಿ ಅಂತ ನೇರವಾಗಿ ನೀವೇ ಹೇಳಿ ಎಂದು ಪ್ರತಾಪ್‌ಸಿಂಹ, ಸಿದ್ದರಾಮಯ್ಯರಿಗೆ ಸವಾಲು ಹಾಕಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾತ್ರ ಬಹಳ ದೊಡ್ಡದಿದೆ. ಆದರೂ ಕಾಂಗ್ರೆಸ್ ಪಕ್ಷ ಸಿದ್ದರಾಮಯ್ಯ ಅವರನ್ನು ಧಾರಾಳ ▶ 8ನೇ ಪುಟಕ್ಕೆ

ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಿ ಇಲ್ಲವೇ ಜನರಿಗೆ ಆ ಹಣ ಕೊಡಿ...

ಗಂಡನ ದರೋಡೆ ಮಾಡಿ, ಹೆಂಡತಿಗೆ ಕೊಡ್ತಿದ್ದಾರೆ!

ಮೈಸೂರು, ಜೂ.19(ಬಿಎಲ್‌ಯು)–ಯಾವ ರಾಜ್ಯದಲ್ಲೂ ಅಕ್ಕಿ ಸಿಗಲಿಲ್ಲ ಅಂದರೆ ಮುಕ್ತ ಮಾರುಕಟ್ಟೆ (ಓಪನ್ ಮಾರ್ಕೆಟ್)ಯಲ್ಲಿ ಅಕ್ಕಿ ಖರೀದಿಸಿ, ಇಲ್ಲವೇ ಅಕ್ಕಿಗೆ ತಗಲುವ ವೆಚ್ಚವನ್ನು ಜನರ ಬ್ಯಾಂಕ್ ಅಕೌಂಟ್‌ಗೆ ಹಾಕಿ ಎಂದು ಸಂಸದ ಪ್ರತಾಪ್ ಸಿಂಹ, ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸಲಹೆ ನೀಡಿದ್ದಾರೆ. ಅನ್ನಭಾಗ್ಯ ಯೋಜನೆಯಲ್ಲಿ 10 ಕೆಜಿ.ಅಕ್ಕಿ ಕೊಡುವ ಘೋಷಣೆ ಮಾಡುವಾಗ ಈ ಸಂಕಷ್ಟ ಎದುರಾಗುತ್ತದೆ ಎಂದು ನಿಮಗೆ ತಿಳಿದಿರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ. ಈಗ ಅಕ್ಕಿಗಾಗಿ ದೇಶದ ಎಲ್ಲಾ ರಾಜ್ಯಗಳಲ್ಲಿ ಹುಡುಕಾಡುತ್ತಿದ್ದೀರಾ. ನಿಮಗೆ ಇಷ್ಟು ಕಷ್ಟ ಏಕೆ. ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿ ಮಾಡಿ ಜನರಿಗೆ ಕೊಡಿ. ಅದು ಆಗಲಿಲ್ಲ ಅಂದರೆ 10 ಕೆ.ಜಿ. ಅಕ್ಕಿ ಹಣ 340 ರೂಪಾಯಿಯನ್ನು ▶ 8ನೇ ಪುಟಕ್ಕೆ

ಕಂತೆ ಕಂತೆ ತಪ್ಪೋಗಿ ಈಗ ಬರೀ ಚಿಲ್ಲರೆ ಕಾಸು ಸಿಗುತ್ತಿದೆ ಅಂತ ಎಂ.ಬಿ.ಪಾಟೀಲ್ ಒದ್ದಾಡುತ್ತಿದ್ದಾರೆ!

ಮೈಸೂರು, ಜೂ.19(ಬಿಎಲ್‌ಯು)–ಕೂತ ಕಡೆ ಕಂತೆ ಕಂತೆ ಕಾಸು ಬರುವ ಖಾತೆ ಸಿಗಲಿಲ್ಲ ಅಂತ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ವಿಲವಿಲ ಅಂತ ಒದ್ದಾಡುತ್ತಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಹರಿಹಾಯ್ದಿದ್ದಾರೆ. ತಮ್ಮನ್ನು ಚಿಲ್ಲರೆ ರಾಜಕಾರಣಿ ಎಂದು ಜರಿದ ಎಂ.ಬಿ.ಪಾಟೀಲ್ ಅವರನ್ನು ಪ್ರತಾಪ್ ಸಿಂಹ ತೀವ್ರ ತರಾಟೆಗೆ ತೆಗೆದುಕೊಂಡರು. ಎಂ.ಬಿ.ಪಾಟೀಲ್‌ಗೆ ಈಗ ಸಿಕ್ಕಿರುವ ಕೈಗಾರಿಕಾ ಖಾತೆಯಲ್ಲಿ ಬರೀ ಚಿಲ್ಲರೆ ಮಾತ್ರ ಸಿಗುತ್ತಿದೆ. ಕರೆಂಟ್ ಬಿಲ್ ಹೆಚ್ಚಿಸಿರುವ ಕಾರಣ ಕೈಗಾರಿಕೆಗಳು ಸಂಕಷ್ಟ ಎದುರಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಎಂ.ಬಿ.ಪಾಟೀಲ್ ಅವರಿಗೆ ಕೈಗಾರಿಕಾ ಖಾತೆಯಲ್ಲಿ ಸಿಗೋದು ಬರೀ ಚಿಲ್ಲರೆ ಕಾಸು ಅಷ್ಟೆ. ಜಲಸಂಪನ್ಮೂಲ ಖಾತೆಯ ಮೇಲೆ ಎಂ.ಬಿ.ಪಾಟೀಲ್ ಕಣ್ಣಿಟ್ಟಿದ್ದರು. ಆದರೆ ಆ ಖಾತೆ ಡಿ.ಕೆ. ಶಿವಕುಮಾರ್ ಪಾಲಾಯಿತು. ಹಾಗಾಗಿ ಚಿಲ್ಲರೆ ಕಾಸು ಸಿಗುತ್ತಿದೆಯಲ್ಲ ಅಂತ ವಿಲವಿಲ ಎಂದು ಒದ್ದಾಡುತ್ತಿದ್ದಾರೆ ಎಂದರು. ಎಂ.ಬಿ.ಪಾಟೀಲ್‌ಗೆ ಕಂತೆ ಕಂತೆ ನೋಟಿನ ಬಗ್ಗೆ ಚಿಂತೆ. ಸಿದ್ದರಾಮಯ್ಯ ಅವರ ಓಲೈಕೆಯೇ ತಮ್ಮ ಖಾತೆ ಜವಾಬ್ದಾರಿ ಅಂತ ▶ 8ನೇ ಪುಟಕ್ಕೆ

1970ರ ಅವಧಿಯಲ್ಲಿ ನಮ್ಮ ಮೈಸೂರಲ್ಲಿದ್ದ ಇಬ್ಬರು ಐಎಎಸ್ ಅಧಿಕಾರಿಗಳ ನೆನಪು

ಕೆ.ಬಿ.ಗಣಪತಿ
ಹಿರಿಯ ಪತ್ರಕರ್ತರು

ಮೈಸೂರು, ಜೂ. 19–ನಮ್ಮ ಮೈಸೂರಿನಲ್ಲಿ ಕಾರ್ಯನಿರ್ವಹಿಸಿದ ಕೆಲವು ಸರ್ಕಾರಿ ಅಧಿಕಾರಿಗಳನ್ನು ನಮ್ಮ ನಗರದ ಹಿರಿಯ ನಾಗರಿಕರು ನೆನಪಿಸಿಕೊಳ್ಳುವ ಸಮಯವಿದು.

ಈ ಪೈಕಿ ಒಬ್ಬರು ವಿಭಾಗೀಯ ಆಯುಕ್ತರಾಗಿದ್ದ **ಜಯಕುಮಾರ್ ಅನಗೋಳ್** (30.4.1977 ರಿಂದ 1.2.1980), ನೂತನ ಅಧಿಕಾರಿಗಳ ನೇಮಕಾತಿವರೆಗೂ ಅವರು ಇತರ ಇಲಾಖೆಗಳ ಉಸ್ತುವಾರಿಯನ್ನು ಸಹ ನಿರ್ವಹಿಸಿದ್ದರು.

ಒಮ್ಮೆ, ಸ್ಥಳೀಯ ಸಂಜೆ ಪತ್ರಿಕೆಗಳು ಹುಣಸೂರು ಬಳಿ ಶ್ರೀಮಂತ ಜಮೀನ್ದಾರ ತನ್ನ ಮನೆಯಲ್ಲಿ ಜೀತದಾಳುಗಳ (bonded labourers) ಇರಿಸಿಕೊಂಡಿದ್ದ ಬಗ್ಗೆ ಒಂದು ಸುದ್ದಿಯನ್ನು ಪ್ರಕಟಿಸಿದ್ದವು. ಸ್ಥಳೀಯ ರಾಜಕಾರಣಿಯೊಬ್ಬರು ಈ ಕುರಿತು ಆರೋಪ ಮಾಡಿದ್ದರು.

ಅದೇ ದಿನ ಸಂಜೆ ವಿಭಾಗೀಯ ಆಯುಕ್ತರಾಗಿದ್ದ ಜಯಕುಮಾರ ಅನಗೋಳ್ ಅವರು ತನಿಖೆ ನಡೆಸಿ, ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದರು. ಪರಿಣಾಮವಾಗಿ ನಾಲ್ವರು ಜೀತದಾಳುಗಳು ಬಂಧಮುಕ್ತರಾದರು. ಮತ್ತು ಮರುದಿನವೇ ಅವರಿಗೆ ಸ್ವಾತಂತ್ರ್ಯ ಮತ್ತು ಘನತೆಯೂ ದಕ್ಕಿತು.

ಮತ್ತೊಬ್ಬ ಅಧಿಕಾರಿ **ಡೇವಿಡ್ ಸೈಯಮ್**, ಐಎಎಸ್ ಅವರು 1977–79ರಲ್ಲಿ ಮೈಸೂರು ಸಿಟಿ ಕಾರ್ಪೊರೇಷನ್ (ಎಂಸಿಸಿ)ಆಯುಕ್ತರಾಗಿದ್ದರು. ಆ ದಿನಗಳಲ್ಲಿ, ಮೈಸೂರು ನಗರದ ಕೆಲವು ಪ್ರಮುಖ ರಸ್ತೆಗಳು ತುಂಬಾ ಹದಗೆಟ್ಟಿದ್ದು, ವಾಹನ ಸಂಚಾರವೂ ದುಸ್ತರವಾಗಿತ್ತು.

ಮೈಸೂರಿನ ಪೀಪಲ್ಸ್ ಬುಕ್ ಹೌಸ್‌ನ (ಈಗ ಮುಚ್ಚಿ ಹೋಗಿದೆ) ಮಾಲೀಕರಾದ ಡಿ.ಆರ್. ಕೃಷ್ಣಮೂರ್ತಿ ಅವರು ಹದಗೆಟ್ಟು, ದುಸ್ಥಿತಿಯಲ್ಲಿದ್ದ ರಸ್ತೆಗಳ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ಬರೆದಿದ್ದರು.

ಮರುದಿನ ಬೆಳಗ್ಗೆ, ಸೈಯಮ್ ದೂರುದಾರರಿಗೆ (ಕೃಷ್ಣಮೂರ್ತಿ) ಕರೆ ಮಾಡಿ ದೂರಿನಲ್ಲಿ ತಿಳಿಸಿರುವಂತೆ ಹದಗೆಟ್ಟ ರಸ್ತೆಗಳನ್ನು ತೋರಿಸುವಂತೆಯೂ ಹೇಳಿದರು. ಅದಕ್ಕೆ ಸಿದ್ಧರಿರುವುದಾಗಿ ಒಪ್ಪಿ ಸ್ಕೂಟರ್‌ನಲ್ಲಿ ಹೋದರೆ ಕಮಿಷನರ್ ಕಚೇರಿಯಿಂದ ಕಮಿಷನರ್ ಅವರ ಕಾರಿನಲ್ಲಿ ಕುಳಿತು, ಹಾಳಾದ ರಸ್ತೆಗಳನ್ನು ತೋರಿಸಬಹುದು ಎಂದುಕೊಂಡು ಕೃಷ್ಣಮೂರ್ತಿ ಕಮಿಷನರ್ ಕಚೇರಿಗೆ ತೆರಳಿದರು.

ಅಲ್ಲಿ ಕೃಷ್ಣಮೂರ್ತಿ ಅವರಿಗೆ ಅಚ್ಚರಿ ಕಾದಿತ್ತು. ಯುವ ಅಧಿಕಾರಿ ಸೈಯಮ್, ನಗೆ ಬೀರುತ್ತಾ ದೂರುದಾರರಿಗೆ ಹಸ್ತಲಾಘವ ಮಾಡಿ, 'ಬನ್ನಿ ಹೋಗೋಣ' ಎಂದರು. ಇಬ್ಬರೂ ಕಮಿಷನರ್ ಕಾರು ನಿಂತಿದ್ದ ಪೋರ್ಟಿಕೋ ಬಳಿ ಬಂದರು. ನೀವು ಇಲ್ಲಿಗೆ ಹೇಗೆ ಬಂದಿರಿ ಎಂದು ಕೃಷ್ಣಮೂರ್ತಿ ಅವರನ್ನು ಸೈಯಮ್ ಕೇಳಿದರು. ಅದಕ್ಕೆ ಅವರು ಸ್ಕೂಟರ್‌ನಲ್ಲಿ ಎಂದರು. ಕೂಡಲೇ ಸೈಯಮ್ ಅವರು "ಬನ್ನಿ ನಿಮ್ಮ ಸ್ಕೂಟರ್‌ನಲ್ಲೇ ಹೋಗೋಣ" ಎಂದರು. ಇದನ್ನು ಕೇಳಿದ ತಕ್ಷಣ ಕೃಷ್ಣಮೂರ್ತಿ ತಬ್ಬಿಬ್ಬಾದರು.

ದೂರುದಾರರ ಸ್ಕೂಟರ್‌ನಲ್ಲಿ ಹಿಂಬದಿ ಸವಾರರಾಗಿ ಆಯುಕ್ತರೊಬ್ಬರು ನಗರವನ್ನು ಸುತ್ತು ಹಾಕಿ ರಸ್ತೆ ಪರಿಶೀಲನೆ ಮಾಡಿದ್ದು ಮೈಸೂರು ಮಹಾನಗರ ಪಾಲಿಕೆಯ ಇತಿಹಾಸದಲ್ಲಿ ಪ್ರಪ್ರಥಮವಾಗಿತ್ತು. ಮರುದಿನ ಬೆಳಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಇದು ಸುದ್ದಿಯಾಯಿತು.

ಕಾರಂಜಿ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಇಂದು ಬೆಳಗ್ಗೆ ವಾಹನ ಡ್ರೈವ್ ಮಾಡಿಕೊಂಡು ಬರುವಾಗ ಕಳೆದ ಸಂಜೆ ಹಾಗೂ ಇಂದು ಬೆಳಗ್ಗೆ ಸುದ್ದಿಯಾಗಿದ್ದ ಈ ಕೆಳಕಂಡ ಚಿತ್ರಣ ಕಣ್ಣಿಗೆ ಬಿದ್ದ ಕೂಡಲೇ ಈ ಇಬ್ಬರು ಅಧಿಕಾರಿಗಳು ನೆನಪಾದರು.



ಇದರ ಬಗ್ಗೆ ಇನ್ನೂ ಹೇಳಬೇಕಾ?

ಸಿಐಐಎಲ್‌ನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆ ಆರಂಭ



ಗಣಕೀಕೃತ ಭಾಷಾ ಶಾಸ್ತ್ರದ ಬೇಸಿಗೆ ಶಾಲೆ ತರಬೇತಿ ಕಾರ್ಯಕ್ರಮವನ್ನು ಎಲ್‌ಡಿಸಿ-ಐಎಲ್ ಅಧ್ಯಕ್ಷ ಪ್ರೊ.ಜಿ. ಉಮಾ ಮಹೇಶ್ವರ ರಾವ್ ಸೋಮವಾರ ಉದ್ಘಾಟಿಸಿದರು.

ಮೈಸೂರು,ಜೂ.19(ಆರ್‌ಕೆ)– ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ ಗಣಕೀಕೃತ ಭಾಷಾಶಾಸ್ತ್ರದ ಬೇಸಿಗೆ ಶಾಲೆ (Summer School in Computational Linguistics) ಆರಂಭವಾಗಿದೆ.

ಭಾರತೀಯ ಭಾಷಾ ದತ್ತಾಂಶ ಒಕ್ಕೂಟ ಹಾಗೂ ಭಾರತೀಯ ಭಾಷಾ ಸಂಸ್ಥಾನ ಸಂಯುಕ್ತಾಶ್ರಯದಲ್ಲಿ ಜು.3ರವರೆಗೆ ನಡೆಯಲಿರುವ ಗಣಕೀಕೃತ ಭಾಷಾಶಾಸ್ತ್ರದ ಬೇಸಿಗೆ ಶಾಲೆ ತರಬೇತಿ ಕಾರ್ಯಕ್ರಮವನ್ನು ಎಲ್‌ಡಿಸಿ–ಐಎಲ್ ಅಧ್ಯಕ್ಷ ಪ್ರೊ ಜಿ.ಉಮಾ ಮಹೇಶ್ವರರಾವ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿರುವ ಗಣಕೀಕೃತ ಭಾಷಾಶಾಸ್ತ್ರದ ಬೇಸಿಗೆ ಶಾಲೆ ಯೋಜನೆಯು ವಿದ್ಯಾರ್ಥಿಗಳಿಗೆ ಭಾಷಾಶಾಸ್ತ್ರ ಕ್ಷೇತ್ರದ ವಿವಿಧ ಆಯಾಮಗಳ ಬಗ್ಗೆ ಸಮಗ್ರ ತರಬೇತಿ ನೀಡಲಾಗುವುದು ಎಂದು ತಿಳಿಸಿದರು.

ಮಾನವ ನಿರ್ಮಿತ ದತ್ತಾಂಶಗಳ ಸಂಗ್ರಹಣೆ ಮತ್ತು ನಿರ್ವಹಣೆ, ಪ್ರಸಕ್ತ ಬೆಳವಣಿಗೆಗಳ ಬಗ್ಗೆ ತರಬೇತಿ ನೀಡಲಾಗುವುದು. ಭಾಷಾ ದತ್ತಾಂಶದ ಕೇಂದ್ರೀಕೃತ ಭಂಡಾರವಾಗಿ ಭಾಷಾ ತಂತ್ರಜ್ಞಾನ ಅನ್ವಯಗಳ ಅಭಿವೃದ್ಧಿ ಮತ್ತು ಸುಧಾರಣೆಗಳ ಕುರಿತಂತೆ ತಜ್ಞರು 15 ದಿನಗಳ ಕಾಲ ನಡೆಯುವ ಶಾಲೆಯಲ್ಲಿ ತರಬೇತಿ ನೀಡಲಿದ್ದಾರೆ ಎಂದರು. ಸಿಐಐಎಲ್ ನಿರ್ದೇಶ ಪ್ರೊ.ಶೈಲೇಂದ್ರ ಮೋಹನ್, ಎಲ್‌ಡಿಸಿಐಎಲ್ ಪ್ರಭಾರ ಅಧಿಕಾರಿ ಡಾ.ನಾರಾಯಣಕುಮಾರ್ ಚೌಧರಿ, ಚೇತನ್ ಬಾಜಿ ಹಾಗೂ ಅಮೋಮ್ ನಂದರಾಜ್ ಮಿತ್ಯೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. 45 ಮಂದಿ ಭಾಷಾಶಾಸ್ತ್ರ, 11 ಮಂದಿಗೆ ಗಣಕೀಕರಣ ಶಾಸ್ತ್ರ ಮತ್ತು 40 ಭಾರತೀಯ ಭಾಷಾ ದತ್ತಾಂಶ ಒಕ್ಕೂಟದ ಸಿಬ್ಬಂದಿ ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ.


ಮತ್ತೆ ಕೈಕೊಟ್ಟ ಸೇವಾ ಸಿಂಧು ಪೋರ್ಟಲ್

'ಗೃಹಜ್ಯೋತಿ'ಗೆ ನೋಂದಾಯಿಸಲು 2ನೇ ದಿನವೂ ಪರದಾಡಿದ ಗ್ರಾಹಕರು

ಮೈಸೂರು,ಜೂ.19(ಆರ್‌ಕೆ, ಬಿಎಲ್‌ಯು) –ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ 'ಗೃಹಜ್ಯೋತಿ' ಯೋಜನೆಗೆ ನೋಂದಾಯಿಸಿಕೊಳ್ಳಲು ವಿದ್ಯುತ್ ಗ್ರಾಹಕರು ಎರಡನೇ ದಿನವೂ ಪರದಾಡುವಂತಾಯಿತು.

ಪ್ರತೀ ತಿಂಗಳು 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವುದಾಗಿ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿರುವ ಸರ್ಕಾರ 'ಗೃಹ ಜ್ಯೋತಿ'ಗೆ ನಿನ್ನೆ (ಜೂ.18)ರಿಂದ ನೋಂದಾವಣಿ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಅದರಂತೆ ರಾಜ್ಯದ ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ನೋಂದಾಯಿಸಲು ಸಾಫ್ಟ್‌ವೇರ್ ಸಿದ್ಧಪಡಿಸಲಾಗಿದೆ.

ಆರಂಭದ ದಿನವಾದ್ದರಿಂದ ಫಲಾನುಭವಿ ಆಕಾಂಕ್ಷಿಗಳು ಒಮ್ಮೆಲೇ ಕೇಂದ್ರಗಳಿಗೆ ಮುಗಿ ಬಿದ್ದಿರುವುದರಿಂದ ಸರ್ವರ್ ಡೌನ್ ಆಗಿ ಸೇವಾ ಸಿಂಧು ಪೋರ್ಟಲ್ ಕೆಲಸ ಮಾಡದ ಕಾರಣ, ಎರಡನೇ ದಿನವೂ ಮೈಸೂರಿನ ಬಹುತೇಕ ಕರ್ನಾಟಕ ಒನ್ ಸೆಂಟರ್‌ಗಳಲ್ಲಿ ಜನರು ಕಾದು ಬರಿಗೈಯ್ಯಲ್ಲಿ ಹಿಂತಿರುಗುವಂತಾಯಿತು.



ಸೋಮವಾರ ಮೈಸೂರಿನ ಕರ್ನಾಟಕ ಒನ್ ಸೆಂಟರ್‌ನಲ್ಲಿ ಗೃಹಜ್ಯೋತಿ ಯೋಜನೆಗೆ ಅರ್ಜಿ ನೋಂದಾಯಿಸಲು ಕಾದು ನಿಂತಿರುವ ಫಲಾನುಭವಿಗಳು.

ಮನೆಯಲ್ಲೇ ಕುಳಿತು ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳಲ್ಲೇ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆಯಾದರೂ, ಸ್ಮಾರ್ಟ್ ಫೋನ್ ಇಲ್ಲದವರು ಕರ್ನಾಟಕ ಒನ್‌ಗಳ ಮೊರೆ ಹೋಗುತ್ತಿದ್ದಾರೆ. ಆದರೆ ಇಂದು ಸೇವಾ ಸಿಂಧು ಪೋರ್ಟಲ್ ಎಷ್ಟೇ ಪ್ರಯತ್ನಿಸಿದರೂ ಓಪನ್ ಆಗಲೇ ಇಲ್ಲ. ಶೇಷಾದ್ರಿ ಅಯ್ಯರ್ ರಸ್ತೆ, ಜಯನಗರ, ಶಾರದಾದೇವಿ ನಗರ, ಗಾಯತ್ರಿಪುರಂ, ಉದಯಗಿರಿ, ಅಕ್ಕನ ಬಳಗ ಶಾಲೆ ಬಳಿ, ಗೋಕುಲಂ 3ನೇ ಹಂತದ ಕರ್ನಾಟಕ ಒನ್ ಸೆಂಟರ್‌ಗಳಲ್ಲಿ ಜನರು ಕಾದು ನಿಂತು ನೋಂದಾಯಿಸಲಾಗದೇ ವಾಪಸ್ ತೆರಳಿದರು.

ಮೈಸೂರಿನ ಜಯನಗರದ ಕರ್ನಾಟಕ ಒನ್ ಸೆಂಟರ್‌ನಲ್ಲಿ ಕೂಡ ಪರಿಸ್ಥಿತಿ ಬೇರೆ ಆಗಿರಲಿಲ್ಲ. 2ನೇ ದಿನವೂ ಸೇವಾ ಸಿಂಧು ಪೋರ್ಟಲ್ ಕೈ ಕೊಟ್ಟಿತ್ತು. ಗೃಹಜ್ಯೋತಿ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು ಜನರು ತುಂಬಿದ್ದರು. ಆದರೆ ಪೋರ್ಟಲ್ ಓಪನ್ ಆಗಲೇ ಇಲ್ಲ. ಸರ್ವರ್ ಡೌನ್ ಆಗಿದೆ ಎಂದು ಕರ್ನಾಟಕ ಒನ್ ಸಿಬ್ಬಂದಿ ಕೈಚೆಲ್ಲಿ ಕುಳಿತರು. ಮಂಗಳವಾರವಾದರೂ ಸೇವಾಸಿಂಧು ಪೋರ್ಟಲ್ ಓಪನ್ ಆಗುವುದೇ ಎಂದು ಜನರು ಕಾಯುತ್ತಿದ್ದಾರೆ.

ಸೇವಾ ಸಿಂಧು ಪೋರ್ಟಲ್ ಈಗ ಓಪನ್ ಆಗುತ್ತೆ, ಇನ್ನೇನು ಓಪನ್ ಆಗಬಹುದು ಎಂದು ಜನರು ಕಾದರು. ಲೈಟ್ ಬಿಲ್, ಆಧಾರ್ ಕಾರ್ಡ್, ಮೊಬೈಲ್ ಹಿಡಿದು ಇನ್ನೇನು ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಕಂಪ್ಯೂಟರ್‌ನತ್ತ ಮುಖ ಮಾಡಿದ್ದರು. ಆದರೆ ಸೇವಾ ಸಿಂಧು ಪೋರ್ಟಲ್ ಓಪನ್ ಆಗದೇ ಇದ್ದುದರಿಂದ ಗಂಟೆ ಗಟ್ಟಲೆ ಕಾದು ಕಾದು ಸುಸ್ತಾದ ಜನರು ಮನೆಗೆ ವಾಪಸ್ಸಾದರು. ಕೆಲವರು ಮಧ್ಯಾಹ್ನವಾದರೂ ರಿಜಿಸ್ಟ್ರೇಷನ್ ಮಾಡಿಸೋಣ ಅಂತ ಕರ್ನಾಟಕ ಒನ್ ಸೆಂಟರ್‌ಗೆ ಬಂದರೂ ಆಗಲೂ ಕೂಡ ಸರಿ ಹೋಗಿರಲಿಲ್ಲ.

ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಬಹಳಷ್ಟು ಜನರಿಗೆ ತಿಳಿದಿಲ್ಲ. ಇದರಿಂದ ಮೈಸೂರು ಒನ್ ಅಥವಾ ಕರ್ನಾಟಕ ಒನ್ ಸೇವಾ ಕೇಂದ್ರಕ್ಕೆ ಎಡತಾಕುತ್ತಿದ್ದಾರೆ. ಆದರೆ ಸಂಜೆಯಾದರೂ ಯಾವ ಸೇವಾ ಕೇಂದ್ರದಲ್ಲೂ ಸೇವಾ ಸಿಂಧು ಪೋರ್ಟಲ್ ಓಪನ್ ಆಗಲೇ ಇಲ್ಲ.

ವಧು-ವರರ ಮುಖಾಮುಖಿ ಸಮಾವೇಶ

ಮೈಸೂರು, ಜೂ. 19– ಜೆಎಸ್‌ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಜೂ. 25ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ. ಈವರೆಗೆ ನೋಂದಾಯಿಸಿಕೊಂಡಿಲ್ಲದವರು ವಧು–ವರರ ಸಮಾವೇಶದ ದಿನದಂದು ಕೂಡ ನೋಂದಾಯಿಸಿಕೊಳ್ಳಬಹುದು. ಸಮಾವೇಶ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ. 0821–2430322, ಮೊ. 9611070674 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 19– ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ನೌಕರರ ಸಂಘವು 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜೂ.25ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9741962104, 9448710391 ಸಂಪರ್ಕಿಸಬಹುದು.

ನಾಳೆ ತಾಳವಾಡಿಯಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ

ಮೈಸೂರು, ಜೂ.19– ಜೆಎಸ್‌ಎಸ್ ಮಹಾವಿದ್ಯಾಪೀಠವು ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಜೂ.21ರಂದು ತಾಳವಾಡಿಯಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿನಲ್ಲಿ 'ಗಡಿನಾಡು ಸಾಂಸ್ಕೃತಿಕ ಉತ್ಸವ'ವನ್ನು ಏರ್ಪಡಿಸಿದೆ.

ಬೆಳಗ್ಗೆ 9 ಗಂಟೆಗೆ ತಾಳವಾಡಿಯ ಶ್ರೀ ಬಸವೇಶ್ವರ ವೃತ್ತದಿಂದ ಕ್ಲಾಸಿಕ್ ಫಂಕ್ಷನ್ ಹಾಲ್‌ವರೆಗೆ ಕಲಾ ಉತ್ಸವವಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಪಿ.ಹಿರೇಮಠ ಉತ್ಸವಕ್ಕೆ ಚಾಲನೆ ನೀಡುವರು. ಬೆಳಗ್ಗೆ 10 ಗಂಟೆಗೆ ತಾಳವಾಡಿಯಲ್ಲಿರುವ ಕ್ಲಾಸಿಕ್ ಫಂಕ್ಷನ್ ಹಾಲ್‌ನಲ್ಲಿ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಉದ್ಘಾಟಿಸಲಿದ್ದಾರೆ. ಶಾಸಕ ಎ.ಬಣ್ಣಾರಿ ಅಧ್ಯಕ್ಷತೆ ವಹಿಸುವರು. ಚಾ.ನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಾಧಕರನ್ನು ಸನ್ಮಾನಿಸುವರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಪ್ರಾಸ್ತಾವಿಕ ಭಾಷಣ ಮಾಡುವರು. ಬೆಂಗಳೂರಿನ ಮಾಜಿ ಉಪಮೇಯರ್ ಬಿ.ಎಸ್. ಪುಟ್ಟರಾಜು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ತಾಳವಾಡಿ ಪಂಚಾಯತ್ ಯೂನಿಯನ್ ಅಧ್ಯಕ್ಷೆ ರತ್ನಮ್ಮ ಕಾಳನಾಯ್ಕ, ಗ್ರಾಮ ಪಂಚಾಯತ್ ಅಧ್ಯಕ್ಷೆ ದಾಕ್ಷಾಯಣಿ ಕುಮಾರ್, ಡಿಎಂಕೆ ಜಿಲ್ಲಾಧ್ಯಕ್ಷ ಎನ್.ನಲ್ಲಶಿವಂ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಭಾಗೀರಥಿ, ಬಸವ ಸಮಿತಿ ಅಧ್ಯಕ್ಷ ಎಂ.ಜೆ. ವೀರಭದ್ರಸ್ವಾಮಿ, ಕನ್ನಡ ಸಂಘದ ಅಧ್ಯಕ್ಷ ಚನ್ನಂಜಪ್ಪ ಮುಖ್ಯ ಅತಿಥಿಗಳಾಗಿರುತ್ತಾರೆ.

ಮಧ್ಯಾಹ್ನ 12 ಗಂಟೆಗೆ ವಿಚಾರ ಸಂಕಿರಣ ನಡೆಯಲಿದ್ದು, ಅಧ್ಯಕ್ಷತೆಯನ್ನು ರಂಗಕರ್ಮಿ ಕೆ.ವೆಂಕಟರಾಜು ವಹಿಸಲಿದ್ದಾರೆ. ತಾಳವಾಡಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಎನ್.ಬಸವರಾಜು ಅವರು 'ಕನ್ನಡ ಸಾಹಿತ್ಯ, ನೆಲ, ಜಲ, ಸಂಸ್ಕೃತಿಗೆ ತಾಳವಾಡಿಗರ ಕೊಡುಗೆ' ಬಗ್ಗೆ, ಪಂಚಾಯತ್ ಯೂನಿಯನ್ ಮಾಧ್ಯಮಿಕ ಶಾಲೆಯ ಶಿಕ್ಷಕ ಎಂ.ಗುರುಮಲ್ಲಪ್ಪನವರು 'ತಾಳವಾಡಿ ಜನರ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಸಮಾರೋಪ ಸಮಾರಂಭವಿದ್ದು, ತಹಸೀಲ್ದಾರ್ ಟಿ.ವಿ.ರವಿಶಂಕರ್ ಅಧ್ಯಕ್ಷತೆ ವಹಿಸಲಿದ್ದು, ಚಾಮರಾಜನಗರ ದೀನ ಬಂಧು ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಪ್ರೊ. ಜಿ.ಎಸ್.ಜಯದೇವ ಸಮಾರೋಪ ಭಾಷಣ ಮಾಡುವರು. ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಸೆಲ್ವನ್ ಹಾಗೂ ಅರಣ್ಯ ವಲಯಾಧಿಕಾರಿ ಡಾ.ಎಸ್. ಸತೀಶ್ ಮುಖ್ಯ ಅತಿಥಿಗಳಾಗಿರುತ್ತಾರೆ.

ಬಳಿಕ ಮಧ್ಯಾಹ್ನ 3 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ವಿದ್ಯಾರ್ಥಿಗಳು, ಸ್ಥಳೀಯ ಕಲಾವಿದರುಗಳು ದೇಶಭಕ್ತಿ ಗೀತೆಗಳ ಗಾಯನ, ನೃತ್ಯಪ್ರದರ್ಶನ, ಕಾವ್ಯಪ್ರಸ್ತುತಿ, ವಚನಗಾಯನ, ಭಜನೆ, ಜಾನಪದ ಗಾಯನ ಹಾಗೂ ರಂಗಗೀತೆ ಮೊದಲಾದ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಸ್ವಚ್ಛತಾ ಅಧ್ಯಯನಕ್ಕಾಗಿ ಮೇಯರ್ ನೇತೃತ್ವದ 48 ಸದಸ್ಯರ ಪಾಲಿಕೆ ತಂಡ ಇಂದೋರ್ ಪ್ರವಾಸ

ಮೈಸೂರು, ಜೂ.19(ಆರ್‌ಕೆ)–ಸ್ವಚ್ಛತಾ ಅಭಿಯಾನದಡಿ ಸತತವಾಗಿ ಪ್ರಥಮ ಸ್ಥಾನ ಗಳಿ



ಸುತ್ತಿರುವ ಇಂದೋರ್ ನಗರಕ್ಕೆ ಮೈಸೂರು ಮೇಯರ್ ಶಿವಕುಮಾರ್ ನೇತೃತ್ವದ 48 ನಗರಪಾಲಿಕೆ ಸದಸ್ಯರ ತಂಡವು ಸೋಮವಾರ ಅಧ್ಯಯನ ಪ್ರವಾಸಕ್ಕೆ ತೆರಳಿತು.

ಇಂದು ಬೆಳಗ್ಗೆ ಮೈಸೂರಿನಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದ ಅವರು, ಸಂಜೆ 4 ಗಂಟೆಗೆ ವಿಮಾನದಲ್ಲಿ ಇಂದೋರ್‌ಗೆ ಪ್ರಯಾಣ ಬೆಳೆಸಿದರು. ಓರ್ವ ನಗರಪಾಲಿಕೆ ಪರಿಸರ ಇಂಜಿನಿಯರ್, ಓರ್ವ ಮೇಯರ್ ಆಪ್ತ ಕಾರ್ಯದರ್ಶಿ ಹಾಗೂ 45 ಮಂದಿ ಕಾರ್ಪೊರೇಟರ್‌ಗಳು ಮೇಯರ್ ಜೊತೆ ಅಧ್ಯಯನ ಪ್ರವಾಸದಲ್ಲಿದ್ದಾರೆ. ತಂಡವು ಶುಕ್ರವಾರ ಮೈಸೂರಿಗೆ ಹಿಂದಿರುಗಲಿದೆ. ಇಂದೋರ್‌ನ ಮುನಿಸಿಪಲ್ ಕಾರ್ಪೊರೇಷನ್ ಸ್ವಚ್ಛತೆ, ತ್ಯಾಜ್ಯ ಸಂಗ್ರಹ, ವಿಲೇವಾರಿ, ಮರು ಬಳಕೆಗೆ ಅನುಸರಿಸುತ್ತಿರುವ ವಿಧಾನ, ಪೌರ ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯ, ಅಲ್ಲಿನ ಕಸ ವಿಲೇ



ಶಿವಕುಮಾರ್

ವಾರಿ ಪ್ಲಾಂಟ್‌ಗಳ ಕಾರ್ಯ ವೈಖರಿಯನ್ನು ಪ್ರತ್ಯಕ್ಷವಾಗಿ ನೋಡಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲಾಗುವುದು ಎಂದು ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್, ಲ್ಯಾಂಡ್ ಫಿಲ್ಲಿಂಗ್ ಘಟಕಗಳಿಗೆ ಭೇಟಿ ಮಾಡಿ ಅದರ ಕಾರ್ಯ ವಿಧಾನ ಅಧ್ಯಯನ ನಡೆಸಲಿದ್ದು, ಮನೆ ಮನೆಯಿಂದ ಕಸ ಸಂಗ್ರಹಿಸಲು ಅನುಸರಿಸುತ್ತಿರುವ ಕ್ರಮ, ವಿಂಗಡಣೆ, ಟ್ರೀಟ್‌ಮೆಂಟ್ ಪ್ಲಾಂಟ್, ಕಾಂಪೋಸ್ಟ್ ಉತ್ಪಾದನೆ, ರೆವಿನ್ಯೂ ಸಂಗ್ರಹಣೆ, ಪೈಪ್‌ಲೈನ್ ಮೂಲಕ ಅನಿಲ ಸರಬರಾಜು, ಅಭಿವೃದ್ಧಿ ಕಾಮಗಾರಿಗೆ ಬಳಸುತ್ತಿರುವ ಆಧುನಿಕ ವಿಧಾನಗಳ ಬಗ್ಗೆಯೂ ನಾವು ವೀಕ್ಷಿಸಿ ಮಾಹಿತಿ ಸಂಗ್ರಹಿಸುತ್ತೇವೆ ಎಂದು ಅವರು ತಿಳಿಸಿದರು.

ಕುಡಿಯುವ ನೀರು ಸರಬರಾಜು, ಒಳ ಚರಂಡಿ, ಮಳೆ ನೀರು ಚರಂಡಿ ವ್ಯವಸ್ಥೆ, ರಸ್ತೆ, ಸರ್ಕಲ್ ಅಭಿವೃದ್ಧಿ ಮತ್ತು ನಿರ್ವಹಣೆ, ಸಾರ್ವಜನಿಕ ಶೌಚಾಲಯಗಳು, ಕೈಗಾರಿಕಾ ಅನಿಲ ರೂಪದ ತ್ಯಾಜ್ಯ ವಿಲೇವಾರಿ ಕ್ರಮದ ಬಗ್ಗೆ ತಿಳಿದುಕೊಂಡು ಪ್ರತೀ ವರ್ಷ ಸ್ವಚ್ಛ ಸರ್ವೇಕ್ಷಣೆಯಲ್ಲಿ ಪ್ರಶಸ್ತಿ ಗಳಿಸಲು ಪೂರಕ ಅಂಶಗಳೇನು ಎಂಬುದನ್ನು ಪ್ರವಾಸದಲ್ಲಿ ತಿಳಿದುಕೊಂಡು ಬಂದು ಮೈಸೂರು ನಗರದಲ್ಲೂ ಪ್ರಯೋಗ ಮಾಡಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಮೈಸೂರು-ತಿ.ನರಸೀಪುರ ರಸ್ತೆಯಲ್ಲಿ ಅಪಘಾತ ತಡೆಗೆ ಕೊನೆಗೂ ಎಚ್ಚೆತ್ತ ಅಧಿಕಾರಿಗಳು!

ರಸ್ತೆ ಇಕ್ಕೆಲಗಳಲ್ಲಿ ಚಾಚಿದ್ದ ಅಪಾಯಕಾರಿ ರೆಂಬೆ, ಗಿಡಗಂಟಿ ತೆರವು; ಹಂಪ್ಸ್ ನಿರ್ಮಾಣ

ಮೈಸೂರು, ಜೂ.19(ಬಿಎಲ್‌ಯು)– ಯಾವುದಾದರೂ ಅವ್ಯವಸ್ಥೆ ಇದ್ದರೆ ಅದು ಸರಿಯಾಗಬೇಕಾದರೆ ಅಮಾಯಕರ ಹೆಣಗಳು ಬೀಳಬೇಕೇ? ಆಗ ನಮ್ಮ ಅಧಿಕಾರಿ ವರ್ಗ ಎಚ್ಚೆತ್ತುಕೊಳ್ಳುತ್ತದೆ.

ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿ ಸರಣಿ ಅಪಘಾತದ ನಂತರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಈಗ ಎಚ್ಚೆತ್ತುಕೊಂಡಿದ್ದಾರೆ. ಮೈಸೂರು ಹಾಗೂ ತಿ.ನರಸೀಪುರ ರಸ್ತೆಯಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಲೇ ಇವೆ.

ಇದಕ್ಕೆ ಕಾರಣ ತಿರುವುಗಳಲ್ಲಿ ರಸ್ತೆ ಇಕ್ಕೆಲಗಳಲ್ಲಿ ಅಡ್ಡವಾಗಿದ್ದ ಮರಗಳ ಕೊಂಬೆ, ರೆಂಬೆಗಳು ಹಾಗೂ ಗಿಡ–ಗಂಟಿಗಳು. ಈ ಕಡೆಯಿಂದ ಹೋಗುವವರಿಗೆ ಹಾಗೂ ಆ ಕಡೆಯಿಂದ ಬರುವವರಿಗೆ ಮರಗಳ ರೆಂಬೆ, ಕೊಂಬೆ ಮತ್ತು ಗಿಡಗಳು ಮರೆಯಾಗಿ ಎದುರಿನಿಂದ ಬರುವ ವಾಹನಗಳು ಕಾಣಿಸದೆ ಸಹಜವಾಗಿಯೇ ಅಪಘಾತಗಳು ಸಂಭವಿಸುತ್ತಲೇ ಇವೆ.



ಜೊತೆಗೆ ಕಡಿದಾದ ಅಪಘಾತ ವಲಯಗಳಲ್ಲಿ ಅಪಘಾತ ತಪ್ಪಿಸಲು ವೈಜ್ಞಾನಿಕವಾದ ರಸ್ತೆ ಹಂಪ್ಸ್ ನಿರ್ಮಿಸಲಾಗುತ್ತಿದೆ. ಇಂತಹ ಕಡಿದಾದ ಸ್ಥಳದಲ್ಲಿ ವೇಗವಾಗಿ ಬರುವ ಹಲವು ವಾಹನಗಳು ಅಪಘಾತಕ್ಕೀಡಾಗಿವೆ. ಮೈಸೂರಿನ ದುದ್ದಗೆರೆ ಬಳಿಯಂತೂ ಅತ್ಯಧಿಕ ಮರದ ರೆಂಬೆಗಳು ಮರೆಯಾಗಿವೆ. ಇಳಿಜಾರು ಇರುವ ಕಾರಣ ಎದುರಿನಿಂದ ವೇಗವಾಗಿ ಸಂಚರಿಸುವ ವಾಹನಗಳಿಂದ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿವೆ. ಈ ಅವ್ಯವಸ್ಥೆ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸ್ಥಳೀಯರು ದೂರು ನೀಡಿದ್ದರು. ಮರ, ಗಿಡಗಳು ಹಾಗೂ ರಸ್ತೆ ಹಂಪ್ಸ್ ಇಲ್ಲದ ಕಾರಣ ಅಪಘಾತ ಸಂಭವಿಸುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಈಗ ಅಪಘಾತಗಳಿಗೆ ಬ್ರೇಕ್ ಹಾಕಲು ಮುಂದಾಗಿರುವ ಅಧಿಕಾರಿಗಳು ರಸ್ತೆಗೆ ಅಡ್ಡವಾಗಿದ್ದ ಮರಗಳ ಕೊಂಬೆ ಹಾಗೂ ಗಿಡಗಳನ್ನು ತೆರವು ಮಾಡುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಅಪಘಾತ ವಲಯ ಎಂದು ಗುರುತಿಸಿರುವ ಇಳಿಜಾರಿನಲ್ಲಿ ರಸ್ತೆ ಹಂಪ್ಸ್‌ಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಂಡರಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

ಇಂಡವಾಳು ಬಳಿ ಕಾರು-ಬೈಕ್ ಅಪಘಾತ: ಯುವಕ ಸಾವು

ಮೈಸೂರು,ಜೂ.19(ಬಿಎಲ್‌ಯು)–ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ



ಅಪಘಾತದಲ್ಲಿ ಯುವಕ ಮೃತಪಟ್ಟಿರುವ ಘಟನೆ ಮೈಸೂರು–ತಿ.ನರಸೀಪುರ ರಸ್ತೆಯ ಇಂಡವಾಳು ಗ್ರಾಮದ ಬಳಿ ಭಾನುವಾರ ಸಂಜೆ ಸಂಭವಿಸಿದೆ.

ಕೊಳ್ಳೇಗಾಲದ ವಾಸಿ ಲಲಿತ್ ಗುಜರ್ (22) ಮೃತಪಟ್ಟ ಬೈಕ್ ಸವಾರನಾಗಿದ್ದಾನೆ. ಲಲಿತ್ ಗುಜರ್ ಹಾಗೂ ಸಹೋದರ ಪಂಕಜ್ ಗಜರ್ ಸಂಬಂಧಿಕರ ಮನೆಗಾಗಿ ಕೊಳ್ಳೇಗಾಲದಿಂದ ಮೈಸೂರಿಗೆ ಬರುತ್ತಿದ್ದರು. ಇಂಡವಾಳು ಬಳಿ ಕಾರು ಹಾಗೂ ಬೈಕ್ ನಡುವೆ ಡಿಕ್ಕಿಯಾಗಿದೆ. ಗಂಭೀರವಾಗಿ ಗಾಯಗೊಂಡ ಇಬ್ಬರನ್ನು ತಿ.ನರಸೀಪುರ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ ಲಲಿತ್ ಗುಜರ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಪಂಕಜ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ತಿ.ನರಸೀಪುರ ಪೊಲೀಸ್ ಸ್ಟೇಷನ್‌ನಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಿನ ಜೈಗುರುದೇವ್ ಹಿರಿಯ ನಾಗರಿಕರ ಸತ್ಸಂಗದ ವತಿಯಿಂದ ಪುಟ್ಟೀರಮ್ಮ ಅಂಗವಿಕಲ ಶಾಲೆಯ ಮಕ್ಕಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಲೇಖನ ಸಾಮಗ್ರಿಗಳನ್ನು ವಿತರಿಸಿದರು. ಈ ವೇಳೆ ಶಾಲೆಯ ಸಿಬ್ಬಂದಿ ಹಾಜರಿದ್ದರು.

ಮನಸ್ಸು, ಆತ್ಮದ ಪ್ರಸನ್ನತೆಯಿಂದ ಆರೋಗ್ಯ ವೃದ್ಧಿ

ಸಂಸ್ಕೃತ ವಿದುಷಿ ಡಾ. ಲೀಲಾಪ್ರಕಾಶ್ ಅಭಿಮತ



ಮೈಸೂರು, ಜೂ.19–ಮನಸ್ಸು ಮತ್ತು ಆತ್ಮದ ಪ್ರಸನ್ನತೆಯಿಂದ ಆರೋಗ್ಯವು ವೃದ್ಧಿಸುವುದರಿಂದ ಅದನ್ನು ಸಾಧಿಸಲು ಆಯುರ್ವೇದ ಮಾರ್ಗದ ಜೀವನಶೈಲಿಯನ್ನು ಅನುಸರಿಸಬೇಕು ಎಂದು ಸಂಸ್ಕೃತ ವಿದುಷಿ ಡಾ.ಲೀಲಾಪ್ರಕಾಶ್ ಹೇಳಿದರು.

ಶತಾಯು ಆಯುರ್ವೇದಿಕ್ ಕ್ಲಿನಿಕ್, ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರ ಹಾಗೂ ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ ಈ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಿಮಿಷಾಂಬ ಬಡಾವಣೆಯ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಆಯೋಜಿಸಲಾದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯನ ಹುಟ್ಟು ಮತ್ತು ಸಾವಿನ ಮಧ್ಯೆ ಬರುವ ಹಿತವಾದ ಆಹಾರ–ವಿಹಾರ, ಆಚಾರ–ವಿಚಾರ ಇವುಗಳ ಬಗ್ಗೆ ಆಯುರ್ವೇದ ಶಾಸ್ತ್ರದಲ್ಲಿ ಮಾಹಿತಿ ಲಭ್ಯವಿದ್ದು, ನಮ್ಮ ಪ್ರಕೃತಿಯಲ್ಲಿರುವ ಗಿಡಮೂಲಿಕೆಗಳನ್ನೇ ಔಷಧವಾಗಿ ಬಳಸುವುದರಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ಆರೋಗ್ಯ ಸಂರಕ್ಷಿಸಿಕೊಳ್ಳಬಹುದು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಮಾತನಾಡಿ, ಹಿರಿಯ ನಾಗರಿಕರಲ್ಲಿ ಆರೋಗ್ಯವು ಕ್ಷೀಣಿಸುವ ಕಡೆಗೆ ಸಾಗುವುದರಿಂದ ವರ್ಷಕ್ಕೊಮ್ಮೆಯಾದರೂ ಆರೋಗ್ಯ ತಪಾಸಣೆ ಅತ್ಯವಶ್ಯಕವಾಗಿದ್ದು, ಇದರೊಂದಿಗೆ ಬದುಕುವ ಜೀವನಶೈಲಿಯಲ್ಲಿಯೂ ಮಾರ್ಪಾಡು ಮಾಡಿಕೊಳ್ಳುವುದರಿಂದ ಆರೋಗ್ಯಯುತ ಜೀವನ ನಡೆಸಬಹುದು ಎಂದರು. ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಎಂ.ಪಿ.ಪ್ರಭುಶಂಕರ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಶತಾಯು ಆಯುರ್ವೇದಿಕ್ ಕ್ಲಿನಿಕ್‌ನ ಡಾ.ಭಾವನಾ, ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ ಅಧ್ಯಕ್ಷ ಸಂತೋಷ್‌ಗೌಡ, ಮುಕ್ತಕ ಸಾಹಿತಿ ಮುತ್ತುಸ್ವಾಮಿ ಇತರರು ಉಪಸ್ಥಿತರಿದ್ದರು.

ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಜೂ.19–ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ಡಿಪ್ಲೋಮಾ ಕೋರ್ಸ್‌ಗಳಿಗೆ 2023–24ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಜ್ಯೂಯಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್ ಹಾಗೂ ಅಪರೆಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ ಕೋರ್ಸ್‌ಗಳಿರುತ್ತವೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ 50,000 ರೂ. ವಿದ್ಯಾರ್ಥಿವೇತನ ಲಭ್ಯವಿದೆ. ಆಸಕ್ತ ವಿದ್ಯಾರ್ಥಿಗಳು ನೇರವಾಗಿ ಸಂಸ್ಥೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ. 0821–2548315, ಮೊ. 9844644937 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.6.2023 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಆರ್ಟ್ ಆಫ್ ಲೀವಿಂಗ್:** ಶ್ರೀ ಶ್ರೀ ಯೋಗ ಶಿಬಿರ, ಸ್ಥಳ: ನಂ. 2870, ವಜ್ರಮುಖಿ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ ಮತ್ತು ಆರ್ಟ್ ಆಫ್ ಲೀವಿಂಗ್ ಆಶ್ರಮ, ಬೆಳಗ್ಗೆ 6ರಿಂದ 7ರವರೆಗೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ಗಣಪತಿ ಹೋಮ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶ್ರೀ ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್:** ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಯೋಗ ನಡಿಗೆ ಆರೋಗ್ಯದೆಡೆಗೆ ಜಾಗೃತಿ ಕಾಲ್ನಡಿಗೆ ಜಾಥಾ ಕಾರ್ಯಕ್ರಮ, ಉದ್ಘಾಟನೆ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯರಾದ ಸಮ್ಮಿ ಅಬ್ಬಾ, ಅರಿಫ್ ಹುಸೇನ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಸಿ.ಅಂತೋಣಿ ಪಾಲ್‌ರಾಜ್, ಸ್ಥಳ: ನಾಯ್ಡುನಗರ ಬಸ್ ನಿಲ್ದಾಣ, ಬೆಳಗ್ಗೆ 10ಕ್ಕೆ.

■ **ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ :** ವಿಶ್ವ ಯೋಗ ದಿನಾಚರಣೆ ಅಂಗವಾಗಿ ಅಂತಾರಾಷ್ಟ್ರೀಯ ಯೋಗ ಶಿಕ್ಷಕರಿಗೆ ವಿಶ್ವಮಾನ್ಯ ಯೋಗರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು: ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಭೂಮಿಪುತ್ರ ರೈತ ಮಿತ್ರ ಸಂಘದ ಅಧ್ಯಕ್ಷ ಚಂದನ್‌ಗೌಡ, ಯೋಗಪ್ರಕಾಶ್, ಎನ್.ಅನಂತ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ :** ಕೃತಜ್ಞತಾ ಸಮಾರಂಭ, ಅಧ್ಯಕ್ಷತೆ : ಡಿಸಿಸಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 3ಕ್ಕೆ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಭಾವಸಾರ್ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೂರೆ, ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಹಾಲ್ ಅಧ್ಯಕ್ಷ ಜಯರಾಮ್‌ರಾವ್ ಲಾಳಿಗೆ, ಸಮಿತಿ ಅಧ್ಯಕ್ಷ ರಾಜೇಶ್ ಕುತ್ನಿಕರ್, ಬಿಜೆಪಿ ಮುಖಂಡ ಸುರೇಶ್‌ಬಾಬು ರಾಶಿಂಕರ್, ಸ್ಥಳ:ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ–ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್. ಚಂದ್ರಶೇಖರ್, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾಂದಬರಿಯಬಾನುಲಿ ಓದು ಪ್ರಸ್ತುತಿ–ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ–ನೇರ ಫೋನ್ ಇನ್ ಕಾರ್ಯಕ್ರಮ, 10.00 ಡಾ.ಸಿ.ಎ.ಶ್ರೀಧರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.00 ವನಿತಾ ವಿಹಾರ, ಲೇಖಕಿ ಹಾಗೂ ಏಕಾಂಗಿ ಪ್ರವಾಸಿ ಮೀರಾಶಂಕರ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಅಬ್ದುಲ್ ರಶೀದ್, 12.30 ದೇವರನಾಮ–ಸಿ.ಎಸ್.ಲಕ್ಷ್ಮಿ, 12.45 ಮೊಬೈಲ್ ಕಳೆದು ಹೋದರೆ ಹುಡುಕುವುದೆಲ್ಲಿ–ಮಾತನಾಡುತ್ತಾರೆ ಡಾ.ಸುಧಾಕರ್ ಎ.ಎಂ., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಸಿ.ವಿಶ್ವನಾಥ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಂ.ಆರ್.ರಾಜಪ್ಪ–ಮೃದಂಗ, 4.00 ಕಥಾ ಕಾಲಕ್ಷೇಪ "ಸೀತಾ ಕಲ್ಯಾಣ" ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ– ಕೃಷಿಯಲ್ಲಿ ಕೀಟ ಮತು ರೋಗಗಳ ನಿರ್ವಹಣೆ ಹಾಗೂ ಸಸ್ಯ ಜನ್ಯ ಪೀಡೆ ನಾಶಕಗಳ ಬಳಕೆ ಕುರಿತು ಡಾ.ಬಿ. ಪಂಪನಗೌಡ ಅವರೊಂದಿಗೆ ಸಂದರ್ಶನ ಸಂದರ್ಶಕರು– ಜಿ.ಶಾಂತಕುಮಾರ್, 9.30 ಮೈಸೂರು ಎ ಚಂದನ್‌ಕುಮಾರ್–ವೇಣುವಾದನ, 10.30 ಗಮಕ ವ್ಯಾಖ್ಯಾನ, ವಾಚನ:– ಎನ್.ಇಂದಿರಾ, ವ್ಯಾಖ್ಯಾನ–ಶಿವಾಜಿ ಜೋಯಿಸ್

ಸ್ಥಳದಲ್ಲೇ ಹಲವಾರು ಪ್ರಕರಣ ಇತ್ಯರ್ಥಪಡಿಸಿದ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ

ಮೂರು ದಿನಗಳಿಂದ ಸಾರ್ವಜನಿಕರಿಂದ ದೂರುಗಳ ಸುರಿಮಳೆ



ಮೈಸೂರಿನ ಜಿಪಂ ಸಭಾಂಗಣದಲ್ಲಿ ಉಪಲೋಕಾಯುಕ್ತರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರಿಂದ ದೂರು ಸ್ವೀಕಾರ ಹಾಗೂ ಪ್ರಕರಣಗಳ ವಿಚಾರಣೆ ಅಭಿಯಾನ ನಡೆಯಿತು.

ಮೈಸೂರು,ಜೂ.19(ಎಂಟಿವೈ)– ಖಾತೆ ಮಾಡಿಕೊಡುವುದು, ಗ್ರಾ.ಪಂ.ಗಳಲ್ಲಿ ತೆರಿಗೆ ಸಂಗ್ರಹ ಮಾಡಲು ಮೀನಮೇಷ, ಸುಳ್ಳು ದೂರು ನೀಡುವ ಮಹಿಳೆಗೆ ತಕ್ಕ ಪಾಠ ಕಲಿಸುವುದು ಸೇರಿದಂತೆ ಕಂದಾಯ ಇಲಾಖೆ ವ್ಯಾಪ್ತಿಗೆ ಒಳಪಡುವ ಹಲವು ಪ್ರಕರಣಗಳನ್ನು ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಸ್ಥಳದಲ್ಲೇ ಇತ್ಯರ್ಥಪಡಿಸುವ ಮೂಲಕ, ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳಿಗೆ ಮಾತಿನ ಚಾಟಿ ಬೀಸುವ ಮೂಲಕ ಎಚ್ಚರಿಕೆ ಸಂದೇಶ ರವಾನಿಸಿದರು.

ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ಸಾರ್ವಜನಿಕರಿಂದ ದೂರು ಸ್ವೀಕಾರ ಹಾಗೂ ಪ್ರಕರಣಗಳ ವಿಚಾರಣೆ ಅಭಿಯಾನದಲ್ಲಿ ಲೋಕಾಯುಕ್ತ ಕಾನೂನು ವ್ಯಾಪ್ತಿಗೆ ಒಳಪಡುವ ಪ್ರಕರಣಗಳನ್ನು ಬಗೆಹರಿಸಿ, ಕೆಲವು ಪ್ರಕರಣಗಳನ್ನು ಕ್ಲೋಸ್ ಮಾಡಿ ಆದೇಶ ಹೊರಡಿಸಿದರು.

ಒಬ್ಬರಿಂದಲೇ 84 ಪ್ರಕರಣ: ಚಿತ್ರದುರ್ಗದ ಪಂಚೆ ಶಿವರುದ್ರಪ್ಪ ಎಂಬುವರು ಮೈಸೂರು ಜಿಲ್ಲೆಯ ವಿವಿಧ ಗ್ರಾ.ಪಂ.ಗಳಲ್ಲಿ ತೆರಿಗೆ ಸಂಗ್ರಹಿಸದಿರುವುದಕ್ಕೆ ಸಂಬಂಧಿಸಿದಂತೆ 156 ಪ್ರಕರಣವನ್ನು ಲೋಕಾಯುಕ್ತರಲ್ಲಿ ದಾಖಲಿಸಿದ್ದು, ಅವುಗಳಲ್ಲಿ 84 ಪ್ರಕರಣಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಿತ್ತು. ಅದರಲ್ಲಿ 15 ಪ್ರಕರಣಗಳನ್ನು ಕ್ಲೋಸ್ ಮಾಡಿಸಿದರು. ಕೆಲ ಪ್ರಕರಣಗಳಲ್ಲಿ ಶೇ.50ರಷ್ಟು ತೆರಿಗೆ ಸಂಗ್ರಹವಾಗಿರುವುದರಿಂದ ಇನ್ನೆರಡು ತಿಂಗಳು ಕಾಲಾವಕಾಶ ನೀಡಲು ಆದೇಶಿಸಿದರು.

ದೂರು ನೀಡಿದ್ದ ಚಿತ್ರದುರ್ಗದ ಪಂಚೆ ಶಿವರುದ್ರಪ್ಪ ಮಾತನಾಡಿ, ಮೈಸೂರು ಜಿಲ್ಲೆಯ ಗ್ರಾಪಂಗಳಲ್ಲಿ ಬಾಕಿ ಇರುವ ತೆರಿಗೆ ವಸೂಲಾತಿಗೆ ಸಂಬಂಧಿಸಿದಂತೆ 156 ದೂರುಗಳನ್ನು ಸಲ್ಲಿಸಿದ್ದೇನೆ. ನಂಜನಗೂಡು ತಾಲೂಕಿನಲ್ಲಿ ಹೆಚ್ಚು ಬಾಕಿ ಇದೆ. ಜಿಲ್ಲೆಯಲ್ಲಿ ಒಟ್ಟು 175.32 ಕೋಟಿ ಬಾಕಿ ಇರುವ ಬಗ್ಗೆ ಲೆಕ್ಕಪರಿಶೋಧಕರು ವರದಿ ನೀಡಿದ್ದಾರೆ. ಈ ಬಗ್ಗೆ ಪಿಡಿಒಗಳು ಲೋಕಾಯುಕ್ತಕ್ಕೆ ಇದು ಬರುವುದಿಲ್ಲ ಎನ್ನುತ್ತಾರೆ. ಸಿಇಒ ಅವರನ್ನು ಭೇಟಿ ಮಾಡಲು ಕಚೇರಿಗೆ ಹೋದರೆ ಸಿಗುವುದಿಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು, ಪ್ರಕರಣ ದಾಖಲಿಸಿರುವ 74 ಕೇಸ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಜಮೆಯಾಗಿರುವ ಪ್ರಕರಣಗಳಲ್ಲಿ ಇನ್ನೆರಡು ತಿಂಗಳಲ್ಲಿ ಉಳಿದ ಮೊತ್ತವನ್ನು ಸಂಗ್ರಹಿಸಿದ ಬಗ್ಗೆ ಮಾಹಿತಿ ಕೊಡಲು ಹೇಳಿ ಮುಕ್ತಾಯ ಮಾಡುತ್ತೇವೆ. ಸಂಪೂರ್ಣ ಬಾಕಿ ಉಳಿಸಿಕೊಂಡಿರುವ ಬಗ್ಗೆ ತಿಂಗಳಲ್ಲಿ 2 ಸಭೆ ನಡೆಸಿ ವಸೂಲಿ ಮಾಡಿರುವ ಬಗ್ಗೆ ವರದಿ ಕೊಡುವುದು. ಲೆಕ್ಕ ಪರಿಶೋಧಕರ ವರದಿಯಂತೆ ಸಂಗ್ರಹವಾಗಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಪರಿಶೀಲಿಸಿ ಬಾಕಿ ಹಣ ಸಂಗ್ರಹಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ಕೊಡುವಂತೆ ಸಿಇಒಗೆ ಆದೇಶ ನೀಡಲಾಗುವುದು. ಲೆಕ್ಕ ಪರಿಶೋಧಕರ ವರದಿಯಂತೆ ಬಾಕಿ ಸಂಗ್ರಹವಾಗಲಿದೆಯೇ ಎಂಬ ವರದಿಯ ಪ್ರತಿಯನ್ನು ನಿಮಗೂ ಕಳುಹಿಸಲಾಗುವುದು. ಅದರಲ್ಲಿ ವ್ಯತ್ಯಾಸ ಇದ್ದಲ್ಲಿ ಪ್ರತ್ಯುತ್ತರ ಕೊಡಲು ಅವಕಾಶವಿದೆ. ಅಲ್ಲಿಯ ತನಕ ಉಳಿದ ಪ್ರಕರಣಗಳ ವಿಚಾರಣೆ ಮುಂದುವರಿಸಲಾಗುವುದೆಂದು ಹೇಳಿ ತೀರ್ಪು ನೀಡಿದರು.

ಸ್ವಯಂ ದೂರು ದಾಖಲು

ಪತ್ರಿಕೆಯೊಂದರಲ್ಲಿ ವಿದ್ಯಾರ್ಥಿಗಳಿಗೆ ಸಾರಿಗೆ ಬಸ್ ವ್ಯವಸ್ಥೆ ಇಲ್ಲದೆ ಪರದಾಡುತ್ತಿರುವ ಸುದ್ದಿ ಕಂಡು ಸ್ವಯಂ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತರು ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ವಿಚಾರಣೆಗೆ ಕರೆದಿದ್ದರು. ಬೋಗಾದಿಯ ನ್ಯಾಯಾಂಗ ಬಡಾವಣೆಯಿಂದ ವಿವಿಧ ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಸಾರಿಗೆ ಬಸ್ ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಈ ವೇಳೆ ಹಾಜರಿದ್ದ ಸಾರಿಗೆ ಸಂಸ್ಥೆಯ ಪ್ರಭಾರ ಡಿಸಿ ಮರೀಗೌಡ, ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ವರದಿಯೊಂದಿಗೆ ಸ್ಪಷ್ಟನೆ ನೀಡಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಬೋಗಾದಿ ಕಡೆಯಿಂದ ಬೆಳಗ್ಗೆ 8ರಿಂದ 9 ಗಂಟೆಯಲ್ಲಿ ಮಿನಿ ಟೆಂಪೋಗಳಲ್ಲಿ ಹೆಚ್ಚು ಜನ ಪ್ರಯಾಣ ಮಾಡುತ್ತಿರುವುದನ್ನು ಗಮನಿಸಿದ್ದೇನೆ. ವಿದ್ಯಾರ್ಥಿಗಳು ಬಾಗಿಲಲ್ಲಿ ನಿಂತುಕೊಂಡು ಪ್ರಯಾಣಿಸುತ್ತಿರುವ ದೃಶ್ಯವನ್ನು ಗಮನಿಸಿದ್ದೇನೆ. ಶಾಲಾ–ಕಾಲೇಜು ವಿದ್ಯಾರ್ಥಿಗಳ ಸಂಚಾರಕ್ಕೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಬೇಕೆಂದು ಸೂಚನೆ ನೀಡಿದರು.

ಇದಕ್ಕೆ ಸ್ಪಂದಿಸಿದ ಉಪಲೋಕಾಯುಕ್ತ ಫಣೀಂದ್ರ ಅವರು, ಶಾಲಾ ಕಾಲೇಜುಗಳಿಗೆ ತೆರಳಲು ನಿಗದಿತ ಸಮಯಕ್ಕೆ ಬಸ್‌ಗಳಿಲ್ಲ ಎಂಬ ವಿದ್ಯಾರ್ಥಿಗಳ ಮನವಿ ಮೇರೆಗೆ ಸ್ವಯಂ ದೂರು ದಾಖಲು ಮಾಡಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು. ಮುಂದೆ ಇಂತಹ ದೂರುಗಳು ಬಾರದಂತೆ ನೋಡಿಕೊಳ್ಳಿ ಇಂತಹ ವಿಷಯಗಳಿಗೆ ಲೋಕಾಯುಕ್ತ ಸಂಸ್ಥೆಗೆ ದೂರುಗಳು ಬರಬಾರದು. ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸುವುದರೊಂದಿಗೆ ಹೆಚ್ಚುವರಿ ಬಸ್ ಖರೀದಿಗೆ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಲಾಗುತ್ತದೆ ಎಂದರು.

ಕಡತವೇ ನಾಪತ್ತೆ

ಪೋಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತವೇ ನಾಪತ್ತೆಯಾಗಿದ್ದರ ಬಗ್ಗೆ ಸಂಬಂಧಿಸಿದ ತಹಸೀಲ್ದಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ತಿ.ನರಸೀಪುರ ತಾಲೂಕಿನ ಉಕ್ಕಲಗೆರೆಯ ಗೌರಿಶಂಕರ್ ಎಂಬವರು ತಮ್ಮ ಜಮೀನಿಗೆ ಅಳತೆ ಮಾಡಿ ಏಕವ್ಯಕ್ತಿ ಪೋಡಿ ಮಾಡುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಜಮೀನಿನ ಸರ್ವೆ ನಂಬರ್ ದಾಖಲೆಯೇ ಕಳ್ಳತನವೋ ಅಥವಾ ನಾಪತ್ತೆಯಾಗಿದೆಯೇ ಗೊತ್ತಿಲ್ಲ ಎಂದರು.

ಇದಕ್ಕೆ ಕಿಡಿಕಾರಿದ ಫಣೀಂದ್ರ ಅವರು ಕಳ್ಳತನ ಹೇಗಾಯ್ತು, ನೀವು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದೀರಾ ಎಂದು ಪ್ರಶ್ನಿಸಿದರು. ಬಳಿಕ, ಡಿಸಿ ಅವರು ಹೊಸದಾಗಿ ಕಡತ ತಯಾರಿಸಿ ಎಡಿಎಲ್‌ಆರ್ ಅವರಿಂದ ವರದಿ ಪಡೆದು ಪೋಡಿ ಮಾಡಿಕೊಡಬೇಕು. ಹೊಸ ಕಡತ ತಯಾರಿಕೆಗೆ ಅನುಮತಿ ನೀಡಿ ಕಳುಹಿಸುತ್ತೇವೆಂದು ಹೇಳುವ ಮೂಲಕ ಇತ್ಯರ್ಥಪಡಿಸಿದರು. ಇದೇ ರೀತಿ ಹಲವಾರು ದೂರಗಳ ವಿಚಾರಣೆ ನಡೆಸಿ ಕೆಲವನ್ನು ಮುಕ್ತಾಯಗೊಳಿಸಿದರೆ, ಹಲವನ್ನು ಮುಂದೂಡಿದರು.

ಈ ಸಂಬಂಧ ಎಲ್ಲ ಪಿಡಿಒಗಳು ಕೇಳುವ ಮಾಹಿತಿ ಕೊಡಬೇಕು. ಲೋಕಾಯುಕ್ತ ವ್ಯಾಪ್ತಿಗೆ ಬರುತ್ತದೆಯೇ, ಇಲ್ಲವೇ ಎಂಬ ಬಗ್ಗೆ ನೋಟಿಸ್ ಜಾರಿಗೊಳಿಸಿದ ಮೇಲೆ ಗೊತ್ತಾಗುತ್ತದೆ. ಮೊದಲು ನೋಟಿಸ್ ಕಳುಹಿಸೋಣ ಎಂದು ಹೇಳುವ ಮೂಲಕ ತಮ್ಮ ಅಧಿಕಾರವನ್ನು ಸೂಕ್ತ ಸಮಯದಲ್ಲಿ ಬಳಸುತ್ತೇವೆಂದು ಚಾಟಿ ಬೀಸಿದರು.

ತನಿಖೆಗೆ ಸೂಚನೆ: ನಕಲಿ ದಾಖಲೆಗಳನ್ನು ಸೃಷ್ಟಿಸಿ ಹೆಚ್ಚಿನ ಭೂಮಿಯನ್ನು ಖಾತೆ ಮಾಡಿಕೊಟ್ಟಿರುವ ಪ್ರಕರಣದ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಂದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಕೆ.ಆರ್.ನಗರದ ಆರ್.ವೇಣುಗೋಪಾಲ್ ಅವರು 12x33 ಅಳತೆಯ ನಿವೇಶನದ ಬದಲಿಗೆ 12x60 ಸೃಷ್ಟಿಸಿ ಇಬ್ಬರಿಗೆ ಖಾತೆ ಮಾಡಲಾಗಿದೆ. ಈ ಬಗ್ಗೆ ದೂರು ಕೊಟ್ಟಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ತಾ.ಪಂ ಮುಖ್ಯಾಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಉಪಲೋಕಾಯುಕ್ತರಿಗೆ ಅಧಿಕಾರಿಗಳು ನೀಡಿದ ಮಾಹಿತಿ ಸಮರ್ಪಕವಾಗಿರಲಿಲ್ಲ. ಯಾವುದೇ ದಾಖಲೆಗಳನ್ನು ಪರಿಶೀಲಿಸಿ ದಾನಪತ್ರದ ಆಧಾರದ ಮೇಲೆ ಹೆಚ್ಚುವರಿ ಭೂಮಿ ನೋಂದಣಿಗೆ ಖಾತೆ ಮಾಡಿದನ್ನು ಪ್ರಶ್ನಿಸಿದಕ್ಕೆ ನಿಖರ ಉತ್ತರ ಇಲ್ಲದಿರುವುದು ಕಂಡುಬಂದಿತು. ಹೀಗಾಗಿ, ಖಾತೆ ರದ್ದುಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸುವಂತೆ ದೂರುದಾರರಿಗೆ ಸೂಚಿಸುವ ಜತೆಗೆ, ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಯೋಜನಾ ನಿರ್ದೇಶಕರಿಗೆ ಉಪಲೋಕಾಯುಕ್ತರು ಸೂಚಿಸಿದರು.

ನಿಮ್ಮ ವ್ಯಾಪ್ತಿಗೆ ಬರದ ಕೆಲಸ: ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಿಂಬರಹ ನೀಡಿ ಕಳುಹಿಸದೆ ಮುಚ್ಚಳಿಕೆ ಬರೆಸಿಕೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಜರ್‌ಬಾದ್ ಠಾಣೆ ಎಎಸ್‌ಐ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ರಾಜಶೇಖರ್ ಎಂಬುವರು ಠಾಣೆಯಲ್ಲಿ ಸುಳ್ಳು ಹೇಳಿಕೆಗೆ ಬಲವಂತವಾಗಿ ಸಹಿ ಹಾಕಿಸಿಕೊಂಡಿದ್ದಾರೆ ಎಂದು ದೂರು ನೀಡಿದ್ದರು. ಈ ದೂರಿನ ವಿಚಾರಣೆ ವೇಳೆ ನಡೆಸಿದಾಗ ಎಎಸ್‌ಐ ಅವರು ಹಣಕಾಸಿನ ವಿಚಾರದಲ್ಲಿ ಸೆಟ್ಲ್‌ಮೆಂಟ್ ಮಾಡಿಕೊಡುವಂತೆ ಇಬ್ಬರು ಹೇಳಿದ್ದರು. ಸಮಯ ಕೊಟ್ಟು ಇಬ್ಬರಿಂದಲೂ ಹೇಳಿಕೆ ದಾಖಲಿಸಿದ್ದೇವೆ. ನಾವು ಹೇಳಿಕೆ ನೀಡುವಂತೆ ಯಾರಿಗೂ ಒತ್ತಡ ಹೇರಿಲ್ಲ ಎಂದರು.

ಇದಕ್ಕೆ ಆಕ್ಷೇಪಿಸಿದ ಉಪಲೋಕಾಯುಕ್ತರು ನಿಮ್ಮ ವ್ಯಾಪ್ತಿಗೆ ಬರದ ಪ್ರಕರಣ, ನೀವು ಹಿಂಬರಹ ಕೊಡುವ ಬದಲಿಗೆ ಹೇಳಿಕೆ ಪಡೆದಿದ್ದು ಸರಿಯಲ್ಲ. ಅಧಿಕಾರ ಇಲ್ಲದೆ ಇದ್ದರೂ ಹೇಳಿಕೆ ಪಡೆದಿದ್ದು ಯಾಕೆ ಎಂದು ಬಿಸಿ ಮುಟ್ಟಿಸಿದರು. ವ್ಯಾಪ್ತಿಗೆ ಬರದ ಕೆಲಸ ಮಾಡಿ, ಸಿಲುಕಿಕೊಳ್ಳುತ್ತೀರಾ. ಠಾಣೆಯಲ್ಲಿ ಸೆಟಲ್ ಮಾಡುವುದಕ್ಕೆ ಅಧಿಕಾರ ಯಾರು ಕೊಟ್ಟರು. ನ್ಯಾಯಾಲಯಕ್ಕೆ ಹೋಗುವಂತೆ ಹೇಳಬೇಕಾಗಿತ್ತು ಎಂದು ಕಿಡಿಕಾರಿದರು.

ಪರಿಶೀಲನೆ ಮಾಡಿ: ದಾಖಲೆಗಳ ಕೊರತೆ ನೆಪದಲ್ಲಿ ಖಾತೆ ಬದಲಾವಣೆ ಸೇರಿದಂತೆ ಇನ್ನಿತರ ಪ್ರಕರಣಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳ ಬಗ್ಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದರು. ಲಕ್ಷ್ಮೀಕೃಷ್ಣ ಎಂಬವರು ವಲಯ ಕಚೇರಿಯಲ್ಲಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರೂ ಖಾತೆ ಮಾಡಿರಲಿಲ್ಲ. ಕೆಲವು ದಾಖಲೆಗಳನ್ನು ಒದಗಿಸುವಂತೆ ಹೇಳಿದ ಬಳಿಕ ಕೊಡಲಾಗಿದೆ. ಲೋಕಾಯುಕ್ತಕ್ಕೆ ದೂರು ನೀಡಿದ ಮೇಲೆ ಖಾತೆ ಮಾಡಿಕೊಡಲಾಗಿದೆ. ಆದರೆ, ಕೆಲವು ದಾಖಲೆ ಇಲ್ಲವೆಂದು ಹೇಳಿ ವಿಳಂಬ ಮಾಡುವ ಜತೆಗೆ ಮಧ್ಯವರ್ತಿಗಳ ಮೂಲಕ ಹಣಕ್ಕೆ ಬೇಡಿಕೆ ಇಡಲು ಕಾರಣವಾಗಿದೆ. ಹಾಗಾಗಿ, ಹಳೆಯ ಅರ್ಜಿಗಳು ಎಷ್ಟು ಇವೆ, ಇತ್ಯರ್ಥಪಡಿಸದೆ ಉಳಿಸಿರುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಬೇಡಿಕೆ ಇಟ್ಟು ಹಣ ವಸೂಲಿಗೆ ದಾರಿ ಮಾಡಿಕೊಟ್ಟಂತಾಗಲಿದೆ. ಕೂಡಲೇ ಒಮ್ಮೆ ಎಲ್ಲಾ ಬಾಕಿ ಅರ್ಜಿಗಳನ್ನು ಪರಿಶೀಲಿಸಬೇಕು ಎಂದು ಹೇಳಿದಕ್ಕೆ ಒಪ್ಪಿಗೆ ಸೂಚಿಸಿದರು.

ಲೋಕಾಯುಕ್ತ ಉಪ ನಿಬಂಧಕ ಚನ್ನಕೇಶವ ರೆಡ್ಡಿ, ಅಪರ ನಿಬಂಧಕ ಬಿ.ಶಿವಕುಮಾರ್, ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು, ಎಸ್‌ಪಿ ಸೀಮಾ ಲಾಟ್ಕರ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಡಿಸಿಪಿ ಎಂ.ಮುತ್ತುರಾಜ್ ಇನ್ನಿತರರು ಹಾಜರಿದ್ದರು.

ಪೊಲೀಸ್ ಅಧಿಕಾರಿಯಿಂದ ಮಹಿಳೆ ವಿರುದ್ಧ ದೂರು

ಅಕ್ರಮ ಚಟುವಟಿಕೆಯಲ್ಲಿ ಸಿಕ್ಕಿ ಬಿದ್ದ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮೈಸೂರು ತಾಲೂಕಿನ ಎಂ.ಸಿ.ಹುಂಡಿಯ ಸರ್ವಮಂಗಳ ರೇವಣ್ಣ ಎಂಬುವರು ಮಹಿಳಾ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ವಿರುದ್ಧ ದೂರು ನೀಡಿದ್ದರು.

ಇಂದಿನ ವಿಚಾರಣೆಯಲ್ಲಿ ದೂರುದಾರರಾದ ಸರ್ವಮಂಗಳ ಗೈರಾಗಿದ್ದರು. ಆದರೆ, ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಎಂದು ದೂರಲಾಗಿದ್ದ ಸಾಮಾಜಿಕ ಕಾರ್ಯಕರ್ತೆ ಗೀತಾ ಗಣೇಶ್ ಹಾಜರಾಗಿ, ನಾನು ಮಹಿಳಾ ಪಿಎಸ್‌ಐ ಅಲ್ಲ ಎಂದು ಸ್ಪಷ್ಟನೆ ನೀಡಿದರು. ಸರ್ವಮಂಗಳ ಎಂಬಾಕೆ 50 ದೂರುಗಳನ್ನು ನೀಡಿದ್ದು, ಸುಮ್ಮನೆ ತೊಂದರೆ ಕೊಡುತ್ತಿದ್ದಾರೆಂದು ಉಪ ಲೋಕಾಯುಕ್ತರ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಕೆ.ಎನ್.ಫಣೀಂದ್ರ ಅವರು ಮೈಸೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಗೀತಾ ಗಣೇಶ್ ಎಂಬ ಮಹಿಳಾ ಪಿಎಸ್‌ಐ ಇರುವ ಬಗ್ಗೆ ಖಾತರಿಪಡಿಸುವಂತೆ ಹೇಳಿದರು.

ಈ ಇಬ್ಬರೂ ಅಧಿಕಾರಿಗಳು ಮಾಹಿತಿ ಕಲೆ ಹಾಕಿ ನಮ್ಮಲ್ಲಿ ಗೀತಾ ಗಣೇಶ್ ಎಂಬ ಅಧಿಕಾರಿಯೇ ಇಲ್ಲವೆಂದು ಹೇಳಿದಾಗ ಪ್ರಕರಣ ಮುಕ್ತಾಯಗೊಳಿಸಿದಲ್ಲದೆ, ಸರ್ವಮಂಗಳ ರೇವಣ್ಣ ನೀಡಿರುವ ದೂರುಗಳ ಮಾಹಿತಿ ಕಲೆ ಹಾಕಿ ತನಿಖೆ ನಡೆಸಿ ವರದಿ ಕೊಡುವಂತೆ ಲೋಕಾಯುಕ್ತ ಉಪ ನಿಬಂಧಕರಿಗೆ ಸೂಚಿಸಿದರು. ನೋಟಿಸ್ ನೀಡಿದ್ದರೂ ವಿಚಾರಣೆಗೆ ಗೈರು ಹಾಜರಾಗಿದ್ದ ನಿಲಸೋಗೆ ಪಿಡಿಒಗೆ ಶೋಕಾಸ್ ನೋಟಿಸ್ ನೀಡಲು ಉಪಲೋಕಾಯುಕ್ತ ಫಣೀಂದ್ರ ಸೂಚಿಸಿದರು.

ಕಾಲೇಜು ಪ್ರಾಂಶುಪಾಲರು, 13 ಸಹೋದ್ಯೋಗಿಗಳ ವಿರುದ್ಧ ದೂರು

ಮೈಸೂರು,ಜೂ.19(ಎಂಟಿವೈ)–ಮೈಸೂರಿನ ಪಾರಂಪರಿಕ ಕಾಲೇಜುಗಳಲ್ಲಿ ಒಂದಾದ ಮಹಾರಾಜ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರೊಬ್ಬರು ಕಾಲೇಜಿನ ಪ್ರಾಂಶುಪಾಲರು ಸೇರಿದಂತೆ ಒಟ್ಟು 13 ಸಹೋದ್ಯೋಗಿಗಳ ವಿರುದ್ಧ ಉಪಲೋಕಾಯುಕ್ತರಿಗೆ ದೂರು ನೀಡಿದ್ದು, ದೂರಿನ ಸಾರಾಂಶ ಅರಿತ ಉಪಲೋಕಾಯುಕ್ತರು ಶಿಕ್ಷಣ ಸಂಸ್ಥೆಯಲ್ಲಿ ಇಂತಹ ಬೆಳವಣಿಗೆ ಸರಿಯಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದ ಘಟನೆ ನಡೆಯಿತು.

ಜಿ.ಪಂ ಸಭಾಂಗಣದಲ್ಲಿ ಸೋಮವಾರ ಬೆಳಗ್ಗೆ ಉಪಲೋಕಾಯುಕ್ತ ಫಣೀಂದ್ರ ಅವರು ನಡೆಸಿದ ಪ್ರಕರಣಗಳ ವಿಚಾರಣೆಯಲ್ಲಿ ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕ ಮಹೇಶ್ ಎಂಬುವರು ನೀಡಿದ್ದ ದೂರನ್ನು ಪರಿಶೀಲನೆಗೆ ಕೈಗೆತ್ತಿಕೊಂಡರು. ಈ ವೇಳೆ ಕಿರುಕುಳದ ಆರೋಪ ಮಾಡಿದ ಮಹೇಶ್ ಅವರ ಮಾತಿನಿಂದ ಸಿಟ್ಟಾದ ಉಪಲೋಕಾಯುಕ್ತರು ಇಂತಹ ಸಣ್ಣಮಟ್ಟ ವಿಷಯವನ್ನು ನಿಮ್ಮಲ್ಲಿಯೇ ಬಗೆಹರಿಸಿಕೊಳ್ಳಬೇಕು. ಮನೆಯೊಳಗಿನ ಜಗಳವನ್ನು ಬೀದಿ ರಂಪ ಮಾಡಬಾರದು. ಶಿಕ್ಷಣ ಸಂಸ್ಥೆಯಲ್ಲಿ ಇಂತಹ ಘಟನೆ ಸಹಿಸುವುದಿಲ್ಲ. ಇದರಿಂದ ಪಾಠ ಹೇಗೆ ಮಾಡುತ್ತೀರಿ ಎಂದು ಪ್ರಶ್ನಿಸಿ ಅಸಮಾಧಾನ ವ್ಯಕ್ತಪಡಿಸಿದರು.

ದೂರಿನಲ್ಲಿ ಉಲ್ಲೇಖಿಸಲಾಗಿದ್ದ ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿದ್ದರಾಜು ಸೇರಿದಂತೆ ವಿವಿಧ ವಿಭಾಗಗಳ ಉಪನ್ಯಾಸಕರು, ಇಬ್ಬರು ಮಹಿಳಾ ಕ್ಲರ್ಕ್ ಸೇರಿದಂತೆ ಒಟ್ಟು 13 ಮಂದಿ ಉಪಲೋಕಾಯುಕ್ತರ ಮುಂದೆ ಹಾಜರಾದರು. ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ಸಹದೇವ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರ ವಿರುದ್ಧವೂ ದೂರು ನೀಡಿದ್ದರಿಂದ ಇಂದು ನಡೆದ ವಿಚಾರಣೆ ವೇಳೆ ಹಾಜರಾಗಿದ್ದರು. ಪ್ರಾಂಶುಪಾಲ ಸಿದ್ದರಾಜು ಅವರು ಉಪನ್ಯಾಸಕ ಮಹೇಶ್ ನೀಡಿರುವ ದೂರಿನಲ್ಲಿ ಉಲ್ಲೇಖಿಸಿರುವ ಅಂಶ ಸತ್ಯಕ್ಕೆ ದೂರವಾಗಿದೆ. ಸುಳ್ಳು ದೂರನ್ನೇ ತಮ್ಮ ಸೇವಾ ಅವಧಿಯುದ್ದಕ್ಕೂ ನೀಡುತ್ತಾ ಬಂದಿದ್ದಾರೆ ಎಂದು ಪ್ರತಿಪಾದಿಸಿದರು.

ಪ್ರಕರಣದ ತಿರುಳು ಮನಗಂಡ ಉಪಲೋಕಾಯುಕ್ತರು ಈ ಪ್ರಕರಣದಿಂದ ಇನ್ಸ್‌ಪೆಕ್ಟರ್ ಸಹದೇವ ಅವರನ್ನು ವಿಮುಕ್ತಗೊಳಿಸಿ, ಪ್ರಕರಣದ ಕೂಲಂಕಷ ವಿಚಾರಣೆಗೆ ಬೆಂಗಳೂರಿಗೆ ಬರುವಂತೆ ಸೂಚಿಸಿದರು. ಒಂದು ವೇಳೆ ಸುಳ್ಳು ದೂರು ನೀಡಿದ್ದರೆ, 6 ತಿಂಗಳು ಜೈಲು ಶಿಕ್ಷೆಗೆ ಗುರಿಪಡಿಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಷ್ಠಿತ ಕಾಲೇಜಿಗೆ ಕಳಂಕವೇ: ಮಹಾರಾಜ ಪದವಿ ಪೂರ್ವ ಕಾಲೇಜು ಪ್ರತಿಷ್ಠಿತ ಕಾಲೇಜಾಗಿದೆ. ಇಂತಹ ಕಾಲೇಜಿನಲ್ಲಿ, ಅದರಲ್ಲೂ ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲೇ ದೂರು–ಪ್ರತಿದೂರು ಪ್ರಕರಣ ಕಾಲೇಜಿಗೆ ಮುಜುಗರವನ್ನುಂಟು ಮಾಡುವಂತಾಗಿದೆ.

ಉಪನ್ಯಾಸಕನ ವಿರುದ್ಧವೂ ಹಲವು ದೂರು: 2009ರ ನವೆಂಬರ್‌ನಲ್ಲಿ ಸೇವೆಗೆ ಸೇರಿದ ಮಹೇಶ್, ಸ್ವ ಇಚ್ಛೆಯಿಂದ 2012ರ ಫೆ.26ರಂದು ಕೆಲಸಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಜು.3, 2012ರಲ್ಲಿ ರಾಜೀನಾಮೆ ಹಿಂಪಡೆದು ಕೆಲಸಕ್ಕೆ ಹಾಜರಾಗಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಮಹೇಶ್ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ. 4 ದಿನ ಶಿಕ್ಷೆ ಅನುಭವಿಸಿದ್ದಾರೆ. ದುರ್ನಡತೆ ಕಾರಣದಿಂದ ಅಮಾನತು ಶಿಕ್ಷೆಗೂ ಗುರಿಯಾಗಿದ್ದಾರೆ. ಶಿಸ್ತು ಕ್ರಮ ಬಾಕಿ ಇರಿಸಿ ಕೊಪ್ಪಳಕ್ಕೆ ವರ್ಗಾವಣೆ ಮಾಡಲಾಗಿತ್ತು. ಬಳಿಕ ಸಂತೆಬಾಚಳ್ಳಿಯಲ್ಲಿ ಕೆಲಸ ಮಾಡುತ್ತಿದ್ದ ಮಹೇಶ್ ಅವರು ಅಲ್ಲಿಯೂ ಸಿಬ್ಬಂದಿ ವಿರುದ್ಧ ದೂರು ನೀಡಿದ್ದರು. 2021ರಲ್ಲಿ ಮೈಸೂರಿನ ಮಹಾರಾಜ ಪದವಿ ಕಾಲೇಜಿಗೆ ವರ್ಗಾವಣೆಯಾಗಿದ್ದು, ಇದೀಗ 13 ಮಂದಿ ವಿರುದ್ಧ ದೂರು ನೀಡಿದ್ದಾರೆ.

ದೂರಿನಲ್ಲಿ ಏನಿದೆ: ಮಹಿಳಾ ಸಹೋದ್ಯೋಗಿಗಳು ನನ್ನೊಂದಿಗೆ ಮಾತನಾಡುವುದಿಲ್ಲ. ಇಬ್ಬರು ಮಹಿಳಾ ಸಿಬ್ಬಂದಿ ಪೀಡಿಸುತ್ತಾರೆ. ಕೆಲವರು ಪ್ರಾರ್ಥನೆಗೆ ಬರುವುದಿಲ್ಲ. 5 ನಿಮಿಷ ತಡವಾಗಿ ಬಂದರೂ ಕ್ರಮ ಕೈಗೊಳ್ಳುವುದಿಲ್ಲ ಎಂದು ದೂರಲಾಗಿದೆ.

ಆರ್.ಟಿ.ನಗರಕ್ಕೆ ವಿದ್ಯುತ್, ಕುಡಿಯುವ ನೀರು ಕಲ್ಪಿಸಲು ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ಜು.17ರ ಗಡುವು



ಮೈಸೂರು, ಜೂ.19(ಬಿಎಲ್‌ಯು)– ಮೈಸೂರಿನ ಆರ್.ಟಿ.ನಗರಕ್ಕೆ ಜುಲೈ 17ರೊಳಗೆ ಸಮರ್ಪಕ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಸರಬರಾಜು ಮಾಡುವಂತೆ ಸಂಸದ ಪ್ರತಾಪ್ ಸಿಂಹ ಚೆಸ್ಕಾಂ ಹಾಗೂ ಮುಡಾ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಆರ್.ಟಿ.ನಗರ ಬಡಾವಣೆಗೆ ವಿದ್ಯುತ್ ಹಾಗೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಸಂಬಂಧ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಚೆಸ್ಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಆರ್.ಟಿ.ನಗರ ಬಡಾವಣೆ ನಿರ್ಮಾಣವಾಗಿ 15 ವರ್ಷವಾಗಿದೆ. ಆದರೆ ಈ ತನಕ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಕುಡಿಯುವ ನೀರಿನ ಸರಬರಾಜು ಕೂಡ ಇಲ್ಲ. ಇದರಿಂದ ಅಲ್ಲಿನ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಮತ ಕೊಟ್ಟ ಜನರು ನನ್ನ ಕೇಳುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಚೆಸ್ಕಾಂ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.


ಶೀಘ್ರದಲ್ಲೇ ಆರ್.ಟಿ.ನಗರ ಬಡಾವಣೆಗೆ ನಾನೇ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ. ಅಷ್ಟರಲ್ಲಿ ಅಂದರೆ ಜುಲೈ 17ರೊಳಗೆ ಕುಡಿಯುವ ನೀರು ಸರಬರಾಜು ಮಾಡಲು, ವಿದ್ಯುತ್ ಸಂಪರ್ಕ ಕಲ್ಪಿಸಲು ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಿ ಎಂದು ಪ್ರತಾಪ್ ಸಿಂಹ ತಾಕೀತು ಮಾಡಿದರು.

ಆರ್.ಟಿ.ನಗರದಲ್ಲಿ ವಿದ್ಯುತ್ ದೀಪಗಳಿಲ್ಲದೆ ಅಪರಾಧ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲಿನ ಜನರು ಭಯಭೀತರಾಗಿ ಬದುಕುತ್ತಿದ್ದಾರೆ. ಇದನ್ನು ಮನಗಂಡು ವಿದ್ಯುತ್ ಸಂಪರ್ಕ ಕಲ್ಪಿಸಿ ಎಂದು ಸೂಚಿಸಿದರು. ಇದೇ ವೇಳೆ ಮುಡಾ ಅಧಿಕಾರಿಗೆ ದೂರವಾಣಿ ಕರೆ ಮಾಡಿ, ಆರ್.ಟಿ. ನಗರಕ್ಕೆ ಜುಲೈ 17ರೊಳಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಸೂಚನೆ ನೀಡಿದರು. ಕಬಿನಿಯಿಂದ ಮೈಸೂರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಡಾವಣೆಗಳಿಗೂ ನೀಡುವಂತೆ ಹೇಳಿದರು. ನನ್ನ ಈ ಆಗ್ರಹಕ್ಕೆ ಸ್ಪಂದಿಸದಿದ್ದರೆ ನಾನೇ ಮುಡಾಗೆ ಬೀಗ ಹಾಕುತ್ತೇನೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಚೆಸ್ಕಾಂ ಸೂಪರಿಂಟೆಂಡೆಂಟ್ ಇಂಜಿನಿಯರ್ ಸುನೀಲ್ ಕುಮಾರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಧರಣಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಆರ್.ಟಿ.ನಗರದ ಕೆಲವು ನಾಗರಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.19– ಜೂನ್ 20 ಮಂಗಳವಾರದಂದು ಬೆಳಗ್ಗೆ 10ರಿಂದ



ಸಂಜೆ 5:30ವರೆಗೆ 66/11 ಕೆ.ವಿ ದೂರ (ಮೈಸೂರು) ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ದೂರ, ತಳೂರು, ಮುರುಡಗಳ್ಳಿ, ದೊಡ್ಡಕಾಟೂರು, ಚಿಕ್ಕಕಾಟೂರು, ಸಿಂಧುವಳ್ಳಿ ಗ್ರಾಮ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ನಂಜನಗೂಡು ವಿಭಾಗ ವ್ಯಾಪ್ತಿಗೆ ಒಳಪಡುವ ಹಳ್ಳಿಕೆರೆಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು,ಜೂ.19–ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು www.tw.kar.nic.inನಲ್ಲಿ ಜೂ.23ರಿಂದ ಜು.24ರವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಡಾ.ಬಾಬು ಜಗಜೀವನ ರಾಂ ಭವನದ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಸಮನ್ವಯಾಧಿಕಾರಿ ಕಚೇರಿ ದೂ.ಸಂಖ್ಯೆ –0821 2427140 ಸಂಪರ್ಕಿಸಬಹುದು.





ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನ ಸ್ಥಾಪನಾ ದಿನಾಚರಣೆ ಅಂಗವಾಗಿ ಬ್ಯಾಂಕ್ ಸಂಸ್ಥಾಪಕರಾದ ಶೆಟ್ಟಪ್ಪ ಸಿದ್ದಪ್ಪನವರ ಪ್ರತಿಮೆಗೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾಲಾರ್ಪಣೆ ಮಾಡಿದರು. ಚಿತ್ರದಲ್ಲಿ ಬ್ಯಾಂಕ್ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಉಪಾಧ್ಯಕ್ಷ ಡಿ.ಬಸವರಾಜು (ಬಸಪ್ಪ), ನಿರ್ದೇಶಕರಾದ ನಂ.ಸಿದ್ದಪ್ಪ, ಎಂ.ಡಿ.ಪಾರ್ಥಸಾರಥಿ(ಪಾತಿ), ಹೆಚ್.ವಿ.ಭಾಸ್ಕರ್, ಅರುಣ್ ಸಿದ್ದಪ್ಪ, ಶಂಕರನಾರಾಯಣಶಾಸ್ತ್ರಿ, ಶ್ರೀಮತಿ ಹೆಚ್.ಎನ್.ಸರ್ವಮಂಗಳ, ಎಂ.ಎನ್.ನವೀನ್ ಕುಮಾರ್, ಬಿ.ನಾಗರಾಜು,. ಬ್ಯಾಂಕಿನ ವ್ಯವಸ್ಥಾಪಕ ಡಿ.ಅನಂತವೀರಪ್ಪ ಹಾಗೂ ಸಿಬ್ಬಂದಿ ವರ್ಗ ಕಾಣಬಹುದು.

ಅನಧಿಕೃತ ನೀರಿನ ಸಂಪರ್ಕ ಅಧಿಕೃತಗೊಳಿಸಲು ಮೈಸೂರು ಪಾಲಿಕೆಯಿಂದ ಕಂತು ಯೋಜನೆ ಜಾರಿ

ನಗರದಲ್ಲಿವೆ 35 ಸಾವಿರ ಅನಧಿಕೃತ ನಲ್ಲಿ ನೀರಿನ ಸಂಪರ್ಕ

ಮೈಸೂರು, ಜೂ.19(ಆರ್‌ಕೆ)– ಮೈಸೂರು ನಗರದಾದ್ಯಂತ 35,000 ಅನಧಿಕೃತ ನೀರಿನ ಸಂಪರ್ಕಗಳನ್ನು ಅಧಿಕೃತಗೊಳಿಸಲು ಮೈಸೂರು ಮಹಾನಗರಪಾಲಿಕೆಯು ಬಳಕೆದಾರರಿಗೆ ಅನುಕೂಲವಾಗುವಂತಹ ಕಂತು ಯೋಜನೆಯನ್ನು ಜಾರಿಗೊಳಿಸಿದೆ.

ಅನಧಿಕೃತ ನೀರಿನ ಸಂಪರ್ಕ ಪಡೆದು ಬಳಸುತ್ತಿರುವ ಮನೆ ಮಾಲೀಕರನ್ನು ತೆರಿಗೆ ವ್ಯಾಪ್ತಿಗೊಳಪಡಿಸಿ ನೀರಿನ ತೆರಿಗೆ ಸಂಗ್ರಹಿಸಿ ಆದಾಯ ಕ್ರೋಢೀಕರಣಕ್ಕೆ ಉದ್ದೇಶಿಸಿರುವ ಪಾಲಿಕೆಯು, ಮಾಸಿಕ ನೀರಿನ ಶುಲ್ಕದ ಬಿಲ್‌ನೊಂದಿಗೆ ಕಂತು ರೂಪದಲ್ಲಿ ಮೀಟರ್ ಅಳವಡಿಕೆ ಶುಲ್ಕದ ಮೊತ್ತ ಸಂಗ್ರಹಿಸಲು ಮುಂದಾಗಿದೆ.

60 ರೆವಿನ್ಯೂ ಬಡಾವಣೆ, ಕೊಳಚೆ ಪ್ರದೇಶ ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿ ಮೀಟರ್ ಅಳವಡಿಸದೇ ಅನಧಿಕೃತವಾಗಿ ನೀರು ಬಳಕೆ ಮಾಡುತ್ತಿರುವವರಿಂದ ತೆರಿಗೆ ಪಾವತಿಸದಿರುವುದು ಪಾಲಿಕೆಗೆ ತಲೆನೋವಾಗಿ ಪರಿಣಮಿಸಿತ್ತು. ಎಷ್ಟೇ ಪ್ರಯತ್ನ ಪಟ್ಟರೂ, ಒಂದಲ್ಲಾ ಒಂದು ಕಾರಣಕ್ಕಾಗಿ ಅಂತಹ ಮನೆಗಳಿಗೆ ನೀರಿನ ಮೀಟರ್ ಅಳವಡಿಸಲು ಸಾಧ್ಯವಾಗಿರಲಿಲ್ಲವಾದರೂ, ಅಂತಹ ಮನೆಗಳಿಗೂ ವಾಣಿ ವಿಲಾಸ ವಾಟರ್ ವರ್ಕ್ಸ್‌ನಿಂದ ನಿರಂತರವಾಗಿ ಕುಡಿಯುವ ನೀರು ಪೂರೈಸುತ್ತಾ ಬಂದಿದೆ.



ಒಂದೇ ಒಂದು ನಯಾ ಪೈಸೆ ಪಾವತಿಸದೇ ನಿತ್ಯ ನೀರು ಬಳಸುತ್ತಿದ್ದ ಗ್ರಾಹಕರ ಮನೆಗಳಿಗೆ ಮೀಟರ್ ಅಳವಡಿಸಿ ತೆರಿಗೆ ವ್ಯಾಪ್ತಿಗೊಳಪಡಿಸಲು ಮೈಸೂರು ಮಹಾನಗರಪಾಲಿಕೆಯು ಕಂತು ಯೋಜನೆಯನ್ನು ಸದ್ದಿಲ್ಲದೇ ಪರಿಚಯಿಸಿದೆ. ಹಲವು ಬಾರಿ ನೋಟಿಸ್ ನೀಡಿ ಠೇವಣಿ ಇಟ್ಟು ಮೀಟರ್ ಅಳವಡಿಸಿಕೊಳ್ಳುವಂತೆ ತಿಳುವಳಿಕೆ ನೀಡಿದ್ದರೂ ಅನಧಿಕೃತ ಸಂಪರ್ಕದಲ್ಲೇ ನೀರನ್ನು ಬಳಸಿಕೊಳ್ಳುತ್ತಿದ್ದವರಿಗೆ ಅಧಿಕೃತಗೊಳಿಸಿಕೊಳ್ಳಲು ಪಾಲಿಕೆಯು ಸರಳ ವಿಧಾನದ ಮೂಲಕ ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟಿದೆ.



ಒಂದು ನಯಾ ಪೈಸೆಯನ್ನೂ ಕಟ್ಟದೇ ನೀರು ಬಳಸಿಕೊಳ್ಳುತ್ತಿರುವವರಿಂದ ತೆರಿಗೆ ಸಂಗ್ರಹಿಸಿ ಸಂಪರ್ಕವನ್ನು ಅಧಿಕೃತಗೊಳಿಸಲು ಒಂದು ಅವಕಾಶ ನೀಡಿದ್ದೇವೆ. ಬಡವರಿಗೆ ಕಂತು ರೂಪದಲ್ಲಿ ಡೆಪಾಸಿಟ್ ಹಣ ಪಾವತಿಸುವಂತೆ ಹೇಳಲಾಗಿದೆ. ನೀರಿನ ಮೀಟರ್ ಅನ್ನು ಅವರೇ ಅಳವಡಿಸಿ ಎಂದರೆ, ಗುಜರಿಯಲ್ಲಿ ಹಳೇ ಮೀಟರ್ ತಂದು ಅಳವಡಿಸಿ ಅದನ್ನು ಟ್ಯಾಂಪರ್ ಮಾಡುವ ಸಾಧ್ಯತೆ ಇರುವುದರಿಂದ ಪಾಲಿಕೆಯೇ ಉತ್ತಮ ಗುಣಮಟ್ಟದ ಮೀಟರ್ ಅಳವಡಿಸುವ ಬಗ್ಗೆ ಚಿಂತಿಸಲಾಗಿದೆ. ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಬಗ್ಗೆ ನಿರ್ಧರಿಸುತ್ತೇವೆ. **–ಶಿವಕುಮಾರ್, ಮೇಯರ್**



ಮೀಟರ್ ಅಳವಡಿಸಿಕೊಳ್ಳಲು ಪ್ರತೀ ಮನೆಗೆ ಕೇವಲ 3,115 ರೂ. ಠೇವಣಿ ನಿಗದಿಪಡಿಸಿದ್ದು, ಆರಂಭದಲ್ಲಿ 1,115 ರೂ.ಗಳನ್ನು ಪಾವತಿಸಿ, ಪ್ರತೀ ತಿಂಗಳ ನೀರಿನ ಬಿಲ್‌ನೊಂದಿಗೆ 100 ರೂ.ಗಳಂತೆ 20 ತಿಂಗಳ ಕಾಲ ಕಂತು ರೂಪದಲ್ಲಿ ಉಳಿಕೆ ಹಣವನ್ನು ಪಾವತಿಸುವಂತೆ ಸುಲಭ ಕಂತು ಯೋಜನೆಯನ್ನು ಜಾರಿಗೊಳಿಸಿದ್ದೇವೆ ಎಂದು ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಇದರಿಂದ ಕೂಲಿ ಕಾರ್ಮಿಕರು, ಬಡವರು, ಕೊಳಚೆ ಪ್ರದೇಶ ಹಾಗೂ ರೆವಿನ್ಯೂ ಬಡಾವಣೆ ನಿವಾಸಿಗಳಿಗೆ ಠೇವಣಿ ಹಣ ಪಾವತಿಸಲು ಅನುಕೂಲವಾಗುತ್ತದೆ. ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಈ ಯೋಜನೆಗೆ ಒಪ್ಪಿಗೆ ದೊರೆತಿದ್ದು, ಅದರಿಂದ ಪಾಲಿಕೆಗೂ ಆದಾಯ ವೃದ್ಧಿಯಾಗುತ್ತದೆಯಲ್ಲದೇ, ಅನಧಿಕೃತ ನೀರಿನ ಸಂಪರ್ಕ ಹೊಂದಿರುವವರು ತೆರಿಗೆ ವ್ಯಾಪ್ತಿಗೆ ಬರುತ್ತಾರೆ ಎಂದು ಅವರು ತಿಳಿಸಿದರು.

ಒಮ್ಮೆ ನೀರಿನ ಸಂಪರ್ಕಕ್ಕೆ ಡೆಪಾಸಿಟ್ ಹಣ ಪಾವತಿಸಿದರೆ ಅನಧಿಕೃತವಾಗಿರುವ ಸಂಪರ್ಕ ಅಧಿಕೃತವಾಗುತ್ತದೆ. ರೆವಿನ್ಯೂ ಬಡಾವಣೆಗಳಲ್ಲಿ ಮನೆ ಮಾಲೀಕತ್ವದ ಬಗ್ಗೆ ವಿವಾದಗಳಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಆಧಾರ್ ಕಾರ್ಡ್ ಪಡೆದು ಅವರ ಹೆಸರಿನಲ್ಲಿ ನೀರಿನ ಮೀಟರ್ ಸಂಪರ್ಕ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಕಳೆದ 10 ವರ್ಷಗಳಿಂದ ಮೈಸೂರಿನಲ್ಲಿ 55,000 ಮನೆಗಳ ಮೀಟರ್ ಕಾರ್ಯನಿರ್ವಹಿಸುತ್ತಿಲ್ಲ ಎಂದು ನಮೂದಿಸಿ ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್ ಸಿಬ್ಬಂದಿ ಮಿನಿಮಮ್ ಬಿಲ್ ನೀಡುತ್ತಾ ಬಂದಿದ್ದರೂ, ಅದರಿಂದ ಪಾಲಿಕೆಗೆ ಆದಾಯ ಬರುತ್ತಿರಲಿಲ್ಲ. ಅಂತಹವರು ಮೀಟರ್ ಸರಿಪಡಿಸಿಕೊಂಡು ಬಾಕಿ ಬಿಲ್ ಪಾವತಿಸದಿದ್ದರೆ, ಬಿಲ್ ಹಣದ ದುಪ್ಪಟ್ಟು ಹಣ ಪಾವತಿಸಬೇಕಾ ಗುತ್ತದೆ ಎಂದು ಎಚ್ಚರಿಕೆ ನೀಡಿದ ಬಳಿಕ ಈಗ ಕಾರ್ಯನಿರ್ವಹಿಸದ ಮೀಟರ್‌ಗಳ ಸಂಖ್ಯೆ 7,000ಕ್ಕಿಳಿದಿದೆ ಎಂದು ನಗರ ಪಾಲಿಕೆ ಆಯುಕ್ತರು ತಿಳಿಸಿದರು.

ಇದೀಗ ಹೊಸ ಯೋಜನೆ ಜಾರಿಗೊಳಿಸಿದ ಮೇಲೆ ಪ್ರತಿಯೊಬ್ಬರೂ ಸಂಪರ್ಕ ಅಧಿಕೃತಗೊಳಿಸಲು ಮುಂದಾಗಿದ್ದಾರೆ. ಡೆಪಾಸಿಟ್ ಹಣ ಪಾವತಿಸಿ ಮನೆ ಮಾಲೀಕರೇ ತಮ್ಮ ವೆಚ್ಚದಲ್ಲಿ ನೀರಿನ ಮೀಟರ್ ಅಳವಡಿಸಿಕೊಳ್ಳುವಂತೆ ಸೂಚಿಸಿದ್ದೇವೆ ಎಂದು ಅವರು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಹೊಟೇಲ್‌ನಲ್ಲಿ) "ಯಜಮಾನರೆ ಇದೇನು ವಿಶೇಷ? ವಡೆಗೆ ರೇಟ್ ಜಾಸ್ತಿ ಎಂದು ಬರೆದಿದ್ದೀರಿ?"

ಮಾಲೀಕ : "ವಡೆಯಲ್ಲಿ ತೂತು ಇರಿಸಲು ಮರೆತು ಹೋಗಿರುವ ಕಾರಣದಿಂದಾಗಿ ಇಂದು ಒಂದು ದಿನದ ಮಟ್ಟಿಗೆ ಅದರ ರೇಟ್ ಏರಿಸಲಾಗಿದೆ!"

ಮೈಸೂರು ಮಿತ್ರ

ಮಂಗಳವಾರ, 20 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಪರೋಪಕಾರಕ್ಕಾಗಿ ಮರಗಳು ಹಣ್ಣು ಬಿಡುತ್ತವೆ. ನದಿಗಳು ಹರಿಯುತ್ತವೆ. ಹಸುಗಳು ಹಾಲು ಕರೆಯುತ್ತವೆ. ಈ ಶರೀರವೂ ಪರೋಪಕ್ಕಾರಕೆಂದೇ ಇದೆ.

–ವಿಕ್ರಮ್ ಚರಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಆಗೋಕೆ ಮುಂಚೆ ಎಲೆ ಹಾಕಿದ ಹಾಗೆ

ನಿಮ್ಮ ಪತ್ರಗಳು

ಸಿದ್ದರಾಮಯ್ಯನವರು ಸ್ಥಾನದ ಘನತೆ ಕಾಪಾಡಿಕೊಳ್ಳಲಿ

ಮಾನ್ಯರೇ,

ಸಂಸದ ಪ್ರತಾಪ್ ಸಿಂಹ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಈ ಬಾರಿ ಸ್ವಲ್ಪ ಖಾರವಾಗಿಯೇ ಟೀಕಿಸಿದ್ದಾರೆ ಹಾಗೂ ಸಿದ್ದರಾಮಯ್ಯ ಅವರ ಪ್ರತಿಯೊಂದು ಟೀಕೆಗೂ ಪ್ರತ್ಯಾಸ್ತ್ರ ಹೂಡಿದ್ದಾರೆ.

ವಿರೋಧಿಯಲ್ಲಿ ಪ್ರಬುದ್ಧತೆ ಇಲ್ಲ ಎಂದು ಟೀಕಿಸಬೇಕಾದರೆ ತಮ್ಮಲ್ಲಿ ಗುಣಗಳನ್ನು ಪ್ರಕಟಿಸಬೇಕಾಗುತ್ತದೆ. ಕೇವಲ ವಯಸ್ಸಿನ, ಅನುಭವದ ಕಾರಣ ಪ್ರಬುದ್ಧತೆ ಬೆಳೆಯುವುದಿಲ್ಲ. ತಾತ್ವಿಕ ವಿರೋಧವನ್ನೂ, ಅದರ ಕಾರಣಗಳಿಗಾಗಿ ಸಹಿಸಿ ಸಂವಹಿಸುವ ಗುಣಗಳಿಂದಾಗಿ ಪ್ರಬುದ್ಧತೆ ಬೆಳೆಯುತ್ತದೆ. ಇನ್ನೊಬ್ಬರನ್ನು ಕೀಳಾಗಿ ಹೀಗಳೆಯುವುದರಲ್ಲಿಯೇ ತಮ್ಮ ಹಿರಿಮೆ ಎಂದು ಪರಿಭಾವಿಸುವುದು ಅಹಂಕಾರ, ಉದ್ಧಟತನದ ಉದಾಹರಣೆಯಾಗಬಲ್ಲದೇ ಹೊರತು ಪ್ರಬುದ್ಧತೆ ಅಲ್ಲ. ಹಾಗೆ ತಿಳಿದುಕೊಳ್ಳುವುದು ಅವರ ಅಲ್ಪಮತಿಗೆ ಸಾಕ್ಷಿಯಾಗಬಹುದು.

ಹೇಳಿ ಕೇಳಿ ಮೊದಲಿನಿಂದಲೂ ಇತರರನ್ನೂ ಏಕವಚನದಿಂದ ಹಾಗೆಯೇ ವಿರೋಧಿಗಳ ಮೇಲೆ ಒರಟಾಗಿ ಮಾತನಾಡಿ ಅಭ್ಯಾಸವಿರುವ ಸಿದ್ದರಾಮಯ್ಯನವರು ತಾವಿನ್ನು ಪ್ರತಿಪಕ್ಷದ ನಾಯಕರಂತೆಯೇ ವರ್ತಿಸುತ್ತಿರುವುದು ಅವರ ಹುದ್ದೆಗೆ ತಕ್ಕದ್ದಲ್ಲ.

ಪ್ರತಾಪ್ ಸಿಂಹರವು ತಾವು ಪ್ರಥಮ ಬಾರಿ ಸಂಸದರಾಗಿ ಆಯ್ಕೆಯಾದಾಗ ಮೈಸೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಅಂದಿನ ಮುಖ್ಯಮಂತ್ರಿ ಇದೇ ಸಿದ್ದರಾಮಯ್ಯನವರಿಗೆ ಸಾರ್ವಜನಿಕವಾಗಿ ವೇದಿಕೆಯಲ್ಲಿ ಕಾಲಿಗೆ ಬಿದ್ದಿದ್ದನ್ನು ಮುಖ್ಯಮಂತ್ರಿಗಳು ಮರೆತಿದ್ದರಾದರೂ ನಾವು ಸಾರ್ವಜನಿಕರು ಮರೆತಿಲ್ಲ. ಅಂದು ತಮ್ಮ ಸ್ವಾಮಿನಿಷ್ಠೆ ಮೆರೆದ ಪ್ರತಾಪ್ ಸಿಂಹ, ಇಂದು ಪಳಗಿದ ಮೇಲೆ ಸಿದ್ದರಾಮಯ್ಯನವರಿಗೆ ತಿರುಗೇಟು ನೀಡಿದ್ದನ್ನು ಸಿದ್ದರಾಮಯ್ಯ ಅರಿತುಕೊಂಡು, ತಮ್ಮ ಸ್ಥಾನದ ಘನತೆ ಕಾಪಾಡಿಕೊಳ್ಳಲಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ವಿದ್ಯುತ್ ಉಚಿತ ಆದರೆ ಶಾಕ್ ಖಚಿತ

ಮಾನ್ಯರೇ,

ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಪ್ರತಿ ಮನೆಗೆ ಶುಲ್ಕವಿಲ್ಲದೆ ಎರಡು ನೂರು ಯೂನಿಟ್ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಗೆ ಅನುಮೋದನೆ ನೀಡಿದ ಬೆನ್ನ ಹಿಂದೆಯೇ ಈಗ ಗ್ರಾಹಕರಿಗೆ ವಿದ್ಯುತ್ ಬೆಲೆ ಏರಿಕೆಯ ಶಾಕ್ ನೀಡಿದೆ. ಇದು ಖಂಡನೀಯ. ಕಳೆದ ತಿಂಗಳಷ್ಟೇ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದಲ್ಲಿ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ ಎಂಬತ್ತು ಪೈಸೆ ಹೆಚ್ಚಿಸಿತ್ತು. ಇದೀಗ ಮತ್ತೆ ಆಯೋಗವು ಸರಕಾರದ ಒತ್ತಡಕ್ಕೆ ಮಣಿದು ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕದ ಕಾರಣ ನೀಡಿ ಹೊಸ ಆದೇಶವನ್ನು ಹೊರಡಿಸಿದೆ. ಇದರ ಪ್ರಕಾರ ಎಸ್ಕಾಂಗಳು ಪ್ರತಿ ಯೂನಿಟ್‌ಗೆ ಐವತ್ತು ಪೈಸೆ ಹೆಚ್ಚಿಸಿ ಮಧ್ಯಮ ಕುಟುಂಬಗಳಿಗೆ ಶಾಕ್ ನೀಡಿದೆ. ಈ ಪರಿಷ್ಕೃತ ದರವನ್ನು ಸರಕಾರ ಸದ್ದಿಲ್ಲದೆ ಈ ತಿಂಗಳಿಂದ ಜಾರಿಗೆ ತಂದಿದೆ. ಎಸ್ಕಾಂಗಳು ಎದುರಿಸುತ್ತಿರುವ ಆದಾಯದ ಕೊರತೆಯನ್ನು ಪರಿಹರಿಸಲು ಮತ್ತು ಶತಾಯಗತಾಯ ಅಧಿಕಾರ ಚುಕ್ಕಾಣಿ ಹಿಡಿಯಲು ಆತುರಾತುರವಾಗಿ ಉಚಿತ ವಿದ್ಯುತ್ ಘೋಷಣೆ ಮಾಡಿ ಇದನ್ನು ಸರಿದೂಗಿಸಲು ಕಾಂಗ್ರೆಸ್ ಸರ್ಕಾರ ಈ ರೀತಿ ವಿದ್ಯುತ್ ದರ ಹೆಚ್ಚಿಸಿರುವುದು ಜನಸಾಮಾನ್ಯರಿಗೆ ಹೊರೆಯಾಗಿದೆ.

–ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಬಿಜೆಪಿಗೆ ಇದು ಸಲ್ಲದು!

ಮಾನ್ಯರೆ,

ಜುಲೈ 1ಕ್ಕೆ 10 ಕೆ.ಜಿ ಅಕ್ಕಿ ಕೊಡದಿದ್ದರೆ ಪ್ರತಿಭಟನೆ ಮಾಡುತ್ತೇವೆಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ ಸುದ್ದಿ ಪ್ರಕಟವಾಗಿದೆ. ಜವಾಬ್ದಾರಿ ಸ್ಥಾನದಲ್ಲಿರುವವರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಿ ಕರ್ನಾಟಕಕ್ಕೆ ಇನ್ನೂ ಹೆಚ್ಚು ಅಕ್ಕಿಯನ್ನು ಪೂರೈಸುವಂತೆ ಕೇಳಬೇಕಾಗಿತ್ತು. ಅದು ಬಿಟ್ಟು ರಾಜ್ಯ ಸರಕಾರದ ವಿರುದ್ಧ ಪ್ರತಿಭಟಿಸುತ್ತೇವೆಂದು ಹೊರಟರೆ ಅದರ ಪರಿಣಾಮ ಮುಂದಿನ ಲೋಕಸಭಾ ಚುನಾವಣೆಯ ಮೇಲಾಗುತ್ತದೆ. ಎಲ್ಲಾ ಬಿಜೆಪಿ ಸಂಸದರೂ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಿ ರಾಜ್ಯ ಸರಕಾರಕ್ಕೆ ಅಕ್ಕಿಯ ಪೂರೈಕೆ ಮಾಡುವಂತೆ ಮನವಿ ಮಾಡಿಕೊಳ್ಳಲಿ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

ಪೇ ಅಂಡ್ ಪಾರ್ಕ್‌ನಿಂದ ಅನುಕೂಲ

ಮಾನ್ಯರೆ,

ಜೂನ್ 17ರ 'ಮೈಸೂರು ಮಿತ್ರ' ಪತ್ರಿಕೆಯ ನಿಮ್ಮ ಪತ್ರಗಳು ವಿಭಾಗದಲ್ಲಿ ಹಿರಿಯ ಪತ್ರಕರ್ತರಾದ ಗೌರಿ ಸತ್ಯ ಅವರು, ಮೈಸೂರು ನಗರದ ಪ್ರಮುಖ ವಾಣಿಜ್ಯ ರಸ್ತೆಗಳಾದ, ಅರಸು ರಸ್ತೆ, ಅಶೋಕ ರಸ್ತೆ, ಸಯ್ಯಾಜಿರಾವ್ ರಸ್ತೆ, ಮತ್ತು ಶಿವರಾಂಪೇಟೆಯ ರಸ್ತೆಯಲ್ಲಿ ಹೆಚ್ಚುತ್ತಿರುವ ವಾಹನಗಳ ಪಾರ್ಕಿಂಗ್ ಸಮಸ್ಯೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ಈ ರಸ್ತೆಗಳ ಇಕ್ಕೆಲಗಳಲ್ಲಿ ಅಂಗಡಿಯ ಕೆಲವು ಮಾಲೀಕರು ರಸ್ತೆಯ ಮುಂಭಾಗದಲ್ಲಿ ತಮ್ಮ ವಾಹನಗಳನ್ನು ಬೆಳಗ್ಗೆಯಿಂದ ರಾತ್ರಿಯ ತನಕವೂ ನಿಲ್ಲಿಸುವುದರಿಂದ ಸಾರ್ವಜನಿಕರು ಈ ರಸ್ತೆಯಲ್ಲಿ ಏನಾದರೂ ವ್ಯಾಪಾರ ವಹಿವಾಟುಗೆ ಬಂದಾಗ ತಮ್ಮ ವಾಹನಗಳು ಎಲ್ಲಿ ಪಾರ್ಕಿಂಗ್ ಮಾಡುವುದು?


ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ಬಂದರೆ (ವಾಹನ ನಿಲ್ಲಿಸಿ ಹಣ ಪಾವತಿಸಿ) ಪ್ರತಿ ಗಂಟೆಗೂ ಹಣ ಕೊಡಬೇಕಾಗಿರುವುದರಿಂದ ಸಾರ್ವಜನಿಕರು ಸಹ ಹೆಚ್ಚು ಸಮಯ ವಾಹನ ನಿಲ್ಲಿಸಲು ಇಷ್ಟಪಡುವುದಿಲ್ಲ. ಜೊತೆಗೆ ನಮ್ಮ ವಾಹನವೂ ಕಳ್ಳತನವಾಗುವ ಭಯವೂ ಇರುವುದಿಲ್ಲ. ಅರಸು ರಸ್ತೆಯೊಂದರಲ್ಲಿ ಪ್ರತಿ ತಿಂಗಳು ಹಲವಾರು ದ್ವಿಚಕ್ರ ವಾಹನಗಳು ಕಳ್ಳತನವಾಗುತ್ತಿವೆ. ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ಬಂದರೆ ಪೊಲೀಸರು ಸಾರ್ವಜನಿಕ ವಾಹನ ಕಾಯುವುದು ತಪ್ಪುತ್ತದೆ.

ಮುಖ್ಯವಾಗಿ ಕಳೆದ ಹತ್ತು ವರ್ಷಗಳಿನಿಂದಲೂ ಕಾಮಗಾರಿ ನಡೆಯುತ್ತಿರುವ ಟೌನ್‌ಹಾಲ್ ಒಳ ಭಾಗದ ಬಹು ಮಹಡಿ ಸಂಕೀರ್ಣದಲ್ಲಿ ಸಾವಿರಾರು ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಬಹುದಾಗಿದ್ದು, ಆದಷ್ಟು ಬೇಗ ಈ ಕಾಮಗಾರಿ ಕೆಲಸ ಮುಗಿಯಬೇಕು. ಆದರೆ ಕೆಲವು ಪ್ರಜ್ಞಾವಂತ ನಾಗರಿಕರು ಮತ್ತು ಕೆಲವು ಜನಪ್ರತಿನಿಧಿಗಳು ಈ ಪೇ ಅಂಡ್ ಪಾರ್ಕಿಂಗ್ ಅನ್ನು ಏಕೆ ವಿರೋಧಿಸುತ್ತಿದ್ದಾರೆ ಎಂಬುದೇ ನಿಗೂಢ ಪ್ರಶ್ನೆ?

ಕಳೆದ ಹತ್ತು ವರ್ಷಗಳ ಹಿಂದೆಯೇ ಇದನ್ನು ಜಾರಿಗೆ ತರಲು ಅಂದಿನ ಕೌನ್ಸಿಲ್ ಸಭೆಯಲ್ಲಿ ನಿರ್ಣಯವಾದರೂ, ಕೆಲವರು ಒತ್ತಡ ಹಾಕಿ ಅದು ಜಾರಿಗೆ ಬರದಂತೆ ನೋಡಿಕೊಂಡರು. ಒಂದು ವೇಳೆ ಈಗಲೂ ಇದು ಜಾರಿಗೆ ಬಾರದೇ ಹೋದರೆ ಸಾರ್ವಜನಿಕರು ಮೇಯರ್ ಮತ್ತು ಜನಪ್ರತಿನಿಧಿಗಳ ಬಗ್ಗೆ ಅನುಮಾನಪಡುವಂತಾಗುತ್ತದೆ. ಸಾರ್ವಜನಿಕರಿಗೆ ಅನುಕೂಲವಾಗುವ ಈ ವ್ಯವಸ್ಥೆಯನ್ನೇಕೆ ಜನಪ್ರತಿನಿಧಿಗಳು ವಿರೋಧಿಸುತ್ತಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಶ್ರದ್ಧಾ ಸಾಧಕರ ಸ್ವತ್ತು ಸಂಗೀತ



ಮೈಸೂರು ಕೆ.ವಾಸುದೇವಾಚಾರ್ಯರು

ನಾಳೆ (ಬುಧವಾರ) ವಿಶ್ವ ಸಂಗೀತ ದಿನದ ಅಂಗವಾಗಿ ಸಂಗೀತ ಕಲಾನಿಧಿ ಶ್ರೀ ಮೈಸೂರು ಕೆ.ವಾಸುದೇವಾಚಾರ್ಯ ಅವರ ಸ್ಮರಣೆ ಲೇಖನ.

ವಾಗ್ಗೇಯಕಾರ ಮೈಸೂರು ಕೆ.ವಾಸುದೇವಾಚಾರ್ಯರನ್ನು 3ನೇ ತ್ಯಾಗರಾಜರೆಂದು ಸಂಬೋಧಿಸಲಾಗುತ್ತಿತ್ತು. ಸಣ್ಣ ಮಗುವಾಗಿರುವಾಗಲೇ ಮೈಸೂರು ಸಂಸ್ಥಾನದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಸ್ಥಾನವನ್ನು ಕಂಡವರು. 10ನೇ ಶ್ರೀ ಚಾಮರಾಜ ಒಡೆಯರ್‌ರವರ ಆಶ್ರಯದಿಂದ ಸಂಗೀತ ವಿದ್ಯಾ ಸಂಪನ್ನರಾದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಸ್ಥಾನ ಗೌರವಕ್ಕೆ ಪಾತ್ರರಾದರು. ಶ್ರೀ ಜಯಚಾಮ ರಾಜೇಂದ್ರ ಒಡೆಯರ್‌ರವರಿಗೆ ಗುರುಗಳಾದರು. ಹೀಗೆ ಮೈಸೂರಿನ ಸಂಸ್ಥಾನದ ನಾಲ್ವರು ಅರಸರ ಪರಿಸರದಲ್ಲಿ ಬೆಳೆದ ಆಚಾರ್ಯರು ಎಲ್ಲರಿಗೂ ಆದರ್ಶಪ್ರಾಯರು.

ಎಲ್ಲೆಯನ್ನು ಮೀರಿ ಎಲ್ಲರನ್ನೂ ಆಕರ್ಷಿಸಿ, ತನ್ಮನವನ್ನು ನೆಮ್ಮದಿಗೊಳಿಸುವುದು ಸಂಗೀತ ಶಾಸ್ತ್ರ. ವಿಶ್ವವನ್ನೇ ಒಂದಾಗಿ ಬೆಸೆಯುವ ಮಂತ್ರ ಶಕ್ತಿಯುಳ್ಳ ಮಹಾವಿದ್ಯೆ ಸಂಗೀತ. ಸನಾತನ ಧರ್ಮದ ಒಂದು ಭಾಗವೇ ಆದ ಸಂಗೀತವು ಸಾಮ ವೇದದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ವಿಶ್ವದಲ್ಲಿ ಸಂಗೀತವನ್ನು ಪ್ರಮುಖವಾಗಿ ಭಾರತೀಯ ಸಂಗೀತ ಶಾಸ್ತ್ರ ಹಾಗೂ ಪಾಶ್ಚಿಮಾತ್ಯ ಸಂಗೀತ ಎಂದು ಎರಡು ಪ್ರಮುಖ ಪಂಗಡಗಳನ್ನಾಗಿ ಗುರುತಿಸಲಾಗಿದೆ. ಭಾರತೀಯ ಸಂಗೀತ ಪರಂಪರೆಯಲ್ಲಿ ಭಗವಾನ್ ನಾರದ ಮಹರ್ಷಿಗಳಿಂದ ಪ್ರಾರಂಭಗೊಂಡು ಇದುವರೆವಿಗೆ ಅನೇಕ ಸಂಗೀತ ಕಲಾರಾಧಕರು ವಾಗ್ದೇವಿ ಪುತ್ರರಾಗಿ ಸಂಗೀತ ಕಲಾ ವಿದ್ಯೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ವಿಶ್ವದೆಲ್ಲೆಡೆ ಪಸರಿಸಿರುವ ಸಂಗೀತವು ಆರಾಧನೆಗೊಳ್ಳುತ್ತಿದ್ದು ವಿಶ್ವ ಸಂಗೀತ ದಿನವಾಗಿ 1982ರ ವೇಳೆ ಫ್ರಾನ್ಸ್ ದೇಶದಲ್ಲಿ ಅಲ್ಲಿನ ಸಂಸ್ಕೃತಿ ಸಚಿವರಾಗಿದ್ದ ಜ್ಯಾಕ್ ಲಾಂಗ್‌ರವರ ಚಿಂತನೆಯಿಂದಾಗಿ ಜೂನ್ 21ರಂದು ವಿಶ್ವ ಸಂಗೀತ ದಿನವನ್ನಾಗಿ ಆಚರಿಸಲು ನಿರ್ಧರಿಸಿದರು. ನಂತರ ಈ ಆಚರಣೆಯು ಬಹುತೇಕ ಇತರ ದೇಶಗಳಲ್ಲೂ ವಿಶ್ವ ಸಂಗೀತ ದಿನವನ್ನಾಗಿ ತಮ್ಮ ದೇಶವಾರು ಶೈಲಿಯ ಗಾಯನದ ಮೂಲಕ ಆಚರಿಸಲಾಗುತ್ತಿದೆ. ಸಂಗೀತವು ಭಾಷೆ ಮತ್ತು ಸಂಸ್ಕೃತಿಯನ್ನು ಮೀರಿದ್ದು. ಈ ನಿಟ್ಟಿನಲ್ಲಿ ಕರ್ನಾಟಕ ಸಂಗೀತ ಶಾಸ್ತ್ರ ಪಿತಾಮಹರಾದ ಸದ್ಗುರು ತ್ಯಾಗರಾಜರ ಪರಂಪರೆ ಶ್ರೇಷ್ಠವಾದುದು. ಈ ಪರಂಪರೆಯಲ್ಲಿ ಹಲವಾರು ಸಾಧಕರು ಸಂಗೀತ ರಚನೆ, ಅಧ್ಯಯನ, ಅಭ್ಯಾಸವನ್ನು ನಿರಂತರವಾಗಿಸಿರುತ್ತಾರೆ. ಅವರುಗಳಲ್ಲಿ ಪ್ರಮುಖರಾದವರು ಕರ್ನಾಟಕ ಸಂಗೀತ ವಾಗ್ಗೇಯಕಾರರಲ್ಲಿ ಮುಂಚೂಣಿಯಲ್ಲಿನ ಬ್ರಹ್ಮಶ್ರೀ ಮೈಸೂರು ಕೆ.ವಾಸುದೇವಾಚಾರ್ಯರು ಸ್ಮರಣೀಯರು.

ಅಂದು ಶುಕ್ರವಾರ. ಬೆಳಗಿನ ಜಾವ ಬಾಲಕನೊಬ್ಬ ಚಾಮುಂಡಿಬೆಟ್ಟವನ್ನು ಹತ್ತಿ ಅಮ್ಮನವರ ದರ್ಶನವನ್ನು ಪಡೆದು ಪ್ರಾರ್ಥನೆ ಸಲ್ಲಿಸಿ ಸರಸರನೆ ಸಾವಿರ ಮೆಟ್ಟಿಲುಗಳ ಬೆಟ್ಟವನ್ನು ಇಳಿದು ಬೆಟ್ಟದ ಪಾದದ ಬಳಿ ಬಂದು ಕಾಯುತ್ತಿರಲು ಭವ್ಯವಾದ ಬಿಳಿ ಕುದುರೆಯ ಮೇಲೆ ಮೈಸೂರು ಸಂಸ್ಥಾನದ ಮಹಾರಾಜರಾದ 10ನೇ ಚಾಮರಾಜ ಒಡೆಯರ್‌ರವರು ತಮ್ಮ ಅಣ್ಣಾಜಿ ಸುಬ್ರಹ್ಮಣ್ಯರಾಜೇ ಅರಸ್ ಮತ್ತು ಭಾವಜಿ ಬಸಪ್ಪಾಜಿರವರ ಸಂಗಡ ಪದ್ಧತಿಯಂತೆ ಆಗಮಿಸಿ ಅಮ್ಮನವರ ಪಾದಗಳಿಗೆ ಪೂಜೆ ಮಾಡಿ ಹೊರಡಲು ಸಿದ್ಧರಾಗುತ್ತಿದ್ದಂತೆಯೇ ಕಾಯುತ್ತಿದ್ದ ಬಾಲಕ ಮಹಾರಾಜರಿಗೆ ರಾಜ ಭಕ್ತಿ ಪುರಸ್ಸರದಿಂದ ಕೈ ಮುಗಿಯಲು, ಪ್ರಭುಗಳು ಹೀಗೇಕೆ ಹಲವು ದಿನಗಳಿಂದ ಇಲ್ಲಿಗೆ ಬಂದು ನಮಗೆ ಕೈಮುಗಿದು ಹೋಗುತ್ತಿದ್ದೀರಿ, ಏನಾಗಬೇಕು ನಮ್ಮಿಂದ ಎಂದು ಕೇಳಲಾಗಿ ಬಾಲಕನು ಮಹಾಸ್ವಾಮಿ ನಾನೊಬ್ಬ ಅನಾಥ, ತಾನು ವಾಸುದೇವನೆಂತಲೂ ನನ್ನ ಹಿರಿಯರು ಅರಮನೆಯ ಆಶ್ರಯದಲ್ಲಿ ಬೆಳೆದವರು. ನನ್ನ ತಂದೆ ಸುಬ್ರಹ್ಮಣ್ಯಾಚಾರ್ಯರು ಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಸ್ಥಾನದಲ್ಲಿ ಪುರಾಣಿಕರಾಗಿದ್ದರು. ನಾನು ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ, ಸಂಗೀತ ಅಭ್ಯಾಸ ಮಾಡುತ್ತಿದ್ದೇನೆ. ತಾನು ದಕ್ಷಿಣ ದೇಶಕ್ಕೆ ಹೋಗಿ ಸಂಗೀತದಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಮಹದಾಸೆ. ಖಾವಂದರು ದೊಡ್ಡ ಮನಸ್ಸು ಮಾಡಿ ನೆರವೇರಿಸಿ ವಿದ್ಯಾದಾನ ಮಾಡಿದ ಪುಣ್ಯ ಕಟ್ಟಿಕೊಳ್ಳಬೇಕು ಮಹಾಸ್ವಾಮಿ ಎಂದು ಅರಿಕೆ ಮಾಡಲಾಗಿ, ಪ್ರಭುಗಳು ಅರಮನೆಗೆ ಬಂದು ಕಾಣುವಂತೆ ಅಪ್ಪಣೆ ಕೊಟ್ಟು ತೆರಳುತ್ತಾರೆ.

ಪ್ರಭುಗಳ ಅಪ್ಪಣೆಯಂತೆ ಬಾಲಕ ವಾಸುದೇವ ಮಾರನೇಯ ದಿನ ಅರಮನೆಗೆ ಹೋಗಿ ಪ್ರಭುಗಳನ್ನು ಕಂಡು ಅವರ ಅಪ್ಪಣೆಯಂತೆ ಮಕ್ಕಳಿಗೆ ಸಂಸ್ಕೃತ ಪಾಠವನ್ನು ಹೇಳಿಕೊಡಲು ಪ್ರಾರಂಭಿಸುತ್ತಾರೆ. ಸಂಗೀತ ಕಲಿಯುವ ಆಸೆಯನ್ನು ಮತ್ತೆ ಪ್ರಭುಗಳವರಲ್ಲಿ ನಿವೇದಿಸಲಾಗಿ ಬಾಲಕ ವಾಸುದೇವನಿಗೆ ವಿದ್ಯಾರ್ಥಿವೇತನ ಕೊಟ್ಟು ಸಕಲ ಸೌಲಭ್ಯಗಳನ್ನು ಒದಗಿಸಿ ತಿರುವಯ್ಯಾರಿನ ಪಟ್ಣಂ ಸುಬ್ರಹ್ಮಣ್ಯ ಅವರಲ್ಲಿಗೆ ಕಳುಹಿಸುತ್ತಾರೆ.

ತಿರುವಯ್ಯಾರಿನ ಶ್ರೀ ಪಟ್ಣಂ ಸುಬ್ರಹ್ಮಣ್ಯಂರವರಲ್ಲಿ ಶಿಷ್ಯತ್ವವು ದೊರಕಿ 6 ವರ್ಷಗಳ ಕಾಲ ಗುರುಕುಲ ವಾಸಮಾಡಿ ಹೆಚ್ಚಿನ ಸಂಗೀತ ವಿದ್ಯೆ, ಗುರುಗಳವರ ಅನುಗ್ರಹವನ್ನು ಪಡೆದು ಮೈಸೂರಿಗೆ ಹಿಂದಿರುಗಿದ ಬಾಲಕ ವಾಸುದೇವನು ಪ್ರಭುಗಳ ಸಮ್ಮುಖದಲ್ಲಿ ತಾವು ಗುರುಗಳಿಂದ ಕಲಿತ ವಿದ್ಯೆಯನ್ನು ಅರ್ಪಿಸುವ ಸೌಭಾಗ್ಯದಿಂದಾಗಿ ರಾಜಾಶ್ರಯವು ದೊರೆಯಿತು. ತಮ್ಮ ವಿದ್ವತ್, ಪ್ರತಿಭೆಗಳಿಂದ ಪ್ರಭುಗಳಾದ ಚಾಮರಾಜ ಒಡೆಯರ್‌ರವರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರಾಗಿ ಆಸ್ಥಾನದ ಹಲವಾರು ವಿದ್ವಾಂಸರು, ಆಡಳಿತಗಾರರ ಪ್ರೀತಿ ಆದರಗಳಿಗೆ ಪಾತ್ರರಾದರು. ಕೆ.ವಾಸುದೇವಾಚಾರ್ಯರು ಕೆಲ ಕಾಲ ದಳವಾಯಿ ಸ್ಕೂಲಿನಲ್ಲಿ ಗೌರವ ಅಧ್ಯಾಪಕರಾಗಿ ಸಂಸ್ಕೃತ ಪಾಠ ಹೇಳುತ್ತಿದ್ದರಂತೆ. ಅರಮನೆಯೊಂದಿಗಿನ ಒಡನಾಟ ಹೆಚ್ಚಿದಂತೆ ಸಂಸ್ಥಾನಕ್ಕೆ ನಿಕಟರಾದ ಶ್ರೀಮಂತ ಸುಬ್ಬಣ್ಣರವರು, ಶೇಷಣ್ಣರವರು ಹಾಗೂ ವೀಣೆ ಸುಬ್ಬರಾಯರವರುಗಳ ಸತ್ಸಂಗವು ಹಾಗೆಯೇ ಪ್ರಭುಗಳೊಂದಿಗೆ ಸಾಹಿತ್ಯದ ಚರ್ಚೆ, ಸಂಗೀತದ ಆಸ್ವಾದನೆ, ವಿನೋದ, ಅರಮನೆಯ ಆಗು ಹೋಗುಗಳಿಂದಾಗಿ ಆತ್ಮೀಯತೆಯೂ ವೃದ್ಧಿಸಿ ಆಚಾರ್ಯರಿಗೆ ವಿದ್ವಾಂಸರ ಸ್ಥಾನಮಾನಗಳು ಪ್ರಾಪ್ತವಾಯಿತು. ಆ ಕಾಲದಲ್ಲಿದ್ದ ಸಮಕಾಲಿನ ಸುಪ್ರಸಿದ್ಧರಾದ ನಟಸಾರ್ವಭೌಮ ವರದಾಚಾರ್ಯರ ಸಾಂಗತ್ಯ, ಸಾಹಿತಿ ಡಿ.ವಿ.ಗುಂಡಪ್ಪನವರಂತೂ ಆಚಾರ್ಯರ ಗಾಯನವನ್ನು ಹಲವಾರು ಸಲ ಕೇಳಿ, ಆನಂದಿಸಿ ಗಾಯನದ ಹಿರಿಮೆಯನ್ನು ವ್ಯಕ್ತಪಡಿಸಿದ್ದಾರೆ. ಸಾಹಿತ್ಯ ಮತ್ತು ಸಂಗೀತಗಳೆರಡರಲ್ಲೂ ಆಚಾರ್ಯರು ನಿಸ್ಸೀಮರೆಂದು ಸಂಗೀತಗಾರರಾದ ಬಿಡಾರಂ ಕೃಷ್ಣಪ್ಪನವರು ಹೇಳುತ್ತಿದ್ದರಂತೆ.

ಈ ಘಟನೆ ನಡೆದದ್ದು 1946–47ರ ಸುಮಾರಿನಲ್ಲಿ. ಒಂದು ಸಂಜೆ 4ರ ಸಮಯದಲ್ಲಿ ಕೆ.ವಾಸುದೇವಾಚಾರ್ಯರು ಪದ್ಧತಿಯಂತೆ ಸಾಧನೆಯನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ನ್ಯೂ ಸಯ್ಯಾಜಿರಾವ್ ಮುಖ್ಯ ರಸ್ತೆಯಲ್ಲಿರುವ ಆಚಾರ್ಯರ ಮನೆಯ ಮುಂದೆ ಒಂದು ಆಸ್ಟಿನ್ ಕಾರು ಬಂದು ನಿಂತಿತು. ಆಚಾರ್ಯರ ದರ್ಶನಾಕಾಂಕ್ಷಿಗಳಾಗಿ ಖ್ಯಾತ ಸಿತಾರ್ ವಾದಕ ಪಂಡಿತ ರವಿಶಂಕರ್ ಮತ್ತು ತಬಲ ವಾದಕ ಅಲ್ಲಾರಖಾ ಖಾನ್ ಬಂದಿಳಿದರು. ಒಳಗಿನಿಂದ ಅಲೆ ಅಲೆಯಾಗಿ ಕೇಳಿ ಬರುತ್ತಿದ್ದ ನಾದಬ್ರಹ್ಮನ ಗಾಯನವನ್ನು ಆಲಿಸುತ್ತಾ ಇಬ್ಬರೂ ಕ್ಷಣಕಾಲ ದಿಗ್ಭ್ರಾಂತರಾದರು. ಇವರ ಜೊತೆ ಬಂದಿದ್ದ ಸ್ಥಳೀಯ ತಬಲ ವಿದ್ವಾನ್ ಡಿ ಸೀನಪ್ಪನವರು ಅಭ್ಯಾಗತರ ಪರಿಚಯವನ್ನು ಆಚಾರ್ಯರಿಗೆ ಮಾಡುತ್ತಾರೆ. ಎಲ್ಲರ ನಡುವೆ ಕುಶಲೋಪರಿ ಮಾತುಕತೆ ನಡೆಯಿತು. ಕೇಂದ್ರ ಸರ್ಕಾರದ ಆಹಾರ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಪಂಡಿತ ರವಿಶಂಕರ್‌ರವರ ಕಛೇರಿ ಹಿಂದಿನ ದಿನ ಇದ್ದದ್ದು ತಿಳಿದು, ತಿಳಿದಿದ್ದರೆ ಬರಬಹುದಾಗಿತ್ತು ಎಂದು ಬೇಸರ ವ್ಯಕ್ತಪಡಿಸಿದರು ಆಚಾರ್ಯರು. ಆಚಾರ್ಯರ ಇಂಗಿತವನ್ನು ಅರ್ಥ ಮಾಡಿಕೊಂಡ ಪಂಡಿತ ರವಿಶಂಕರ್‌ರವರು ತಾವು ನನ್ನ ಕಛೇರಿಗೆ ಬರಬೇಕೆ? ತಾವಿದ್ದೆಡೆಯಲ್ಲಿಯೇ ನಾನು ನುಡಿಸಲಾರೆನೆ? ಎಂದು ಹೇಳಿ ಪಕ್ಕವಾದ್ಯಗಳೊಂದಿಗೆ ಸಿತಾರ್ ನುಡಿಸಾಣಿಕೆಯನ್ನು ಪ್ರಾರಂಭಿಸಿದರು. ಸುಮಾರು ಸಮಯ ಹಾಲು ಜೇನಿನ ರಸದೌತಣವನ್ನುಂಡ ಆಚಾರ್ಯರಿಗೆ ಹೃದಯ ತುಂಬಿ ಬಂದು ಮಹಾರಾಜರು ತಮಗೆ ದಯಪಾಲಿಸಿದ್ದ ಬೆಲೆಬಾಳುವ ಜರತಾರಿ ಶಾಲುಗಳನ್ನು ಪಂಡಿತ ರವಿಶಂಕರ್ ಮತ್ತು ಅಲ್ಲಾರಖಾ ಖಾನ್‌ರವರಿಗೆ ಹೊದಿಸಿ ಗೌರವಿಸಿ ಬೀಳ್ಕೊಟ್ಟರಂತೆ. ಆಚಾರ್ಯರ ಬಳಿ ಸಂಗೀತ ಕಲಿಯಲು ಬರುತ್ತಿದ್ದವರಲ್ಲಿ ಪ್ರಮುಖರಾದವರು ಆರ್.ನಾಗೇಂದ್ರರಾಯರು, ಕೊಟ್ಟೂರು ಬಸವಯ್ಯನವರು. ಅಲ್ಲದೇ ಆಚಾರ್ಯರಿಗೆ ಕಛೇರಿಗಳಲ್ಲಿ ಉಭಯ ಪಾರ್ಶ್ವಗಳಲ್ಲಿ ಕುಳಿತು ಸಹಗಾಯನದ ಸಹಕಾರ ನೀಡುತ್ತಿದ್ದರಂತೆ. ನಂತರ ಆರ್ ನಾಗೇಂದ್ರರಾಯರು ನಾಟಕ ರಂಗ, ಸಿನಿಮಾ ರಂಗ ಪ್ರವೇಶಿಸಿದರು.

ಹೆಸರಾಂತ ಸಾಹಿತಿ ಅ.ನ.ಕೃಷ್ಣರಾಯರು ತಮ್ಮ ಬರಹಗಾರನ ಬದುಕು ಎಂಬ ಪುಸ್ತಕದಲ್ಲಿ ಕೆ ವಾಸುದೇವಾಚಾರ್ಯರರ ಬಗ್ಗೆ ಒಂದು ಪ್ರಸಂಗವನ್ನು ಪ್ರಸ್ತಾಪಿಸಿದ್ದಾರೆ. ಆಚಾರ್ಯರ ಸಮಕಾಲೀನವರಾದ, ಆತ್ಮೀಯರೂ ಆದ ಅನಂತ ಶಾಸ್ತ್ರಿಗಳು ಸಂಗೀತ ಶಾಸ್ತ್ರ ನಿಪುಣರು. ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡುತ್ತಿದ್ದರು. ಅ ನ ಕೃಷ್ಣರಾಯರು ಹಾಗೂ ಶಾಸ್ತ್ರಿಗಳು ಒಮ್ಮೆ ಸಂಗೀತ ಶಾಲೆಯಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ಆಚಾರ್ಯರು ಅಲ್ಲಿಗೆ ಆಗಮಿಸಿ, ಕುಶಲ ಪ್ರಶ್ನೆಗಳಾದ ಮೇಲೆ ಸ್ವಲ್ಪ ಹೊತ್ತಲ್ಲೇ ಹಿಂದಿರುಗುತ್ತೇನೆ ಒಳ್ಳೆಯ ತಿಂಡಿ ತರಿಸಿಟ್ಟಿರು ಎಂದರು. ಶಾಸ್ತ್ರಿಗಳು ಥಟ್ಟನೆ ಹಾಡುತ್ತೀಯೋ ಬರೀ ಕವಳ ಧ್ವಂಸವೋ ಎಂದರಂತೆ! ಆಚಾರ್ಯರು ಹಾಡುತ್ತೀನಯ್ಯಾ ಎಂದು ಹೇಳಿ ಹೋದರು. ಶಾಸ್ತ್ರಿಗಳು ಉಡುಪಿ ಹೋಟೆಲಿನಿಂದ ಆರು ಮಸಾಲೆ, ಆರು ಇಡ್ಲಿ, ಆರು ವಡೆ ತರಿಸಿದರಂತೆ. ಇಷ್ಟೊಂದು ತಿಂಡಿ ಯಾರು ತಿನ್ನಬೇಕು ಶಾಸ್ತ್ರಿಗಳೇ ಎಂದು ಅ ನ ಕೃಷ್ಣರಾಯರು. ಕೇಳಿದರಂತೆ ನೋಡುತ್ತಾ ಇರಿ ಎಂದರು ಶಾಸ್ತ್ರಿಗಳು. ಆಚಾರ್ಯರು ಅರ್ಧ ಗಂಟೆಯಲ್ಲಿ ಹಿಂದಿರುಗಿ ಶಾಸ್ತ್ರಿಗಳ ಆತಿಥ್ಯವನ್ನು ಸ್ವೀಕರಿಸಿ ಧನ್ಯವಾದ ತಿಳಿಸಿ ಒಂದು ಚೆಂಬು ನೀರು ಕುಡಿದು ಪರಮಾತ್ಮ ತೃಪ್ತನಾದ ಎಂದರಂತೆ. ನೀನು ಮಹಾ ದೈತ್ಯ ಕಣೋ ಎಂದರಂತೆ ಶಾಸ್ತ್ರಿಗಳು. ಹೀಗೆ ಆಚಾರ್ಯರು ಭೋಜನ ಪ್ರಿಯರೂ ಆಗಿದ್ದರು ಎಂದಿದ್ದಾರೆ ಅ ನ ಕೃ.

ಪ್ರಭುಗಳಾದ 10ನೇ ಚಾಮರಾಜ ಒಡೆಯರ್‌ರವರು ಕಲ್ಕತ್ತಾಗೆ ಪ್ರವಾಸ ಕೈಗೊಂಡರು. ಅದು ಪ್ರಭುಗಳವರ ಕೊನೆಯ ಪ್ರವಾಸವೂ ಆಯಿತು. ಅವರೊಡನೆ ಆಚಾರ್ಯರು ಸಹ ಪರಿವಾರದೊಡನೆ ತೆರಳಿದ್ದರು. ಪ್ರವಾಸ ಕಾಲದಲ್ಲಿ ಪ್ರಭುಗಳವರ ಆರೋಗ್ಯವು ಹದಗೆಡಲಾಗಿ ಆಚಾರ್ಯರನ್ನು ಉದ್ದೇಶಿಸಿ ಕಾಣದ ದೇಶಕ್ಕೆ ನಿಮ್ಮನ್ನು ಕರೆತಂದು ನಿಮ್ಮನ್ನು ಬಿಟ್ಟು ಹೋಗುವ ದುಃಸ್ಥಿತಿ ಬಂದಿದೆ ನನಗೆ. ನಿಮ್ಮ ಒಳ್ಳೆಯ ಗುಣವೇ ನಿಮ್ಮನ್ನು ಕಾಪಾಡುತ್ತದೆ ಎಂದು ದೊರೆಗಳು ಕೊನೆಯ ನುಡಿಗಳನ್ನು ಆಡಿದರಂತೆ. ಅವರ ಅಂತ್ಯಕಾಲದಲ್ಲಿ ಪ್ರಭುಗಳ ಬಳಿ ಇದ್ದು ಅವರ ಅಂತ್ಯಕ್ರಿಯೆಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಆಚಾರ್ಯರದ್ದಾಯಿತು. ನಂತರ ಅಸ್ಥಿಯನ್ನು ಕಾಶಿಗೆ ತೆಗೆದುಕೊಂಡು ಹೋಗಿ ಪವಿತ್ರ ಗಂಗಾ ನದಿಯಲ್ಲಿ ವಿಸರ್ಜಿಸಿ, ತಿರುಪತಿಯಲ್ಲಿ ಸಂತರ್ಪಣೆಯನ್ನು ಮಾಡಿಸಿ ಋಣಮುಕ್ತರಾದರು ಆಚಾರ್ಯರು.

ವಾಗ್ಗೇಯಕಾರ ಮೈಸೂರು ಕೆ ವಾಸುದೇವಾಚಾರ್ಯರನ್ನು ಮೂರನೇ ತ್ಯಾಗರಾಜರೆಂದು ಸಂಬೋಧಿಸಲಾಗುತ್ತಿತ್ತು. ಸಣ್ಣ ಮಗುವಾಗಿರುವಾಗಲೇ ಮೈಸೂರು ಸಂಸ್ಥಾನದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಆಸ್ಥಾನವನ್ನು ಕಂಡವರು. 10ನೇ ಶ್ರೀ ಚಾಮರಾಜ ಒಡೆಯರ್‌ರವರ ಆಶ್ರಯದಿಂದ ಸಂಗೀತ ವಿದ್ಯಾ ಸಂಪನ್ನರಾದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಸ್ಥಾನ ಗೌರವಕ್ಕೆ ಪಾತ್ರರಾದರು. ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಗುರುಗಳಾದರು. ಹೀಗೆ ಮೈಸೂರಿನ ಸಂಸ್ಥಾನದ ನಾಲ್ವರು ಅರಸರ ಪರಿಸರದಲ್ಲಿ ಬೆಳೆದ ಆಚಾರ್ಯರು ಎಲ್ಲರಿಗೂ ಆದರ್ಶಪ್ರಾಯರು.

1865ರ ಮೇ 28ರಂದು ಜನಿಸಿ 96 ವರ್ಷಗಳ ಸಾಧಕ ಜೀವನವನ್ನು ನಡೆಸಿ ಮೇ 18, 1961ರಂದು ಪುಣ್ಯಮಯವಾದ ಆಚಾರ್ಯರ ಬಾಳಿನ ನಂದಾದೀಪ ನಂದಿತು. ಇವರೊಂದಿಗೆ ಸಂಗೀತ ಲೋಕದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಚಿರಸ್ಥಾಯಿಯಾಯಿತು. ಮಹಾನ್ ಸಾಧನೆಯ ಸಾಧಕರಾದ ಸಂಗೀತ ಶಾಸ್ತ್ರ ವಿಶಾರದ, ವೇದಮೂರ್ತಿ ಶ್ರೀಮಾನ್ ಮೈಸೂರು ಕೆ ವಾಸುದೇವಾಚಾರ್ಯರ ಸಾಧನೆಯ ಬಗ್ಗೆ ಬರೆಯುವಷ್ಟು ಜ್ಞಾನ, ತಿಳುವಳಿಕೆ, ಅರ್ಹತೆಯಿಲ್ಲದೆ ಕೇವಲ ಅವರ ಬದುಕಿನ ಒಂದೆರಡು ದೃಷ್ಟಾಂತಗಳನ್ನು ಓದುಗರ ವಿವೇಚನೆಗಾಗಿ ಬರೆದಿದ್ದೇನೆ ಎಂಬುದಷ್ಟೇ ನನಗೆ ತೃಪ್ತಿ.




ನಂ. ಶ್ರೀಕಂಠ ಕುಮಾರ್
ಮೊ: 9481067333

ಬನ್ನಿಮಂಟಪ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯ ಹೀನಾಯ ಸ್ಥಿತಿ

ಈ ರಸ್ತೆಗೆ ವಾರಸುದಾರರೇ ಇಲ್ಲವೇ?: ಸಾರ್ವಜನಿಕರ ಆಕ್ರೋಶ





ಮೈಸೂರು, ಜೂ.19(ಎಸ್‌ಪಿಎನ್)– ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನ ರಸ್ತೆ ಅಧ್ವಾನಕ್ಕೆ ಮುಕ್ತಿ ಯಾವಾಗ ಎನ್ನುವುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಹೈವೇ ವೃತ್ತದಿಂದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಹಾಸ್ಟೆಲ್‌ವರೆಗೂ ಇಡೀ ರಸ್ತೆ ಗುಂಡಿಮಯ. ಲಾರಿ ಇನ್ನಿತರ ಭಾರೀ ವಾಹನಗಳ ನಿರಂತರ ಸಂಚಾರದಿಂದ ರಸ್ತೆ ಛಿದ್ರವಾಗಿದೆ. ದ್ವಿಚಕ್ರ ವಾಹನ, ಲಘು ವಾಹನ ಸವಾರರು ಸಂಚಾರಕ್ಕೆ ಹರಸಾಹಸ ಪಡಬೇಕು. ಒಂದರ ಹಿಂದೆ ಒಂದರಂತೆ ವೇಗವಾಗಿ ಸಾಗುವ ವಾಹನಗಳ ನಡುವೆ ಪಾದಚಾರಿಗಳು ಜೀವ ಪಣಕ್ಕಿಟ್ಟು ಓಡಾಡುವಂತಹ ದುಸ್ಥಿತಿ ಇದೆ.

ಸ್ಮಶಾನದ ಎದುರು ಗುಂಡಿಗಳಲ್ಲಿ ಯಾವಾಗಲೂ ಕೊಳಚೆ ನೀರು ನಿಂತು ಗಬ್ಬೆದ್ದು ನಾರುತ್ತಿರುತ್ತದೆ. ಸಮೀಪದಲ್ಲೇ ನರ್ಮ್ ಮನೆಗಳಲ್ಲಿ ವಾಸವಿರುವ ಜನರಿಗೆ ನಿತ್ಯ ನರಕಯಾತನೆ. ಇದೇ ಜಾಗದಲ್ಲಿ ಇಂದಿರಾ ಕ್ಯಾಂಟೀನ್ ಇದ್ದು, ಅಲ್ಲಿ ಆಹಾರ ಸೇವನೆ ಮಾಡುವುದನ್ನು ಊಹಿಸಿಕೊಳ್ಳುವುದು ಕಷ್ಟ ಮಳೆ ಬಂದರಂತೂ ಇಲ್ಲಿ ಕೆರೆ ನಿರ್ಮಾಣವಾಗುತ್ತದೆ. ದೊಡ್ಡ ಮೋರಿಗೆ ಸರಾಗವಾಗಿ ನೀರು ಹರಿಯಲು ವ್ಯವಸ್ಥೆ ಮಾಡಿರದ ಕಾರಣ ಮಳೆ ನಿಂತರೂ ನೀರು ಖಾಲಿಯಾಗುವುದಿಲ್ಲ. ನೀರಿನಲ್ಲಿ ಕೊಚ್ಚಿ ಬಂದ ಮರಳುಮಿಶ್ರಿತ ಮಣ್ಣು ರಸ್ತೆಯಲ್ಲೆಲ್ಲಾ ಹರಡುವುದರಿಂದ ದ್ವಿಚಕ್ರ ವಾಹನಗಳು ಸ್ಕಿಡ್ ಆಗಿ ಅದೆಷ್ಟೋ ಜನ ಪೆಟ್ಟು ತಿಂದಿದ್ದಾರೆ.

ಯುಜಿಡಿ ಮ್ಯಾನ್‌ಹೋಲ್‌ಗಳು ಮಳೆಗಾಲದಲ್ಲಿ ತುಂಬಿ ಹರಿದು ಹೊಂಡದಲ್ಲಿ ನಿಂತು ದುರ್ವಾಸನೆ ಬೀರುತ್ತಿದೆ. ಸ್ಮಶಾನದ ಪ್ರವೇಶ ದ್ವಾರದ ಬಳಿ ದ್ವಿಚಕ್ರ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಆಯತಪ್ಪಿ ಕೊಳಚೆ ನೀರಿಗೆ ಬೀಳುವುದು ಗ್ಯಾರಂಟಿ. ವಾರದಲ್ಲಿ ಐದಾರು ಮಂದಿ ಬಿದ್ದು ಗಾಯಗೊಂಡು ಆಸ್ಪತ್ರೆಗೆ ಹೋಗುವುದು ಮಾಮೂಲಾಗಿದೆ. ಸ್ಮಶಾನಕ್ಕೆ ಅಂತ್ಯಸಂಸ್ಕಾರಕ್ಕೆ ಕರೆದೊಯ್ಯುವಾಗ ಪಾರ್ಥಿವ ಶರೀರವೂ ಈ ರಸ್ತೆಯ ದುಸ್ಥಿತಿ ಬಗ್ಗೆ ದುಃಖಿಸಬಹುದು.

ಹೊರರಾಜ್ಯಗಳ ಅಭಿವೃದ್ಧಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡುವಷ್ಟು ಮುಂದಾಲೋಚನೆಯುಳ್ಳ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಇಲ್ಲಿನ ಅಧ್ವಾನ ಸರಿಪಡಿಸುವ ಇಚ್ಛೆಯಿಲ್ಲದಿರುವುದು ವಿಷಾದನೀಯ. ಜೋಡಿ ತೆಂಗಿನಮರ ರಸ್ತೆಯ ದುಸ್ಥಿತಿಯನ್ನು ಒಮ್ಮೆ ಕಣ್ಣಾರೆ ನೋಡುವಂತೆ ಮನವಿ ಮಾಡಿದರೂ ಯಾರಿಗೂ ಪುರುಸೊತ್ತಿಲ್ಲ. ಜನರ ಜೀವಕ್ಕೆ ಸಂಚಕಾರವಿದ್ದರೂ ಇದು ಅವರಿಗೆ ಗಂಭೀರ ಸಮಸ್ಯೆ ಎನಿಸಿಲ್ಲ. ಒಮ್ಮೆಯಾದರೂ ಈ ರಸ್ತೆ ಮಾರ್ಗವಾಗಿ ಹಾದು ಹೋದರೆ ಸಮಸ್ಯೆ ಅರಿವಾಗುತ್ತದೆ ಎಂಬುದು ಸಾರ್ವಜನಿಕರ ಬೇಸರದ ನುಡಿಯಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ


ಮೈಸೂರು, ಜೂ.19(ಎಸ್‌ಪಿಎನ್)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದಿಂದ ಜು.15ರಂದು ಕಟ್ಟಡ ಕಾರ್ಮಿಕರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಹಮ್ಮಿಕೊಂಡಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯ ಕಟ್ಟಡ ಕಾರ್ಮಿಕರ ಮಕ್ಕಳು 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು 2ನೇ ಪಿಯುಸಿ ಪರೀಕ್ಷೆಯಲ್ಲಿ ಶೇ.75 ಅಥವಾ ಅದಕ್ಕೂ ಮೇಲ್ಪಟ್ಟು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳು ಅಂಕಪಟ್ಟಿ, ಭಾವಚಿತ್ರ, ಕಾರ್ಮಿಕರ ಗುರುತಿನ ಚೀಟಿಯ ನಕಲು ಪ್ರತಿ ಹಾಗೂ ಅಂಚೆವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ನಮೂದಿಸಿ, ಜು.8ರೊಳಗೆ ಬಿಎಐ ಕಚೇರಿಗೆ ತಲುಪಿಸಬೇಕಾಗಿ ಕಾರ್ಯದರ್ಶಿ ಬಾಲಾಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ ಕಚೇರಿ, ನಂ.34/ಡಿ, ಅಕ್ಕಮಹಾದೇವಿ ರಸ್ತೆ, 2ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು –570008 ಇಲ್ಲಿಗೆ ಕಚೇರಿ ವೇಳೆ ಕಳುಹಿಸುವಂತೆ ಮನವಿ ಮಾಡಿದ್ದಾರೆ. ವಿವರಗಳಿಗೆ ದೂ.ಸಂ: 0821–2483333 ಕಾರ್ಯಕಾರಿ ಸಮಿತಿ ಸದಸ್ಯ ಅಶ್ವತ್‌ನಾರಾಯಣ್ ಮೊ. 9449132379 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯುದ್ಧ ಸ್ಮಾರಕಕ್ಕೆ ಹಾಸನದ ಅಲಂಕಾರಿಕ ಹಸಿರು ಕಲ್ಲು

ವಾರ್ ಮೆಮೋರಿಯಲ್‌ಗಾಗಿ ಹಾಸನದ ಉದ್ಯಮಿ ಎಲ್.ಕೆ.ವಿಜಯಕುಮಾರ್‌ರಿಂದ 25 ಲಕ್ಷ ರೂ.ಗಳ ಹಸಿರು ಕಲ್ಲು ಕೊಡುಗೆ





ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜೂ.19– ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಮೀಪದ ಮೈದಾನದಲ್ಲಿ ನಿರ್ಮಿಸುತ್ತಿರುವ 'ಯುದ್ಧ ಸ್ಮಾರಕ' ಕಾಮಗಾರಿ ಕಳೆದ ಎರಡು ತಿಂಗಳಿಂದ ಸ್ಥಗಿತಗೊಂಡಿದ್ದು, ಈಗ ಮತ್ತೆ ಚುರುಕು ಪಡೆದುಕೊಂಡಿದೆ. ಸ್ಮಾರಕ ನಿರ್ಮಾಣಕ್ಕಾಗಿ ಹಾಸನದ ಉದ್ಯಮಿಯೊಬ್ಬರು 25 ಲಕ್ಷ ರೂ.ಮೌಲ್ಯದ ಅಲಂಕಾರಿಕ ಹಸಿರು ಕಲ್ಲನ್ನು ಉಡುಗೊರೆಯಾಗಿ ನೀಡುವ ಮೂಲಕ ದೇಶಭಕ್ತಿ ಪ್ರದರ್ಶಿಸಿದ್ದಾರೆ.

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕಾಗಿ ಕಳೆದ 20 ವರ್ಷದ ಹೋರಾಟಕ್ಕೆ ಪ್ರತಿಫಲ ಸಿಕ್ಕಿದ್ದು, ಈಗಾಗಲೇ ಸ್ಮಾರಕ ನಿರ್ಮಾಣದ ಕಾಮಗಾರಿ ಆರಂಭವಾಗಿದೆ. ಸ್ಮಾರಕದ ಬೇಸ್‌ಮೆಂಟ್ ಕಾಮಗಾರಿ ಪೂರ್ಣಗೊಂಡಿದ್ದು, ವಿಧಾನಸಭಾ ಚುನಾವಣೆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸ್ಮಾರಕದ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ಸ್ಮಾರಕದ ಮೇಲೆ ಬೃಹತ್ ಕಲ್ಲುಗಳನ್ನು ಜೋಡಣೆ ಮಾಡುವ ಕಾರ್ಯ ಮಾತ್ರ ಬಾಕಿ ಇದ್ದು, ಅದಕ್ಕೆ ಪಾಲಿಶ್ ಮಾಡುವ ಕಾರ್ಯಕ್ಕೆ ಟೆಂಡರ್ ಕರೆಯುವುದು ಬಾಕಿ ಇದೆ.

ಹಸಿರು ಕಲ್ಲು ಬಳಕೆ: ಯುದ್ಧ ಸ್ಮಾರಕವನ್ನು ಕೇವಲ ಕಾಂಕ್ರೀಟ್ ಕಟ್ಟಡವಾಗಿಸದೇ, ಅದಕ್ಕೆ ಪಾರಂಪರಿಕ ಸ್ಪರ್ಶ ನೀಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಸ್ಮಾರಕದ ಸುತ್ತಲೂ ಅಲಂಕಾರಿಕ ಕಲ್ಲುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಹಾಸನದ ಅಪರ ಜಿಲ್ಲಾಧಿಕಾರಿ, ಮಾಜಿ ಸೈನಿಕರೂ ಆಗಿರುವ ಸಿ.ಎಲ್.ಆನಂದ್ ಅವರ ಕೋರಿಕೆ ಮೇರೆಗೆ ಹಾಸನದ ಗಣೇಶ್ ಎಂಟರ್‌ಪ್ರೈಸಸ್ ಮಾಲೀಕ ಎಲ್.ಕೆ.ವಿಜಯಕುಮಾರ್ ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಳಿಲು ಸೇವೆ ನೀಡಲು ಸಮ್ಮತಿಸಿದ್ದಾರೆ. 25 ಲಕ್ಷ ರೂ. ಮೌಲ್ಯದ 3 ಸಾವಿರ ಚದರ ಅಡಿ ಉತ್ಕೃಷ್ಟವಾದ ಹಸಿರು ಕಲ್ಲನ್ನು ಉಚಿತವಾಗಿ ಉಡುಗೊರೆ ನೀಡಿದ್ದಾರೆ. ಯುದ್ಧ ಸ್ಮಾರಕದ ಸುತ್ತಲೂ ಅಳವಡಿಸಲು ಅಳತೆಗೆ ಅನುಗುಣವಾಗಿ ಕತ್ತರಿಸಿ, ಪಾಲಿಶ್ ಮಾಡಿ ಕೊಟ್ಟಿದ್ದಾರೆ. ಹಾಸನದಿಂದ ಒಂದು ಲಾರಿಯಲ್ಲಿ ತಂದಿರುವ ಹಸಿರು ಕಲ್ಲನ್ನು ಜಿಲ್ಲಾಡಳಿತ ಸ್ವೀಕರಿಸಿದ್ದು, ಸ್ಮಾರಕ ನಿರ್ಮಾಣದ ಸ್ಥಳದಲ್ಲಿ ಸುರಕ್ಷಿತವಾಗಿ ದಾಸ್ತಾನು ಮಾಡಲಾಗಿದೆ.

ಟೆಂಡರ್ ಪ್ರಕ್ರಿಯೆ: ಯುದ್ಧ ಸ್ಮಾರಕಕ್ಕೆ ಕಲ್ಲುಗಳನ್ನು ಜೋಡಣೆ ಮಾಡಲಾಗುತ್ತದೆ. ಆ ಕಲ್ಲುಗಳನ್ನು ಪಾಲಿಶ್ ಮಾಡಿ, ಅದರ ಮೇಲೆ ಕೆತ್ತನೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡರೆ ಸ್ಲಾಬ್‌ಗಳನ್ನು ಪಾಲಿಶ್ ಮಾಡಿದ ಬಳಿಕ ಸ್ಮಾರಕದ ಮೇಲೆ ಜೋಡಣೆ ಮಾಡಲಾಗುತ್ತದೆ. ಆ ಬಳಿಕವಷ್ಟೇ ಸುತ್ತಲೂ ಹಸಿರು ಕಲ್ಲು ಹಾಸಲಾಗುತ್ತದೆ.

1.50 ಕೋಟಿ ರೂ. ಮೌಲ್ಯದ ಉತ್ಕೃಷ್ಟ ಶಿಲೆ: ಸ್ಮಾರಕ ನಿರ್ಮಾಣಕ್ಕಾಗಿ ಚಾಮರಾಜನಗರ ಜಿಲ್ಲೆಯ ಕ್ವಾರಿ ಮಾಲೀಕ ಹೆಚ್.ಎಂ.ಪುಟ್ಟಮಾದಯ್ಯ ಬಿನ್ ಪಟೇಲ್ ಮಾದಪ್ಪ (80) ಎಂಬುವರು 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆ (ಉತ್ಕೃಷ್ಟ ಕಲ್ಲು)ಯನ್ನು ಸರ್ಕಾರಕ್ಕೆ ರಾಜಧನ ಹಾಗೂ ವಿವಿಧ ಶುಲ್ಕ ಪಾವತಿಸಿ ಉಚಿತವಾಗಿ ನೀಡಿದ್ದಾರೆ. ಕ್ವಾರಿಯಿಂದ 300 ಟನ್ ತೂಕದ ಕಚ್ಚಾಶಿಲೆಯನ್ನು ಚಾಮರಾಜನಗರದ ಎಸ್‌ವಿಜಿ ಗ್ರಾನೈಟ್ಸ್ ಮಾಲೀಕ ಎ.ಶ್ರೀನಾಥ್ ಬಿನ್ ಶಿವಶಂಕರ್‌ರೆಡ್ಡಿ ಯಾವುದೇ ಶುಲ್ಕ ಪಡೆಯದೇ ಸ್ಮಾರಕ ನಿರ್ಮಾಣಕ್ಕೆ ಅನುಗುಣವಾಗಿ ಬೇಕಾದ ಆಕಾರದಲ್ಲಿ ಕತ್ತರಿಸಿಕೊಟ್ಟಿದ್ದಾರೆ.

2000ರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಿಸಿ ವೀಕೇರ್ ನಿವೃತ್ತ ಸೈನಿಕರ ಟ್ರಸ್ಟ್‌ನ ಎಂ.ಎನ್. ಸುಬ್ರಹ್ಮಣಿ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. 2010ರಲ್ಲಿ ಮತ್ತೊಮ್ಮೆ ಮನವಿ ಸಲ್ಲಿಸಿದ ಪರಿಣಾಮ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಹುಡುಕುವ ಪ್ರಕ್ರಿಯೆ ನಡೆಸಲಾಗಿತ್ತು. ನಂತರ ಅದು ನನೆಗುದಿಗೆ ಬಿದ್ದಿತ್ತು. ಆದರೆ 2012ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಗಿತ್ತು 2016ರಲ್ಲಿ ನಿವೃತ್ತ ಯೋಧರೂ ಆಗಿರುವ ಮೈಸೂರು ಉಪ ವಿಭಾಗಾಧಿಕಾರಿಯಾಗಿದ್ದ ಸಿ.ಎಲ್. ಆನಂದ್ (ಹಾಲಿ ಹಾಸನ ಅಪರ ಜಿಲ್ಲಾಧಿಕಾರಿ) ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಾದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು.

ಸ್ಮಾರಕದಲ್ಲಿ: ಯುದ್ಧ ಸ್ಮಾರಕ ಪಾರಂಪರಿಕ ಶೈಲಿಯಲ್ಲಿಯೇ ನಿರ್ಮಾಣವಾಗಲಿದ್ದು, ಚೌಕಾಕಾರದಲ್ಲಿ ನಿರ್ಮಿಸಲಾಗುತ್ತದೆ. ಒಂದು ಭಾಗದಲ್ಲಿ ಮೂರು ವಿಧದ ಸೈನ್ಯದ ಸಂಕೇತದೊಂದಿಗೆ ದ್ವಾರ ನಿರ್ಮಿಸಲಾಗುತ್ತದೆ. ನಂತರ ಉಳಿದ ಮೂರು ಬದಿಯಲ್ಲಿ ಭೂ ಸೇನೆ, ವಾಯುಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಬಳಸಲ್ಪಟ್ಟ ಯುದ್ಧ ಪರಿಕರ ನೀಡಲು ಸೇನೆ ಸಮ್ಮತಿಯೂ ಸೂಚಿಸಿದೆ.

ಅನೈರ್ಮಲ್ಯತೆಯಿಂದ ಕೂಡಿದ್ದ ಕುಡಿಯುವ ನೀರಿನ ಘಟಕದ ಸುತ್ತಮುತ್ತ ಸ್ವಚ್ಛತೆ



ಮಿತ್ರನ ಫಲಶ್ರುತಿ

ಮೈಸೂರು, ಜೂ.19(ಎಂಕೆ)– ಅನೈರ್ಮಲ್ಯತೆಯಿಂದ ಕೂಡಿದ್ದ ಕೆಂಪನಂಜಾಂಬ ಅಗ್ರಹಾರದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶುಚಿಗೊಳಿಸಲಾಗಿದ್ದು, ಘಟಕದ ಸುತ್ತಲೂ ಫೆನ್ಸಿಂಗ್ ಅಳವಡಿಸಲು ನಿರ್ಧರಿಸಲಾಗಿದೆ.

ಜೂ.15ರ 'ಮೈಸೂರು ಮಿತ್ರ'ನಲ್ಲಿ 'ಶುದ್ಧ ಕುಡಿಯುವ ನೀರಿನ ಘಟಕದ ಸುತ್ತ 'ಅಶುದ್ಧ ಪರಿಸ್ಥಿತಿ' ಶೀರ್ಷಿಕೆಯಡಿ ಶುದ್ಧ ಕುಡಿಯುವ ನೀರಿನ ಘಟಕದ ದುಸ್ಥಿತಿ ಕುರಿತು ವರದಿ ಮಾಡಲಾಗಿತ್ತು. ಇದನ್ನು ಗಮನಿಸಿದ ವಾರ್ಡ್ ನಂ.51ರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಮತ್ತು ಪಾಲಿಕೆ ಅಧಿಕಾರಿಗಳು, ಸ್ವಚ್ಛತಾ ಸಿಬ್ಬಂದಿ ಘಟಕದ ಸುತ್ತಲೂ ಶುಚಿಗೊಳಿಸಿದ್ದಾರೆ.

ಅಲ್ಲದೆ ನೀರಿನ ಘಟಕದ ಸುತ್ತಲೂ ದ್ವಿಚಕ್ರ ವಾಹನಗಳು, ಕಾರುಗಳನ್ನು ಪಾರ್ಕಿಂಗ್ ಮಾಡದಂತೆ ಅಕ್ಕ-ಪಕ್ಕ ಮಳಿಗೆಗಳ ಮಾಲೀಕರು ಗಮನಿಸಿ ತಿಳಿಸಬೇಕು ಎಂದು ಸೂಚಿಸಿದರಲ್ಲದೆ ನೀರಿನ ಘಟಕದ ಪಕ್ಕದಲ್ಲಿದ್ದ ಟೀ ಅಂಗಡಿಯನ್ನು ತೆರವುಗೊಳಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕದ ಹಿಂಬದಿಯಲ್ಲಿರುವ ಅರಳಿ ಕಟ್ಟೆ, ದೇವಸ್ಥಾನದ ಆವರಣದಲ್ಲೂ ಸ್ವಚ್ಛ ಮಾಡಲಾಗಿದೆ. ಘಟಕ ಹಾಗೂ ದೇವಸ್ಥಾನಕ್ಕೆ ಪೇಂಟಿಂಗ್, ಘಟಕ ಸುತ್ತಲೂ ಫೆನ್ಸಿಂಗ್ ಅಳವಡಿಸುವ ಮೂಲಕ ಸ್ವಚ್ಛತೆ ಕಾಪಾಡಲು ನಿರ್ಧರಿಸಲಾಗಿದೆ.

10 ಲಕ್ಷ ರೂ.ಅನುದಾನ...!

ಕುಡಿಯುವ ನೀರಿನ ಘಟಕದ ಕುರಿತು ಸುದ್ದಿ ಪ್ರಕಟವಾದ ಬಳಿಕ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ಘಟಕದ ಸುತ್ತಲೂ ಫುಟ್‌ಪಾತ್ ನಿರ್ಮಾಣ, ಹಾಳಾಗಿರುವ ಗ್ರಿಲ್‌ಗಳನ್ನು ತೆರವುಗೊಳಿಸಿ, ಇಂಟರ್‌ಲಾಕ್ ಟೈಲ್ಸ್‌ಗಳನ್ನು ಅಳವಡಿಸಿ ಸುತ್ತಲೂ ಫೆನ್ಸಿಂಗ್ ಹಾಕುವುದಕ್ಕೆ 10 ಲಕ್ಷ ರೂ. ಅನುದಾನ ನೀಡಲಾಗಿದೆ. ಅಲ್ಲದೆ ಸಂಬಂಧಪಟ್ಟ ಸಂಚಾರ ಪೊಲೀಸ್ ಠಾಣೆ ಅಧಿಕಾರಿಗಳೊಂದಿಗೆ ಮಾತನಾಡಿ, ನೀರಿನ ಘಟಕದ ಬಳಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸುವಂತೆಯೂ ಮನವಿ ಮಾಡಲಾಗಿದೆ.

- ಬಿ.ವಿ.ಮಂಜುನಾಥ್, ನಗರಪಾಲಿಕೆ ಸದಸ್ಯ, ವಾರ್ಡ್ ನಂ.51

ಮತ್ತೆ ಹಾಳಾಗುವ ಆತಂಕ: ಶುದ್ಧ ಕುಡಿಯುವ ನೀರಿನ ಘಟಕದ ಸುತ್ತಲೂ ಸದ್ಯಕ್ಕೆ ಶುಚಿಗೊಳಿಸಿ, ಪಕ್ಕದಲ್ಲಿದ್ದ ಟೀ ಅಂಗಡಿ ತೆರವುಗೊಳಿಸಲಾಗಿದೆ. ಆದರೆ ಸುತ್ತಲೂ ಬಾರ್‌ಗಳಿರುವುದರಿಂದ ಮತ್ತೆ ಕೊಚ್ಚೆ ಗುಂಡಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಅಲ್ಲದೆ ಟೀ ಅಂಗಡಿಯನ್ನು ಮತ್ತೆ ತೆರೆಯಲಿದ್ದಾರೆ ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಕೇರ್ಗಳ್ಳಿಯಲ್ಲಿ ಮಹಿಳೆ ಆತ್ಮಹತ್ಯೆ

ಮೈಸೂರು, ಜೂ.19(ಆರ್‌ಕೆ)–ಕೌಟುಂಬಿಕ ಕಲಹದಿಂದ ಬೇಸತ್ತ ಗೃಹಿಣಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ತಾಲೂಕು, ಕೇರ್ಗಳ್ಳಿಯಲ್ಲಿ ಭಾನುವಾರ ಸಂಜೆ ಸಂಭವಿಸಿದೆ. ಕೇರ್ಗಳ್ಳಿಯ ನ್ಯಾಯಾಂಗ ಬಡಾವಣೆ ನಿವಾಸಿ ಭಾಸ್ಕರ್ ಪತ್ನಿ ಲಿಲ್ಲಿಶಾಲಿನಿ(35) ನೇಣಿಗೆ ಶರಣಾದ ಮಹಿಳೆ. ಆಟೋ ಚಾಲಕನಾದ ಭಾಸ್ಕರ್‌ನನ್ನು 15 ವರ್ಷಗಳ ಹಿಂದೆ ಮದುವೆಯಾಗಿದ್ದ ಆಕೆ ಎರಡು ಮಕ್ಕಳ ತಾಯಿಯಾಗಿದ್ದರು.

ಪತಿ–ಪತ್ನಿಯರ ನಡುವೆ ಸಾಮರಸ್ಯವಿರದೆ, ಆಗಿಂದಾಗ್ಗೆ ಗಲಾಟೆ ನಡೆಯುತ್ತಿತ್ತು. ಅದರಿಂದ ಮನನೊಂದ ಲಿಲ್ಲಿಶಾಲಿನಿ, ಭಾನುವಾರ ಸಂಜೆ 5 ಗಂಟೆ ವೇಳೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಜಯಪುರ ಠಾಣೆ ಪೊಲೀಸರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೂ.23ರಂದು 'ಅಗ್ರಸೇನಾ' ತೆರೆಗೆ



ಮೈಸೂರು,ಜೂ.19(ಪಿಎಂ)– ಪ್ರೀತಿ ಜೊತೆಗೆ ಅಪ್ಪ ಮತ್ತು ಮಗನ ಬಾಂಧವ್ಯದ ಕಥಾಹಂದರ ಹೊಂದಿರುವ 'ಅಗ್ರಸೇನಾ' ಕನ್ನಡ ಸಿನಿಮಾ ಜೂ.23ರಂದು ಬಿಡುಗಡೆಯಾಗಲಿದೆ ಎಂದು ಸಿನಿಮಾದ ನಿರ್ಮಾಪಕಿ ಮಮತಾ ಜಯರಾಮರೆಡ್ಡಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಸುಮಾರು 80 ಚಿತ್ರಮಂದಿರದಲ್ಲಿ ಸಿನಿಮಾ ಬಿಡುಗಡೆಗೊಳ್ಳಲಿದೆ. ಕುಟುಂಬ ಸಮೇತರಾಗಿ ನೋಡಬಹುದಾದ ಒಂದು ಒಳ್ಳೆಯ ಚಿತ್ರ ಇದಾಗಿದೆ ಎಂದರು. ಚಿತ್ರದ ನಾಯಕ ನಟ ಅಮರ್ ವಿರಾಜ್, ಚಿತ್ರತಂಡದ ವೆಂಕಟ್ ಗೋಷ್ಠಿಯಲ್ಲಿದ್ದರು.

ಪರಿಣಾಮಕಾರಿ ಯುಜಿಡಿ ಸಮಸ್ಯೆ ಪರಿಹಾರಕ್ಕೆ 'ಸೂಪರ್ ಸಕ್ಕರ್ ಯಂತ್ರ'

ಖರೀದಿಗೆ ಟೆಂಡರ್ ಪ್ರಕ್ರಿಯೆ ಆರಂಭ



ಶೇ.80 ರಷ್ಟು ಬಗೆಹರಿಯಲಿದೆ...

ನಗರದಲ್ಲಿ ಯುಜಿಡಿ ಸಮಸ್ಯೆಗಳು ಸಾಕಷ್ಟಿದ್ದು, ಸೂಪರ್ ಸಕ್ಕರ್ ಮೆಷಿನ್‌ಗಳಿಂದ ಶೇ.80 ರಷ್ಟು ಯುಜಿಡಿ ಸಮಸ್ಯೆ ಬಗೆಹರಿಯಲಿದೆ. ಈ ಯಂತ್ರಗಳು ಮ್ಯಾನ್‌ಹೋಲ್ ಒಳಗಡೆ ಇರುವ ತ್ಯಾಜ್ಯವನ್ನು ಸಂಪೂರ್ಣವಾಗಿ ಹೊರತೆಗೆದು ಕ್ಲೀನ್ ಮಾಡುವುದರಿಂದ ಯುಜಿಡಿ ಸಮಸ್ಯೆ ಶೇ.80 ರಷ್ಟು ಕಡಿಮೆಯಾಗಲಿದೆ. ಆದ್ದರಿಂದ ಸೂಪರ್ ಸಕ್ಕರ್ ಯಂತ್ರಗಳನ್ನು ತುರ್ತಾಗಿ ತರುವಂತೆ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಸುಮಾರು 15–20 ದಿನಗಳಲ್ಲಿ ಸೂಪರ್ ಸಕ್ಕರ್ ಯಂತ್ರವನ್ನೊಳಗೊಂಡ ವಾಹನಗಳು ಮೈಸೂರು ನಗರಕ್ಕೆ ಬರಲಿವೆ. ಪ್ರಾಯೋಗಿಕವಾಗಿ ಒಂದು ರೊಬೋಟಿಕ್ ಯಂತ್ರವನ್ನು ತರಿಸಲಾಗಿತ್ತು. ಆದರೆ ನಮ್ಮ ನಿರೀಕ್ಷೆಯ ಮಟ್ಟಕ್ಕೆ ರೋಬೊಟಿಕ್ ಯಂತ್ರ ಕೆಲಸ ಮಾಡುತ್ತಿಲ್ಲ. ಹಾಗಾಗಿ ಅಷ್ಟಕ್ಕೆ ಸೀಮಿತಗೊಳಿಸಲಾಯಿತು.

- ಶಿವಕುಮಾರ್, ಮೇಯರ್

ಮೈಸೂರು, ಜೂ.19(ಎಂಕೆ)– ಯುಜಿಡಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಆಧುನಿಕ ಯಂತ್ರಗಳತ್ತ ಮುಖ ಮಾಡಿರುವ ಮೈಸೂರು ನಗರಪಾಲಿಕೆಗೆ ಬರಲಿವೆ 'ಸೂಪರ್ ಸಕ್ಕರ್ ಯಂತ್ರ'ಗಳು...

ಮೈಸೂರು ನಗರದ ಒಂದಲ್ಲಾ ಒಂದು ಕಡೆ ಪ್ರತಿನಿತ್ಯ ಕಾಡುವ ಯುಜಿಡಿ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದ್ದು, ಸದ್ಯದಲ್ಲಿಯೇ 2 ಸೂಪರ್ ಸಕ್ಕರ್ ಯಂತ್ರಗಳು ಬರಲಿವೆ. ಈಗಾಗಲೇ ಯಂತ್ರಗಳ ಖರೀದಿಗೆ ಟೆಂಡರ್ ಕರೆಯಲಾಗಿದ್ದು, ಜೆಟ್ಟಿಂಗ್ ಮೆಷಿನ್‌ಗಳು, ಆಧುನಿಕ ರೋಬೋಟ್ ಜೊತೆಗೆ ಸೂಪರ್ ಸಕ್ಕರ್ ಯಂತ್ರಗಳನ್ನು ಬಳಸಲಾಗುವುದು.

ಸದ್ಯಕ್ಕೆ ಸುಮಾರು 13 ಜೆಟ್ಟಿಂಗ್ ಮೆಷಿನ್‌ಗಳು, ಒಂದು ರೋಬೋಟಿಕ್ ಯಂತ್ರ ಹಾಗೂ ಐದಾರು ಡಿ–ಸಿಲ್ಟಿಂಗ್ ಯಂತ್ರಗಳ ಮೂಲಕ ಯುಜಿಡಿ ಮ್ಯಾನ್‌ಹೋಲ್‌ಗಳನ್ನು ಕ್ಲೀನ್ ಮಾಡಿ ಒಳಚರಂಡಿ ನೀರು ಸರಾಗವಾಗಿ ಹರಿಯುವಂತೆ ಮಾಡಲಾಗುತ್ತಿದೆ ಆದರೂ ಬಗೆಹರಿಯದ ಯುಜಿಡಿ ಸಮಸ್ಯೆಯನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ನಿವಾರಿಸಲು ಸೂಪರ್ ಸಕ್ಕರ್ ಯಂತ್ರಗಳನ್ನು ಬಳಸಲು ನಿರ್ಧರಿಸಲಾಗಿದೆ.

ಅಧಿಕ ಒತ್ತಡ ನಿರ್ವಹಣೆ: ಸೂಪರ್ ಸಕ್ಕರ್ ಯಂತ್ರಗಳು ಯುಜಿಡಿ ಮ್ಯಾನ್‌ಹೋಲ್‌ಗಳಲ್ಲಿನ ಅಧಿಕ ಒತ್ತಡದಲ್ಲಿಯೂ ನಿರ್ವಹಣೆ ಮಾಡಲಿದೆ. ಒಮ್ಮೆ ಮ್ಯಾನ್‌ಹೋಲ್ ಒಳಗಡೆ ಯಂತ್ರ ಇಳಿಸಿದರೆ ಮ್ಯಾನ್‌ಹೋಲ್‌ನಲ್ಲಿ ತುಂಬಿರುವ ಗಟ್ಟಿ ಪದಾರ್ಥಗಳನ್ನು ಕಟ್ ಮಾಡಿ ನೀರು ಸರಾಗವಾಗಿ ಹರಿಯುವಂತೆ ಮಾಡಲಿವೆ ಎಂದು ಪಾಲಿಕೆ ಇಂಜಿನಿಯರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಿರೀಕ್ಷಿತ ಪ್ರತಿಫಲ ದೊರೆಯಲಿಲ್ಲ: ಯುಜಿಡಿ ನೌಕರರಿಗೆ ಸಾಥ್ ನೀಡಲು ಬ್ಯಾಂಡಿಕೂಟ್ ರೋಬೋಟ್ ಅನ್ನು ಸುಮಾರು 34 ಲಕ್ಷ ರೂ ವೆಚ್ಚದಲ್ಲಿ ಖರೀದಿಸಿದರೂ ಅದರಿಂದ ನಿರೀಕ್ಷಿತ ಪ್ರತಿಫಲ ದೊರೆಯುತ್ತಿಲ್ಲ. ಸದ್ಯಕ್ಕೆ ಕಂಪ್ಲೆಂಟ್ ಬಂದ ಸ್ಥಳಗಳಲ್ಲಿ ರೋಬೋಟ್ ಮೂಲಕ ಯುಜಿಡಿ ಕ್ಲೀನಿಂಗ್ ಮಾಡಲಾಗುತ್ತಿದೆ. ರೋಬೋಟ್ ನಿಯಂತ್ರಿಸಲು ಒಬ್ಬರು ಹಾಗೂ ಅದನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗಲು ಕನಿಷ್ಠ ಇಬ್ಬರು ಬೇಕು. ಅಲ್ಲದೆ ಅದಕ್ಕಾಗಿಯೇ ಪ್ರತ್ಯೇಕ ವಾಹನವೊಂದನ್ನು ಮೀಸಲಿಡಬೇಕು. ಆದ್ದರಿಂದ ಸೂಪರ್ ಸಕ್ಕರ್ ಯಂತ್ರಗಳನ್ನು ತರಲು ನಿರ್ಧರಿಸಲಾಗಿದೆ ಎಂದರು.

ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ಕೂಲಿ ನೀಡದ ಆರೋಪ; ಸಿಐಟಿಯು ಪ್ರತಿಭಟನೆ



ಮೈಸೂರು, ಜೂ.19(ಪಿಎಂ)– ಜಿಲ್ಲೆಯ ಹಲವು ಕೈಗಾರಿಕೆ ಮತ್ತು ಸಂಸ್ಥೆಗಳಲ್ಲಿ ಗುತ್ತಿಗೆಯಡಿ ದುಡಿಯುತ್ತಿರುವ ನೂರಾರು ಕಾರ್ಮಿಕರಿಗೆ ಕನಿಷ್ಠ ಕೂಲಿ ಮತ್ತು ತುಟ್ಟಿಭತ್ಯೆ ನಿರಾಕರಿಸಲಾಗಿದೆ ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಜಿಲ್ಲೆಯ ಸಾಕಷ್ಟು ಕಾರ್ಖಾನೆ, ಹೋಟೆಲ್, ಕ್ಲಬ್, ಹಾಸ್ಟೆಲ್, ಗಾರ್ಮೆಂಟ್ಸ್, ಆಸ್ಪತ್ರೆ, ಖಾಸಗಿ ಶಾಲೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿರುವ ನೂರಾರು ಮಂದಿಗೆ ಕನಿಷ್ಠ ಕೂಲಿ ನೀಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಕೂಲಿ ನಿರಾಕರಿಸಿ ಮಾಲೀಕರು ದುಡಿಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಇದೇ ಏಪ್ರಿಲ್‌ನಿಂದ ಜಾರಿಯಾಗ ಬೇಕಿದ್ದ ತುಟ್ಟಿಭತ್ಯೆ ನಿರಾಕರಿಸಲಾಗಿದೆ. ಬಹುತೇಕ ಕಡೆಗಳಲ್ಲಿ ಅತ್ಯಂತ ಕಡಿಮೆ ವೇತನ ನೀಡಲಾಗುತ್ತಿದೆ. ಜೊತೆಗೆ ಅವಧಿಗೂ ಮೀರಿ ಕೆಲಸ ಮಾಡಿಸಲಾಗುತ್ತಿದೆ. ಇದಕ್ಕೆ ಯಾವುದೇ ಹೆಚ್ಚುವರಿ ಭತ್ಯೆ ಸಹ ನೀಡುತ್ತಿಲ್ಲ ಎಂದು ಆರೋಪಿಸಿದರು.

ಕಾರ್ಮಿಕ ಇಲಾಖೆ ಅಧಿಕಾರಿಗಳು ಜಿಲ್ಲೆಯ ಕಾರ್ಖಾನೆಗಳು ಸೇರಿದಂತೆ ಎಲ್ಲೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾರ್ಮಿಕರಿಗೆ ಸೌಲಭ್ಯ ಕೊಡಿಸಬೇಕು. ಜೊತೆಗೆ ಸೌಲಭ್ಯಗಳನ್ನು ನೀಡದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾಮ್, ಕಾರ್ಯಾಧ್ಯಕ್ಷ ಹೆಚ್.ಎಸ್.ಜಗದೀಶ್, ಕಾರ್ಯದರ್ಶಿ ಬಾಲಾಜಿ ರಾವ್, ಕಾರ್ಮಿಕ ಮುಖಂಡರಾದ ಮೆಹಬೂಬ್, ಜಯಚಂದ್ರ ಬಸವಯ್ಯ, ನವೀನ್, ಶ್ರೀಕಂಠ, ನಾಗೇಂದ್ರ, ಸುಂದರ್ ಪಾಲ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಿಗೆ ಡಾ.ಎಸ್.ಸೆಲ್ವಕುಮಾರ್, ಮಂಡ್ಯಕ್ಕೆ ಡಾ.ಜಾಫರ್, ಚಾ.ನಗರಕ್ಕೆ ಮಂಜುನಾಥ್ ಪ್ರಸಾದ್, ಕೊಡಗಿಗೆ ಡಾ.ಪ್ರಸಾದ್, ಹಾಸನಕ್ಕೆ ಡಾ.ಅಜಯ್ ನಾಗಭೂಷಣ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ



ಸೆಲ್ವ ಕುಮಾರ್ ಮಂ. ಪ್ರಸಾದ್ ಡಾ.ಜಾಫರ್ ಡಾ.ಪ್ರಸಾದ್ ಡಾ.ಅಜಯ್

ಬೆಂಗಳೂರು : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ನೇಮಕ ಮಾಡಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ. ರಾಜ್ಯದ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳ ಜಾರಿ ಮತ್ತು ಪರಿಶೀಲನೆ ಹಾಗೂ ಅಹವಾಲುಗಳ ವಿಚಾರಣೆ, ಅನಿರೀಕ್ಷಿತ ತಪಾಸಣೆ ಕುರಿತು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳನ್ನು ವಿವಿಧ ಜಿಲ್ಲೆಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಗಿತ್ತು ಮುಂದುವರೆದು, ಪಟ್ಟಿಯ ಅನುಸಾರ ಜಿಲ್ಲಾವಾರು ಅಧಿಕಾರಿಗಳನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು: ಟಿ.ಕೆ. ಅನಿಲ್ ಕುಮಾರ್ – ಬೆಂಗಳೂರು ನಗರ, ಸಲ್ಮಾ ಕೆ. ಫಾಹಿಂ – ಬೆಂಗಳೂರು ಗ್ರಾಮಾಂತರ, ವಿ. ರಶ್ಮಿ ಮಹೇಶ್ – ರಾಮನಗರ, ಅಮಲಾನ್ ಆದಿತ್ಯ ಬಿಸ್ವಾಸ್ – ಚಿತ್ರದುರ್ಗ, ಡಾ. ಏಕ್ ರೂಪ್ ಕೌರ್ – ಕೋಲಾರ, ಅಂಜುಂ ಪರ್ವೇಜ್ – ಬೆಳಗಾವಿ, ಡಾ. ಎನ್. ಮಂಜುಳ – ಚಿಕ್ಕಬಳ್ಳಾಪುರ, ಎಸ್. ಆರ್. ಉಮಾಶಂಕರ್ – ಶಿವಮೊಗ್ಗ, ಗುಂಜನ್ ಕೃಷ್ಣ– ದಾವಣಗೆರೆ, ಡಾ.ಎಸ್. ಸೆಲ್ವ ಕುಮಾರ್ – ಮೈಸೂರು, ಡಾ.ಪಿ.ಸಿ. ಜಾಫರ್– ಮಂಡ್ಯ, ಮಂಜುನಾಥ ಪ್ರಸಾದ್.ಎನ್ – ಚಾಮರಾಜನಗರ, ಡಾ.ಎಂ.ಎನ್. ಅಜಯ್ ನಾಗಭೂಷಣ್ – ಹಾಸನ, ಡಾ.ಎನ್.ವಿ.ಪ್ರಸಾದ್ – ಕೊಡಗು, ರಾಜೇಂದರ್ ಕುಮಾರ್ ಕಠಾರಿಯಾ – ಚಿಕ್ಕಮಗಳೂರು, ಡಾ. ಎಂ.ಟಿ. ರೇಜು – ಉಡುಪಿ, ಎಲ್.ಕೆ ಅತೀಕ್ – ದಕ್ಷಿಣ ಕನ್ನಡ, ಜಿ.ಸತ್ಯವತಿ – ತುಮಕೂರು, ವಿ.ಅನ್ಬುಕುಮಾರ್ – ಧಾರವಾಡ, ಸಿ. ಶಿಖಾ – ಗದಗ, ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜಾ – ವಿಜಯಪುರ, ರಿತೇಶ್ ಕುಮಾರ್ ಸಿಂಗ್– ಉತ್ತರ ಕನ್ನಡ, ಮೊಹಮ್ಮದ್ ಮೊಹಿಸಿನ್ – ಬಾಗಲಕೋಟೆ, ಪಂಕಜ್ ಕುಮಾರ್ ಪಾಂಡೆ – ಕಲಬುರಗಿ, ಮನೋಜ್ ಜೈನ್ – ಯಾದಗಿರಿ, ಡಾ. ಜೆ.ರವಿಶಂಕರ್ – ರಾಯಚೂರು, ನವೀನ್ ರಾಜ್ ಸಿಂಗ್ – ಕೊಪ್ಪಳ, ಡಾ. ಕೆ.ವಿ. ಲೋಕ್ ಚಂದ್ರ – ಬಳ್ಳಾರಿ, ಮುನೀಶ್ ಮೌದ್ಗಿಲ್ – ಬೀದರ್, ಡಾ.ವಿಶಾಲ್.ಆರ್ – ಹಾವೇರಿ, ಕೆ.ಪಿ.ಮೋಹನ್‌ರಾಜ್ – ವಿಜಯನಗರ

ನಾಳೆ ಮೈಸೂರಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, 45 ನಿಮಿಷಗಳ ಯೋಗ ಪ್ರದರ್ಶನ



ಮೈಸೂರು,ಜೂ.19(ಪಿಎಂ)– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಹಾಗೂ ಯೋಗನಿರತ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜೂ.21ರಂದು ಮೈಸೂರು ಅರಮನೆ ಮುಂಭಾಗ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ 45 ನಿಮಿಷಗಳ ಯೋಗಾಸನ ಪ್ರದರ್ಶನ ಆಯೋಜಿಸಲಾಗಿದೆ ಎಂದು ಯೋಗ ಫೆಡರೇಷನ್ ಆಫ್ ಮೈಸೂರು ಅಧ್ಯಕ್ಷ ಡಿ.ಶ್ರೀಹರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಸುದೈವ ಕುಟುಂಬಕಂ'–'ಹರ್ ಘರ್ ಆಂಘನ್ ಯೋಗ' ಶೀರ್ಷಿಕೆಯಡಿ ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದೆ. ಮೈಸೂರು ಅರಮನೆ ಮುಂಭಾಗ ಅಂದು ಬೆಳಗ್ಗೆ 6ರಿಂದ 8ರವರೆಗೆ ಕಾರ್ಯಕ್ರಮ ನಡೆಯಲಿದ್ದು, ಇದೇ ಸಂದರ್ಭದಲ್ಲಿ 10 ಸಾವಿರ ಯೋಗಪಟುಗಳು 45 ನಿಮಿಷಗಳ ಯೋಗ ಪ್ರದರ್ಶನ ನೀಡಲಿದ್ದಾರೆ ಎಂದರು.

ಯೋಗ ಫೆಡರೇಷನ್ ಆಫ್ ಮೈಸೂರು, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಪತಂಜಲಿ ಯೋಗ ಸಮಿತಿ, ಮೈಸೂರು ಯೋಗ ಒಕ್ಕೂಟ, ಮೈಸೂರು ಯೋಗ ಸ್ಪೋರ್ಟ್ಸ್ ಫೌಂಡೇಷನ್, ಜಿಎಸ್‌ಎಸ್ ಯೋಗಿಕ್ ರಿಸರ್ಚ್ ಫೌಂಡೇಷನ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಶಾಲಾ–ಕಾಲೇಜುಗಳು ಸೇರಿದಂತೆ ಇನ್ನಿತರ ಯೋಗ ಸಂಸ್ಥೆಗಳ ಯೋಗ ಬಂಧುಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಭಾಗವಹಿಸುವ ಯೋಗ ಬಂಧುಗಳು ಕುಡಿಯುವ ನೀರು, ಯೋಗ ಮ್ಯಾಟ್ ತರುವ ಜೊತೆಗೆ ಯೋಗಕ್ಕೆ ಸೂಕ್ತ ಉಡುಪು ಧರಿಸಿ ಬರಬೇಕು. ಅರಮನೆಯ ವರಾಹ ದ್ವಾರ, ಬಲರಾಮ ದ್ವಾರ, ಕರಿಕಲ್ಲಿನ ತೊಟ್ಟಿ ದ್ವಾರ ಹಾಗೂ ಜಯರಾಮ ದ್ವಾರದಲ್ಲಿ ಯೋಗಪಟುಗಳು ಪ್ರವೇಶ ಪಡೆಯಬೇಕು. ಆಯಾ ದ್ವಾರಗಳ ಪಕ್ಕದಲ್ಲೇ ವಾಹನ ನಿಲುಗಡೆಗೆ ಅವಕಾಶ ಇರಲಿದೆ ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಇರಲಿದೆ. ಸ್ವಚ್ಛತೆಯ ನಿರ್ವಹಣೆಯನ್ನು ಪಾಲಿಕೆ ನೋಡಿಕೊಳ್ಳಲಿದೆ. ಮುಖ್ಯ ವೇದಿಕೆ ಸೇರಿದಂತೆ ಅಲ್ಲಲ್ಲಿ ಚಿಕ್ಕ ವೇದಿಕೆಗಳಲ್ಲಿ ಹಿರಿಯ ಪಟುಗಳಿಂದ ಯೋಗಾಸನ ಭಂಗಿಗಳ ಪ್ರದರ್ಶನ ಇರಲಿದ್ದು, ಅದರಂತೆ ಯೋಗಪಟುಗಳು ಯೋಗ ಪ್ರದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

ಈ ಬಾರಿ ಯಾವುದೇ ದಾಖಲೆ ನಿರ್ಮಿಸುತ್ತಿಲ್ಲ. ದಾಖಲೆ ನಿರ್ಮಿಸಬೇಕಾದರೆ ಮೂರ್‍ನಾಲ್ಕು ತಿಂಗಳ ಹಿಂದೆಯೇ ಪೂರ್ವ ತಯಾರಿ ಮಾಡಬೇಕಾಗುತ್ತದೆ. ಅರ್ಜಿ ಸಲ್ಲಿಕೆ ಸೇರಿದಂತೆ ಹಲವು ಪ್ರಕ್ರಿಯೆ ನಡೆಸಬೇಕಾಗುತ್ತದೆ. ಈ ಬಾರಿ ಅದು ಸಾಧ್ಯವಾಗಿಲ್ಲ. ಮುಂದಿನ ಬಾರಿಗೆ ದಾಖಲೆ ನಿರ್ಮಿಸಲು ಪ್ರಯತ್ನಿಸುವ ಉದ್ದೇಶ ಹೊಂದಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಯೋಗ ಫೆಡರೇಷನ್ ಆಫ್ ಮೈಸೂರು ಉಪಾಧ್ಯಕ್ಷ ಎಂ.ಎಸ್.ಸತ್ಯನಾರಾಯಣ್, ಸಂಘಟನಾ ಕಾರ್ಯದರ್ಶಿ ಶಶಿಕುಮಾರ್, ಯೋಗ ಶಿಕ್ಷಕಿ ಗೀತಾ ಕುಮಾರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಜಲೇಂದ್ರ ಕುಮಾರ್ ಗೋಷ್ಠಿಯಲ್ಲಿದ್ದರು.

ಜನಪ್ರತಿನಿಧಿಗಳು, ಧರ್ಮಗುರುಗಳು ಭಾಗಿ

ಮೈಸೂರು,ಜೂ.19(ಪಿಎಂ)– ಮೈಸೂರು ಅರಮನೆ ಮುಂಭಾಗ ಜೂ.21ರಂದು ಆಯೋಜಿಸಿರುವ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅಂದು ಬೆಳಗ್ಗೆ 6ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಯೋಗ ಜ್ಯೋತಿ ಬೆಳಗಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಪಾಲ್ಗೊಳ್ಳಲಿದ್ದಾರೆ. ಸಮಾರಂಭದ ಅತಿಥಿಗಳಾಗಿ ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ. ಉಪ ಮೇಯರ್ ಡಾ.ಜಿ.ರೂಪ ಮತ್ತು ಆಯುಷ್ ಇಲಾಖೆ ಆಯುಕ್ತ ಜೆ.ಮಂಜುನಾಥ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸುಂಟಿಕೊಪ್ಪ ಸೇಂಟ್ ಆಂಟೋನಿ ಚರ್ಚ್‌ನ ರೆವರೆಂಡ್ ಫಾದರ್ ಅರುಳ್ ಸೆಲ್ವಕುಮಾರ್, ಜಮಾತ್ ಇ. ಇಸ್ಲಾಮ್‌ನ ಜನಾಬ್ ತಾಜಮುಲ್ ತನ್ವೀರ್ ಪಾಷಾ ಅವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಮಂಗಳವಾರ 20 ಜೂನ್ 2023

ಪ್ರತ್ಯೇಕ ಪ್ರಕರಣ: ಮೂವರ ಸಾವು

- ಬೈಕ್‌ಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ: ಇಬ್ಬರು ಸಾವು
- ಚಲಿಸುತ್ತಿದ್ದ ಸಾರಿಗೆ ಬಸ್‌ನಿಂದ ಬಿದ್ದು ವೃದ್ಧ ಸಾವು: ಪ್ರತಿಭಟನೆ

ಮಂಡ್ಯ, ಜೂ.19– ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ. ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಹಿರಿಕಳಲೆ ಬಳಿ ಬೈಕ್‌ಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಇಬ್ಬರು ಯುವಕರು ಸಾವನ್ನಪ್ಪಿದರೆ, ಪಾಂಡವಪುರ ತಾಲೂಕಿನ ಜಕ್ಕನಹಳ್ಳಿ ಕ್ರಾಸ್ ಬಳಿ ಚಲಿಸುತ್ತಿದ್ದ ಸಾರಿಗೆ ಬಸ್‌ನಿಂದ ಬಿದ್ದು ವೃದ್ಧನೋರ್ವ ಸಾವನ್ನಪ್ಪಿದ್ದಾರೆ.


ಸಂದೇಶ್


ಭರತ್‌ಗೌಡ


ಚಲುವೇಗೌಡ

ಕೆ.ಆರ್.ಪೇಟೆ: ಬೈಕ್‌ಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ತಾಲೂಕಿನ ಹಿರಿಕಳಲೆ ಬಳಿ ಭಾನುವಾರ ರಾತ್ರಿ ಸಂಭವಿಸಿದೆ.

ಹಿರಿಕಳಲೆ ಗ್ರಾಮದ ನಿವಾಸಿಗಳಾದ ಸಂದೇಶ್(21), ಮರಡಹಳ್ಳಿ ಗ್ರಾಮದ ಭರತ್ ಗೌಡ(20) ಸಾವನ್ನಪ್ಪಿದ ಯುವಕರು. ಎಳನೀರು ಕೀಳುವ ಕೆಲಸ ಮಾಡುತ್ತಿದ್ದ ಇವರಿಬ್ಬರೂ ಎಂದಿನಂತೆ ಕೆಲಸ ಮುಗಿಸಿಕೊಂಡು ಭಾನುವಾರ ರಾತ್ರಿ ಚನ್ನರಾಯಪಟ್ಟಣದಿಂದ ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದರು. ಈ ವೇಳೆ ಕೆ.ಆರ್.ಪೇಟೆ ಕಡೆಯಿಂದ ವೇಗವಾಗಿ ಬಂದ ಬೊಲೆರೋ ಗೂಡ್ಸ್ ವಾಹನ (ಕೆಎ.11 ಸಿ.2632) ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಸಂದೇಶ್ ಸಾವನ್ನಪ್ಪಿದರೆ, ಚಿಕಿತ್ಸೆಗಾಗಿ ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಭರತ್‌ಗೌಡ ಸಾವನ್ನಪ್ಪಿದ್ದಾನೆ.

ಘಟನೆ ಸಂಬಂಧ ಸಂದೇಶ್ ಅವರ ತಂದೆ ಕೃಷ್ಣ ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪಾಂಡವಪುರ: ಚಲಿಸುತ್ತಿದ್ದ ಸಾರಿಗೆ ಬಸ್‌ನಿಂದ ಬಿದ್ದು ವೃದ್ಧರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಜಕ್ಕನಹಳ್ಳಿ ಕ್ರಾಸ್‌ನ ಹೇಮಾವತಿ ನಾಲೆ ಬಳಿ ಸೋಮವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಅರಕನಕೆರೆ ಗ್ರಾಮದ ನಿವಾಸಿ ಚಲುವೇಗೌಡ(65) ಮೃತಪಟ್ಟವರು. ಈತ ಜಕ್ಕನಹಳ್ಳಿ ಕ್ರಾಸ್‌ನಲ್ಲಿ ಸೋಮವಾರ ನಡೆದ ಸಂತೆಗೆ ಬಂದಿದ್ದರು ಎನ್ನಲಾಗಿದೆ. ಸಂತೆ ಮುಗಿಸಿಕೊಂಡು ಸ್ವಗ್ರಾಮ ಅರಕನಕೆರೆಗೆ ಸಾರಿಗೆ ಬಸ್‌ನಲ್ಲಿ ತೆರಳುತ್ತಿದ್ದ ಚಲುವೇಗೌಡ ಬಸ್ ರಶ್ ಇದ್ದ ಕಾರಣ ಡೋರ್ ಬಳಿ ನಿಂತಿದ್ದರು ಎನ್ನಲಾಗಿದೆ. ಹೇಮಾವತಿ ನಾಲೆ ಬಳಿ ರಸ್ತೆಯಲ್ಲಿದ್ದ ಗುಂಡಿಗೆ ಬಸ್‌ನ ಚಕ್ರ ಇಳಿದ ಪರಿಣಾಮ ಸಾರಿಗೆ ಬಸ್‌ಗೆ ಡೋರ್ ಇಲ್ಲದ ಕಾರಣ ಆಯತಪ್ಪಿ ಬಿದ್ದು, ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮೇಲುಕೋಟೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ಶವ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳೀಯರಿಂದ ಪ್ರತಿಭಟನೆ: ಘಟನೆಗೆ ಸಾರಿಗೆ ಬಸ್ ಚಾಲಕ ಹಾಗೂ ನಿರ್ವಾಹಕರ ಬೇಜವಾಬ್ದಾರಿಯೇ ಕಾರಣ ಎಂದು ಆರೋಪಿಸಿ ಸ್ಥಳೀಯ ನಿವಾಸಿಗಳು ಮಂಡ್ಯ–ಜಕ್ಕನಹಳ್ಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಾರಿಗೆ ಬಸ್‌ಗೆ ಡೋರ್ ಇಲ್ಲದಿರುವುದೇ ಘಟನೆಗೆ ಕಾರಣ. ಡೋರ್ ಇದ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ ಎಂದು ಸಾರಿಗೆ ಇಲಾಖೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಸಾರಿಗೆ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಮೃತನ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಪಟ್ಟು ಹಿಡಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಸಾರಿಗೆ ವ್ಯವಸ್ಥಾಪಕ ನಾಗರಾಜು, ಅಧಿಕಾರಿಗಳಾದ ದಿನೇಶ್, ಚುಂಚಯ್ಯ ಅವರನ್ನು ಪ್ರತಿಭಟನಾಕಾರರು ತರಾಟೆ ತೆಗೆದುಕೊಂಡರು.

ಡೋರ್ ಇಲ್ಲದ ಬಸ್‌ಗಳನ್ನು ರಸ್ತೆಗೆ ಏಕೆ ಇಳಿಸಿದ್ದೀರಿ? ಡೋರ್ ಇಲ್ಲದ ಬಸ್‌ಗಳನ್ನು ಸಂಚರಿಸಲು ನೀವು ಆರ್‌ಟಿಓ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡಿದ್ದೀರಾ? ಈ ಘಟನೆಗೆ ಯಾರು ಹೊಣೆ? ಎಂದು ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡರು.

ಈ ವೇಳೆ ಅಧಿಕಾರಿಗಳು ಮೃತನ ಕುಟುಂಬದವರಿಗೆ ಪರಿಹಾರ ನೀಡುವುದಾಗಿ ತಿಳಿಸಿದ ಮೇರೆಗೆ ಪ್ರತಿಭಟನೆ ಹಿಂಪಡೆಯಲಾಯಿತು. ಇದೇ ವೇಳೆ ಶವ ಸಂಸ್ಕಾರಕ್ಕಾಗಿ 25 ಸಾವಿರ ನೀಡಿದ ಅಧಿಕಾರಿಗಳು 2.5 ಲಕ್ಷ ರೂ. ಪರಿಹಾರ ನೀಡುವುದಾಗಿ ಭರವಸೆ ನೀಡಿದರು.

ನೂಕು ನುಗ್ಗಲು; ಮುರಿದು ಬಿತ್ತು ಮತ್ತೊಂದು ಡೋರ್



ಮಳವಳ್ಳಿ, ಜೂ.19– ಮಹಿಳೆಯರಿಗೆ ಬಸ್ ಪ್ರಯಾಣ ಉಚಿತವಾದ ಮೇಲೆ ಮಹಿಳೆಯರು ಬಸ್‌ನಲ್ಲಿ ಸಂಚಾರ ಮಾಡುವುದು ಹೆಚ್ಚಾಗಿದ್ದು, ಮಳವಳ್ಳಿಯಿಂದ ಚಾಮರಾಜನಗರಕ್ಕೆ ಹೊರಟಿದ್ದ ಬಸ್‌ನಲ್ಲಿ ಪ್ರಯಾಣಿಕರ ನೂಕು ನುಗ್ಗಲು ಉಂಟಾಗಿ ಬಸ್‌ನ ಬಾಗಿಲು ಮುರಿದು ಬಿದ್ದಿದೆ.

ಬಸ್ ಹತ್ತಲು ನೂಕುನುಗ್ಗಲು ಉಂಟಾಗಿದ್ದರಿಂದ ಬಸ್ ಬಾಗಿಲು ಮುರಿದಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಬಸ್‌ನಲ್ಲಿದ್ದ ಪ್ರಯಾಣಿಕರನ್ನು ಚಾಲಕ ಹಾಗೂ ನಿರ್ವಾಹಕ ಬಸ್‌ನಿಂದ ಇಳಿಸಿ, ಬಸ್‌ನ ಡೋರ್ ಅನ್ನು ಟಿಸಿಗೆ ಒಪ್ಪಿಸಿದ್ದಾರೆ.

ಆದರೆ ಅದೇ ಬಸ್‌ನಲ್ಲಿ ಪ್ರಯಾಣಿಸಲು ಒಪ್ಪದ ಪ್ರಯಾಣಿಕರು ಬದಲಿ ಬಸ್‌ಗೆ ಪಟ್ಟು ಹಿಡಿದಿದ್ದಾರೆ. ಬಳಿಕ ಬೇರೆ ಬಸ್ ವ್ಯವಸ್ಥೆ ಮಾಡಿ, ಪ್ರಯಾಣಿಕರನ್ನು ಚಾಮರಾಜನಗರಕ್ಕೆ ಕರೆದೊಯ್ಯಲಾಯಿತು. ಆದರೆ ಪ್ರಯಾಣಿಕರು ಮಾತ್ರ ಹಳೆಯ ಬಸ್ ಆಗಿರುವುದರಿಂದ ಬಾಗಿಲು ಮುರಿದು ಬಂದಿದೆಯೇ ಹೊರತು ಇದರಲ್ಲಿ ನಮ್ಮದೇನು ತಪ್ಪಿಲ್ಲ ಎಂದಿದ್ದಾರೆ.

ಎಸ್‌ಟಿಜಿಯಲ್ಲಿ ಪಿಯುಸಿ ಮುಗಿಸಿ, ನೀಟ್‌ನಲ್ಲಿ ಟಾಪರ್ ಆಗುವ

ವಿದ್ಯಾರ್ಥಿಗಳಿಗೆ ಉಚಿತ ಮೆಡಿಕಲ್ ಶಿಕ್ಷಣ

ಎಸ್‌ಟಿಜಿ ಸಂಸ್ಥೆ ಅಧ್ಯಕ್ಷರು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭರವಸೆ

ಚಿನಕುರಳಿ, ಜೂ.19– ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ ಮುಗಿಸಿ, ನೀಟ್ ಪರೀಕ್ಷೆಯಲ್ಲಿ ಟಾಪರ್ ಆಗುವ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಉಚಿತ ಮೆಡಿಕಲ್ ಶಿಕ್ಷಣ ಕೊಡಿಸಲಾಗುವುದು ಎಂದು ಸಂಸ್ಥೆ ಅಧ್ಯಕ್ಷರು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭರವಸೆ ನೀಡಿದರು.

ಗ್ರಾಮದ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಸೋಮವಾರ ನಡೆದ ಪೋಷಕರ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ನನ್ನ ಕನಸನ್ನು ಮಕ್ಕಳು ನನಸು ಮಾಡುತ್ತಿದ್ದಾರೆ. 2015ರಲ್ಲಿ 650 ಮಕ್ಕಳಿಂದ ಆರಂಭಗೊಂಡ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಇದೀಗ 2500 ಮಕ್ಕಳಿದ್ದಾರೆ. ಮಕ್ಕಳು ಎಲ್‌ಕೆಜಿಗೆ ದಾಖಲಾಗಿ ಪದವಿ ಶಿಕ್ಷಣ ಮುಗಿಸಿ ಸಂಸ್ಥೆಯಿಂದ ಹೊರ ಹೋಗಬೇಕು ಅನ್ನುವಷ್ಟರ ಮಟ್ಟಿಗೆ ಶಿಕ್ಷಣ ಸಂಸ್ಥೆ ಕಟ್ಟುವುದು ನನ್ನ ಕನಸು ಎಂದರು.

ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲರೂ, ನಮ್ಮ ಕುಟುಂಬದ ಸದಸ್ಯರಿದ್ದಂತೆ. ಸಂಸ್ಥೆಗೆ ಸೇರ್ಪಡೆಗೊಳ್ಳುವ ಮಕ್ಕಳನ್ನು ನಮ್ಮ ಮನೆ ಮಕ್ಕಳಂತೆ ಪೋಷಣೆ ಮಾಡುತ್ತೇವೆ. ಏನಾದರೂ ಸಮಸ್ಯೆಗಳಿದ್ದರೆ ಮಕ್ಕಳು ಅಧ್ಯಾಪಕ ವೃಂದ, ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಬೇಕು. ಮಕ್ಕಳ ಬೆಳವಣಿಗೆಗೆ ಪೋಷಕರು ಸಹಕರಿಸಬೇಕು ಎಂದರು.

ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ಎಸ್‌ಟಿಜಿಯಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶಿಸ್ತು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ನಮ್ಮ ಸಂಸ್ಥೆಗೆ ದಾಖಲಾಗುವ ಮಕ್ಕಳ ಬಗ್ಗೆ ಪೋಷಕರು ಆತಂಕ ಪಡುವ ಅಗತ್ಯವಿಲ್ಲ. ಎಲ್ಲಾ ಮಕ್ಕಳನ್ನು ನಮ್ಮ ಮನೆ ಮಕ್ಕಳಂತೆ ನೋಡಿಕೊಳ್ಳುತ್ತೇವೆ. ಪಿಯುಸಿ ಮಕ್ಕಳ ಭವಿಷ್ಯದ ಮಹತ್ವದ ಘಟ್ಟವಾಗಿರುವುದರಿಂದ ಪೋಷಕರು ಮಕ್ಕಳಿಗೆ ಓದುವಂತೆ ಹೆಚ್ಚಿನ ಒತ್ತಡ ಹೇರಬಾರದು. ಪೋಷಕರು ಮಕ್ಕಳನ್ನು ಕಷ್ಟಪಟ್ಟು ಓದಿಸುತ್ತಾರೆ. ಹೀಗಾಗಿ ಮಕ್ಕಳು ಚೆನ್ನಾಗಿ ಓದಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.



ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕಾಗಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಕಳೆದ ವರ್ಷದಿಂದ ಸಿಇಟಿ, ನೀಟ್, ಜೆಇಇ ಪರೀಕ್ಷೆಗಳ ತರಬೇತಿ ಆರಂಭಿಸಿ, ಉತ್ತಮ ಶಿಕ್ಷಕರನ್ನು ನಿಯೋಜಿಸಿದ್ದೇವೆ. ಈ ವರ್ಷ ನೀಟ್ ಪರೀಕ್ಷೆಯಲ್ಲಿ ಹಲವು ವಿದ್ಯಾರ್ಥಿಗಳು ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾಗಿದ್ದಾರೆ. ಮುಂದಿನ ವರ್ಷದಿಂದ ನೀಟ್, ಜೆಇಇ ಪರೀಕ್ಷೆಯಲ್ಲಿ ನಮ್ಮ ಕಾಲೇಜಿನ ಮಕ್ಕಳು ಹೆಚ್ಚಿನ ಮಟ್ಟದಲ್ಲಿ ತೇರ್ಗಡೆ ಹೊಂದುವ ಹಾಗೆ ತರಬೇತಿ ನೀಡುತ್ತೇವೆ ಎಂದು ಭರವಸೆ ನೀಡಿದರು.

ಚಿನ್ನದ ಬಹುಮಾನ: ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಲಕ್ಷ್ಮಿ ಟಿ.ಎಸ್ ಹಾಗೂ ಜೀವನ್ ಆರ್. ಎಂಬ ವಿದ್ಯಾರ್ಥಿಗಳಿಗೆ ಸಂಸ್ಥೆ ಅಧ್ಯಕ್ಷ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಲಾ 10 ಗ್ರಾಂ ಚಿನ್ನದ ನಾಣ್ಯ ನೀಡಿ ಗೌರವಿಸಿದರು.

ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೆ, ಗಣಿತ, ಕನ್ನಡ, ಜೀವಶಾಸ್ತ್ರ, ಭೌತಶಾಸ್ತ್ರದಲ್ಲಿ ನೂರಕ್ಕೆ ನೂರು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ವಾಚ್ ಹಾಗೂ ಸಿಇಟಿ ಪರೀಕ್ಷೆ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿ ಅಭಿನಂದಿಸಿದರು. ಜೊತೆಗೆ ಮುಂದಿನ ವರ್ಷ ಪ್ರಥಮ ಪಿಯುಸಿ ಬೋರ್ಡ್ ಪರೀಕ್ಷೆಯಲ್ಲಿ ಶೇ.90ಕ್ಕೂ ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಸ್ಕಾಲರ್‌ಶಿಪ್ ನೀಡಲಾಗುವುದು ಎಂದು ಪುಟ್ಟರಾಜು ಘೋಷಿಸಿದರು.

ಸಮಾರಂಭದಲ್ಲಿ ಸಂಸ್ಥೆ ಆಡಳಿತಾಧಿಕಾರಿ ನಿವೇದಿತಾ ನಾಗೇಶ್, ಪ್ರಾಂಶುಪಾಲ ಟಿ.ಮಾರುತಿ, ಉಪನ್ಯಾಸಕ ರಘುಸ್ವಾಮಿ, ನೀಟ್ ತರಬೇತಿ ಸಂಯೋಜಕ ದೇವಿಪ್ರಸಾದ್, ವಿಜಯ ಪ್ರಕಾಶ್ ಸಿಂಗ್, ಸುಬ್ರಹ್ಮಣ್ಯ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.

ನೂತನ ಜಿಲ್ಲಾಧಿಕಾರಿ ಡಾ.ಕುಮಾರ್ ಅಧಿಕಾರ ಸ್ವೀಕಾರ



ಮಂಡ್ಯ, ಜೂ.19– ಮಂಡ್ಯ ನೂತನ ಜಿಲ್ಲಾಧಿಕಾರಿಯಾಗಿ ಡಾ.ಕುಮಾರ್ ಸೋಮವಾರ ಅಧಿಕಾರ ಸ್ವೀಕರಿಸಿದರು. ಅವರಿಗೆ ಈ ಹಿಂದಿನ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರ ಹಸ್ತಾಂತರಿಸಿದರು.

ದಕ್ಷಿಣ ಕನ್ನಡ ಜಿಪಂ ಸಿಇಓ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ.ಕುಮಾರ್ ಅವರನ್ನು ಸರ್ಕಾರ ಮಂಡ್ಯ ಜಿಲ್ಲಾಧಿಕಾರಿಯಾಗಿ ನಿಯೋಜಿಸಿತ್ತು. ಅದರಂತೆ ಸೋಮವಾರ ಅಧಿಕಾರ ಸ್ವೀಕರಿಸಿದರು.

ಬಳಿಕ ಮಾತನಾಡಿದ ನೂತನ ಜಿಲ್ಲಾಧಿಕಾರಿ ಡಾ.ಕುಮಾರ್, ಈ ಹಿಂದೆ ಉಡುಪಿ, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಪರ ಜಿಲ್ಲಾಧಿಕಾರಿಯಾಗಿ, ಬಿಜಾಪುರ, ತುಮಕೂರು ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಯಾಗಿ ಕಂದಾಯ ಇಲಾಖೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದ್ದೇನೆ. ಕಂದಾಯ ಇಲಾಖೆಯಲ್ಲಿ ಯಾವುದೇ ತೊಂದರೆ ಇದ್ದರೂ ಪರಿಶೀಲಿಸಿ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ. ಪಾರದರ್ಶಕ ಹಾಗೂ ಪ್ರತಿಸ್ಪಂದನಾತ್ಮಕ ಆಡಳಿತ ನೀಡುವುದು ನನ್ನ ಮುಖ್ಯ ಗುರಿ ಎಂದರು.

ಕಂದಾಯ ಇಲಾಖೆಯಲ್ಲಿ 15 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಹಾಗಾಗಿ ಜಿಲ್ಲಾಧಿಕಾರಿ ಕಚೇರಿ ಹಾಗೂ ಕಂದಾಯ ಇಲಾಖೆಯಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ಪರಿಶೀಲನೆ ನಡೆಸಿ ಸಕಾರಾತ್ಮಕವಾಗಿ ಸ್ಪಂದಿಸಿ ಸಾರ್ವಜನಿಕರಿಗೆ ಬಹುಬೇಗ ಆಡಳಿತ ಸೇವೆ ತಲುಪುವ ನಿಟ್ಟಿನಲ್ಲಿ ಕೆಲಸ ಮಾಡುವೆ ಎಂದರು.

ಪಾರದರ್ಶಕವಾಗಿ ಆಡಳಿತ ನಡೆಸಿ ಸಾರ್ವಜನಿಕರಿಗೆ ಬಹುಬೇಗ ಆಡಳಿತ ಸೇವೆ ತಲುಪಿಸುವುದು. ಈ ಮೂಲಕ ಕಡತ ವಿಲೇವಾರಿಗೆ ಕ್ರಮ ಕೈಗೊಳ್ಳುತ್ತೇನೆ. ಅಧಿಕಾರ ಎಂಬುದು ಸಾರ್ವಜನಿಕರ ಸೇವೆ ಮಾಡಲು ಸಿಕ್ಕಿರುವ ಅವಕಾಶ. ರೈತರಿಗೆ ಭೂಮಿ ತಂತ್ರಾಂಶ ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ಕಾಲಮಿತಿಯೊಳಗೆ ಯೋಜನೆಗಳನ್ನು ಅನುಷ್ಠಾನ ಮಾಡಲಾಗುವುದು ಎಂದರು.

ಕೃಷಿಕರ ಸಮಸ್ಯೆಗಳಿಗೆ ಆದ್ಯತೆ ನೀಡಿ ಪರಿಹರಿಸಲಾಗುವುದು. ಮಳೆ ಕೊರತೆ ಉಂಟಾದಲ್ಲಿ ಎದುರಾಗಬಹುದಾದ ತೊಂದರೆ ಹಾಗೂ ಪರಿಹಾರ ಕ್ರಮಗಳ ಬಗ್ಗೆ ಕೂಡಲೇ ಅಧಿಕಾರಿಗಳ ಸಭೆ ಕರೆದು ಚರ್ಚಿಸಲಾಗುವುದು ಎಂದರು.

ನೀರು ವ್ಯತ್ಯಯ

ಮಂಡ್ಯ, ಜೂ.19– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಅಡಿ ಶ್ರೀರಂಗಪಟ್ಟಣ ಸಮೀಪದ ಮೂಲ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡುವ 66/11 ಕೆವಿ ವಿದ್ಯುತ್ ಉಪ ವಿತರಣಾ ಕೇಂದ್ರಗಳ ತ್ರೈಮಾಸಿಕ ನಿರ್ವಹಣೆ ಕಾರ್ಯ ಹಿನ್ನೆಲೆಯಲ್ಲಿ ಜೂ.21 ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಕಡಿತಗೊಳಿಸಿರುವುದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಮಂಡ್ಯ ನಗರದ ಸರ್ಕಾರಿ ಬಾಲಕರ ಕಾಲೇಜು ಎದುರು 600 ಮಿಮೀ ವ್ಯಾಸದ ಎಂ.ಎಸ್ ನೀರು ಸರಬರಾಜು ಕೊಳವೆ ಮಾರ್ಗದಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಸೋರುವಿಕೆ ಕಂಡು ಬಂದಿದ್ದು, ನೀರು ಸೋರುವಿಕೆ ತಡಗಟ್ಟಲು ಜೂ.21 ರಂದು ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಸಾರ್ವಜನಿಕರಿಗೆ ಜೂ.22 ಮತ್ತು 23 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದೇ ದಿನ 51 ಪ್ರಕರಣ ಇತ್ಯರ್ಥ



ಮೈಸೂರು, ಜೂ.19(ಎಸ್‌ಬಿಡಿ)– ಕರ್ನಾಟಕ ಲೋಕಾಯುಕ್ತದ ಉಪ ಲೋಕಾಯುಕ್ತರಾದ ಕೆ.ಎನ್. ಫಣೀಂದ್ರ ಅವರ ಅಧ್ಯಕ್ಷತೆಯಲ್ಲಿ ಸೋಮವಾರ 51 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾರ್ವಜನಿಕ ಅಹವಾಲು/ಕುಂದುಕೊರತೆ, ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಕಾರ್ಯಕ್ರಮದ ಬಳಿಕ ಮಾತನಾಡಿದ ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು, ವಿಚಾರಣೆಗೆ ಕೈಗೆತ್ತಿಕೊಂಡಿದ್ದ 68 ವೈಯಕ್ತಿಕ ಪ್ರಕರಣದಲ್ಲಿ 51 ಪ್ರಕರಣಗಳನ್ನು ಒಂದೇ ದಿನ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು.

ವಿಚಾರಣೆಗೆ ತರಲಾಗಿದ್ದ ಒಟ್ಟು 152 ಪ್ರಕರಣಗಳಲ್ಲಿ ಚಿತ್ರದುರ್ಗದ ಪಂಚೆ ಶಿವರುದ್ರಪ್ಪ ದಾಖಲಿಸಿರುವ 84 ಪ್ರಕರಣಗಳಿದ್ದವು. ಇದರಲ್ಲಿ 15 ಪ್ರಕರಣಗಳು ಮಾತ್ರ ಇತ್ಯರ್ಥವಾಗಿದ್ದು, ಉಳಿದ ಪ್ರಕರಣಗಳ ವಿಚಾರಣೆಯನ್ನು ನಮ್ಮ ಕಚೇರಿಯಲ್ಲೇ ಮುಂದುವರೆಸಲು ನಿರ್ಧರಿಸಲಾಗಿದೆ. ಇತರೆ 38 ಪ್ರಕರಣಗಳನ್ನು ಲೋಕಾಯುಕ್ತ ಸಂಸ್ಥೆಯಲ್ಲೇ ದಾಖಲು ಮಾಡಿಕೊಳ್ಳಲಾಗಿದೆ. ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇಕಿರುವ 14 ಪ್ರಕರಣಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ. ಪೊಲೀಸ್ ಮೇಲಿನ ಪ್ರಕರಣ, ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕಿರುವ ಪ್ರಕರಣಗಳ ಬಗ್ಗೆ ಸಂಬಂಧಪಟ್ಟವರಿಗೆ ಕಾನೂನು ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಲಾಗಿದೆ ಎಂದು ವಿವರಿಸಿದರು.

ಒಂದೇ ದಿನ 51 ಪ್ರಕರಣಗಳ ಇತ್ಯರ್ಥವಾಗಿದ್ದರಿಂದ ಸಂಬಂಧಪಟ್ಟವರು ನಿರಾಳರಾಗಿದ್ದಾರೆ. ಮನಸ್ಸಿದ್ದರೆ ಎಲ್ಲವೂ ಸಾಧ್ಯ ಎನ್ನುವುದಕ್ಕೆ ಇದು ಸಾಕ್ಷ್ಯವಾಗಿದೆ. ಈ ಕಾರ್ಯಕ್ರಮ ಮುಂದುವರೆದರೆ ಸಾಕಷ್ಟು ಜನರಿಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ತಿಂಗಳಿಗೊಂದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಲಿದ್ದೇನೆ. ಮತ್ತೊಬ್ಬರನ್ನು ಉಪ ಲೋಕಾಯುಕ್ತರಾಗಿ ನೇಮಿಸಿದರೆ ಕಾರ್ಯಕ್ರಮವನ್ನು ತ್ವರಿತಗೊಳಿಸಲು ಸಾಧ್ಯವಿದೆ ಎಂದು ಹೇಳಿದರು.

ರಾಮನಗರ: ಮಹಿಳೆಯರಿಬ್ಬರ ಮೇಲೆ ಕಾಡಾನೆ ದಾಳಿ: ಅಕ್ಕನ ಸಾವು, ತಂಗಿಯ ಸ್ಥಿತಿ ಗಂಭೀರ

ರಾಮನಗರ, ಜೂ.19– ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗುತ್ತಿದ್ದು ಕನಕಪುರ ತಾಲೂಕಿನ ಅಚ್ಚಲು ಗ್ರಾಮದ ಇಂದಿರಾನಗರದಲ್ಲಿ ಜಮೀನಿನಲ್ಲಿ ಕೆಲಸ ಮಾಡಲು ಹೋಗುತ್ತಿದ್ದ ಮಹಿಳೆಯರಿಬ್ಬರ ಮೇಲೆ ಕಾಡಾನೆ ದಾಳಿ ಮಾಡಿದೆ.

ಕಾಡಾನೆ ದಾಳಿಯಲ್ಲಿ 50 ವರ್ಷದ ಜಯಮ್ಮ ಎಂಬುವರು ಮೃತಪಟ್ಟಿದ್ದರೆ ಅವರ ತಂಗಿ 45 ವರ್ಷದ ವೆಂಕಟಲಕ್ಷ್ಮಮ್ಮನ ಪರಿಸ್ಥಿತಿ ಗಂಭೀರವಾಗಿದೆ.

ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇತ್ತೀಚೆಗಷ್ಟೇ ಕನಕಪುರ ಹಾಗೂ ಚನ್ನಪಟ್ಟಣ ತಾಲೂಕಿನಲ್ಲಿ ಆನೆ ತುಳಿತಕ್ಕೆ ಇಬ್ಬರು ಬಲಿಯಾಗಿದ್ದರು. ಈ ಘಟನೆ ಮಾಸುವ ಮುನ್ನವೇ ಮತ್ತೆ ಕಾಡಾನೆ ದಾಳಿ ಮಾಡಿದೆ.

ಶಕ್ತಿ ಯೋಜನೆಯಿಂದ ಬಸ್‌ಗಳು ಫುಲ್ ರಶ್; ಭಾನುವಾರ ಒಂದೇ ದಿನ 5 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರ ಸಂಚಾರ



ಮೈಸೂರು, ಜೂ.19(ಸಿಎನ್)– ರಾಜ್ಯ ಸರ್ಕಾರದ ಶಕ್ತಿ ಯೋಜನೆಗೆ ಮೈಸೂರಿನಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಬಸ್‌ಗಳು ಫುಲ್ ರಶ್ ಆಗುತ್ತಿವೆ. ಕಳೆದ ಭಾನುವಾರ(ಜೂ. 18) ಒಂದೇ ದಿನ ಜಿಲ್ಲಾದ್ಯಂತ ಒಟ್ಟಾರೆ 5 ಲಕ್ಷದ 8 ಸಾವಿರದ 788 ಮಂದಿ ಪ್ರಯಾಣಿಕರು ಸಂಚಾರ ಮಾಡಿದ್ದಾರೆ. ಈ ಪೈಕಿ 2 ಲಕ್ಷದ 75 ಸಾವಿರದ 59 ಮಂದಿ ಮಹಿಳಾ ಪ್ರಯಾಣಿಕರೇ ಸಂಚರಿಸಿದ್ದಾರೆ. ನಾರಿಯರದ್ದೇ ಸಿಂಹಪಾಲು. ಇನ್ನುಳಿದಂತೆ 2 ಲಕ್ಷದ 32 ಸಾವಿರದ 410 ಪುರುಷ ಪ್ರಯಾಣಿಕರು ಸಂಚರಿಸಿದ್ದಾರೆ. ಕಳೆದ ಮೂರು ದಿನದಲ್ಲಿ 6 ಲಕ್ಷ ಸನಿಹದಷ್ಟು ನಾರಿಯರು ಪ್ರಯಾಣ ಮಾಡಿದ್ದಾರೆ ಎಂದು ಅಂದಾಜಿಸಲಾಗಿದೆ.

ನಗರದ ಸಬ್‌ಅರ್ಬನ್ ಹಾಗೂ ನಗರ ಸಾರಿಗೆ ನಿಲ್ದಾಣದಲ್ಲಿ ಜನಜಂಗುಳಿ ಹೆಚ್ಚಾಗಿತ್ತು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಮಹದೇಶ್ವರ ಬೆಟ್ಟ, ನಂಜನಗೂಡು, ಬಿಆರ್ ಹಿಲ್ಸ್, ಆದಿ ಚುಂಚನಗಿರಿ ಸೇರಿದಂತೆ ಇನ್ನಿತರ ಪುಣ್ಯಕ್ಷೇತ್ರಗಳಿಗೆ ಮಹಿಳೆಯರು ಹೆಚ್ಚು ಪ್ರಯಾಣ ಮಾಡುತ್ತಿರುವುದು ಸಾಮಾನ್ಯವಾಗಿತ್ತು. ಅಲ್ಲದೇ ಬೆಂಗಳೂರು ಕಡೆಗೆ ತೆರಳುವ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರೇ ತುಂಬಿರುವ ದೃಶ್ಯಗಳು ಸೋಮವಾರ ಕಂಡುಬಂದವು.

ಒಟ್ಟಾರೆ ರಾಜ್ಯ ಸರ್ಕಾರದ ಶಕ್ತಿ ಯೋಜನೆಯಿಂದ ತೀರ್ಥಕ್ಷೇತ್ರಗಳು, ಪ್ರವಾಸಿತಾಣಗಳಿಗೂ ಹೊಸ ಚೈತನ್ಯ ಬಂದಂತಾಗಿದ್ದು, ಉಚಿತ ಪ್ರಯಾಣದ ಪರಿಣಾಮ ಪ್ರವಾಸೋದ್ಯಮಕ್ಕೂ ಅನುಕೂಲವಾಗಿದೆ.

ಒಂದೆಡೆ ಶಕ್ತಿ ಯೋಜನೆಯಿಂದ ಹೆಂಗಳೆಯರಿಗೆ ಅನುಕೂಲವಾದರೆ, ಪುರುಷ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡಿದ ಘಟನೆಗಳು ಅಲ್ಲಲ್ಲಿ ವರದಿಯಾಗಿವೆ. ಹಿರಿಯ ನಾಗರಿಕರು ಸೀಟು ಸಿಗದೇ ನಿಂತೇ ಪ್ರಯಾಣ ನಡೆಸಿದ್ದಾರೆ ಎಂದು ಬಸ್‌ನಲ್ಲಿ ಪ್ರಯಾಣಿಸಿದ ಹಲವರು 'ಮೈಸೂರು ಮಿತ್ರ'ನಲ್ಲಿ ಬೇಸರ ವ್ಯಕ್ತಪಡಿಸಿದರು.

ಪುರುಷರಿಗೆ ಆಸನ ಕೊರತೆ: ಉಚಿತ ಸಾರಿಗೆ ವ್ಯವಸ್ಥೆಯಿಂದ ನಾರಿಮಣಿಯರಿಗೆ ಸಂತೋಷವಾದರೆ, ಪುರುಷ ಪ್ರಯಾಣಿಕರು ತಮ್ಮ ಬೇಸರ ವ್ಯಕ್ತಪಡಿಸಿದ್ದಾರೆ. ಪುರುಷರಿಗೆ 50% ಆಸನ ಮೀಸಲು ಎಂದು ಹೇಳಿದ್ದಾರೆ ಆದರೆ 75% ರಷ್ಟು ಭಾಗ ಮಹಿಳೆಯರೇ ಕುಳಿತುಕೊಳ್ಳುತ್ತಿದ್ದಾರೆ. ನಮಗೆ ಆಸನ ಸಿಗದೇ ನಿಂತುಕೊಂಡೇ ಪ್ರಯಾಣಿಸುವ ಸ್ಥಿತಿ ಎದುರಾಗಿದೆ ಎಂದು ಪ್ರಯಾಣಿಕರೊಬ್ಬರು ತಿಳಿಸಿದರು.

ನಕಲಿ ಆಧಾರ್ ಕಟ್ಟೆಚ್ಚರ: ಬೆಂಗಳೂರಿನಲ್ಲಿ ಕೆಲ ಅಂತಾರಾಜ್ಯ ಮಹಿಳಾ ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ, ತಮ್ಮ ರಾಜ್ಯದ ಆಧಾರ್ ಕಾರ್ಡ್‌ಗಳನ್ನ ಕನ್ನಡ ಅಕ್ಷರಗಳಲ್ಲಿ ಮುದ್ರಿಸಿ, ನಕಲಿ ಆಧಾರ್ ತೋರಿಸಿ ಪ್ರಯಾಣಿಸುತ್ತಿರುವಾಗ ಸಿಕ್ಕಿಬಿದ್ದಿರುವ ಘಟನೆ ವರದಿಯಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನ ಬಸ್ ನಿರ್ವಾಹಕರು ಮತ್ತಷ್ಟು ಅಲರ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಾರಿಗೆ ಬಸ್‌ಗಳ ಮೈಲೇಜ್: ಶಕ್ತಿ ಯೋಜನೆಯಿಂದ ತುಂಬಿ ತುಳುಕುತ್ತಿರುವ ಬಸ್‌ಗಳು ನೀಡುವ ಮೈಲೇಜ್ ಬಗ್ಗೆ ಅಧಿಕಾರಿಯೊಬ್ಬರು ಹೀಗೆ ವಿವರಿಸಿದ್ದಾರೆ. ಟಾಟಾ, ಅಶೋಕ ಲೇಲ್ಯಾಂಡ್, ವೋಲ್ವೋ ಸೇರಿ ಇನ್ನಿತರೆ ಕಂಪನಿ ಬಸ್‌ಗಳು ಸಂಚಾರ ಮಾಡುತ್ತಿವೆ. ಟಾಟಾ ಬಸ್‌ಗಳು 1 ಲೀಟರ್‌ಗೆ 4.5, ಲೇಲ್ಯಾಂಡ್ 4, ವೋಲ್ವೋ 2.5 ಕಿ.ಮೀ. ಮೈಲೇಜ್ ನೀಡುತ್ತವೆ ಎಂದು ಮಾಹಿತಿ ನೀಡಿದರು.

ನಮ್ಮಲ್ಲಿ 1040 ಬಸ್‌ಗಳಿವೆ ಅದರಲ್ಲಿ 970 ಬಸ್‌ಗಳು (ಅನುಸೂಚಿ) ಕಾರ್ಯನಿರ್ವಹಿಸುತ್ತಿವೆ. ಇನ್ನುಳಿದ ಬಸ್‌ಗಳು ಪರ್ಯಾಯವಾಗಿ ಬಳಕೆಯಾಗುತ್ತಿವೆ. ಇರುವ ಬಸ್‌ಗಳಲ್ಲಿ ಸೇವೆ ಮುಂದುವರಿಸಿದ್ದೇವೆ. ಶಕ್ತಿ ಯೋಜನೆಯಿಂದ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ದಿನಕ್ಕೆ ಲಕ್ಷಾಂತರ ಮಂದಿ ಪ್ರಯಾಣಿಸುತ್ತಿದ್ದಾರೆ. ಭಾನುವಾರ (ಜೂ. 18) ಒಂದೇ ದಿನ ಒಟ್ಟಾರೆ ಪ್ರಯಾಣದಲ್ಲಿ ಶೇ.50ಕ್ಕಿಂತ ಹೆಚ್ಚು ಮಹಿಳೆಯರು ಸಂಚರಿಸಿದರೆ, ಪುರುಷ ಪ್ರಯಾಣಿಕರ ಪ್ರಮಾಣ ಶೇ.45ರ ಆಸುಪಾಸಿನಲ್ಲಿತ್ತು..

–**ಹೇಮಂತ್ ಕುಮಾರ್**, ಕೆಎಸ್‌ಆರ್‌ಟಿಸಿ ವಿಭಾಗೀಯ ಸಂಚಲನಾಧಿಕಾರಿ

ನಮಗೆ ದಸರಾ ವೇಳೆಯಲ್ಲಿ ಕರ್ತವ್ಯ ನಿರ್ವಹಿಸಿದಂತೆ ಆಗುತ್ತಿದೆ. ಅಷ್ಟು ರಶ್ ಆಗುತ್ತಿವೆ ಬಸ್‌ಗಳು. ಇತರ ಪ್ರಯಾಣಿಕರಿಗೆ ಟಿಕೆಟ್ ನೀಡಲು ಸಹ ತೊಂದರೆಯಾಗುತ್ತಿದೆ. ದಿನಕ್ಕೆ 5 ರಿಂದ 6 ಟ್ರಿಪ್ ಆಗುತ್ತೆ ಅಷ್ಟು ಟ್ರಿಪ್‌ಗಳಲ್ಲೂ ರಶ್ ಇದ್ದೇ ಇರುತ್ತೆ. ಬಹುತೇಕ ಎಲ್ಲ ಬಸ್‌ಗಳಲ್ಲೂ ಇದೇ ಪರಿಸ್ಥಿತಿ ಇದೆ.

–**ರಾಮಚಂದ್ರು**, ನಿರ್ವಾಹಕ

ಈ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾದರೆ, ಪುರುಷರಿಗೆ ಅನಾನುಕೂಲ ಉಂಟಾಗಿದೆ. ಬೆಳಗ್ಗೆ ಕಚೇರಿಗೆ ತೆರಳಲು ಬಸ್‌ಸ್ಟಾಪ್‌ನಲ್ಲಿ ನಿಂತರೆ ಆ ಜನಜಂಗುಳಿ ನೋಡಿದರೆ ಭಯವಾಗುತ್ತದೆ. ಬಸ್‌ಗಳು ಸಂಪೂರ್ಣ ಭರ್ತಿಯಾಗಿ ಪ್ರಯಾಣಿಕರು ಇಕ್ಕಟ್ಟಿನಲ್ಲಿ ಸಂಚರಿಸುತ್ತಿರುತ್ತಾರೆ. ಹಾಗಾಗಿ ಹೆಚ್ಚುವರಿ ಬಸ್‌ಗಳ ಅಗತ್ಯವಿದೆ.

–**ಮಂಜುನಾಥ್**, ಪ್ರಯಾಣಿಕ

ಯೋಜನೆಗೂ ಮುನ್ನ ಟಿ.ನರಸೀಪುರ, ಕೊಳ್ಳೇಗಾಲ ಭಾಗಗಳಿಗೆ ಮಹಿಳಾ ಪ್ರಯಾಣಿಕರು ಖಾಸಗಿ ಬಸ್‌ಗಳಲ್ಲಿ ಹೆಚ್ಚಾಗಿ ಸಂಚರಿಸುತ್ತಿದ್ದರು. ಆದರೆ ಈಗ ಸರ್ಕಾರಿ ಬಸ್ 20 ನಿಮಿಷ ತಡವಾದರೂ ಸರಿ ಕಾದು ಪ್ರಯಾಣಿಸುತ್ತಿದ್ದಾರೆ. ಹಾಗಾಗಿ ತುಂಬಾ ರಶ್ ಇರುತ್ತದೆ. ಅವರಿಗೇ ಸೀಟುಗಳು ಸಿಗದಿದ್ದರೂ ನಿಂತೇ ಪ್ರಯಾಣಿಸುತ್ತಾರೆ. ಕ್ರಮಬದ್ಧವಾದ ಮಾರ್ಗಸೂಚಿ ತಂದರೇ ಒಳಿತು. ಜೊತೆಗೆ ಪುರುಷರಿಗೆ 50% ರಷ್ಟು ಮೀಸಲು ಆಸನ ಕಡ್ಡಾಯವಾಗಿ ನೀಡಬೇಕು.

–**ನಾಗರಾಜು**, ಪ್ರಯಾಣಿಕ

ಕೊಡಗಲ್ಲಿ ಮನೆ ಮಹಡಿ ಮೇಲೆ ಡ್ರ್ಯಾಗನ್ ಫ್ರೂಟ್ ಬೆಳೆದ ಯುವ ರೈತ



ಮಡಿಕೇರಿ, ಜೂ.19– ಕೊಡಗಿನ ಶನಿವಾರಸಂತೆಯಲ್ಲಿ ಯುವ ರೈತನೊಬ್ಬ ತನ್ನ ಮನೆ ಮಹಡಿ ಮೇಲೆ ಪುಟ್ಟ ಹಣ್ಣಿನ ತೋಟವನ್ನೇ ನಿರ್ಮಾಣ ಮಾಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದಾರೆ.

ಪಟ್ಟಣದ ನಿವಾಸಿಯಾದ ರೈತ ನಂದಕುಮಾರ್ ಅವರು ತಮ್ಮ ಮನೆಯ ತಾರಸಿ ಮೇಲೆ ವಿಶಿಷ್ಟವಾದ ಡ್ರ್ಯಾಗನ್ ಫ್ರೂಟ್ ಬೆಳೆದು ಇತರ ನಿವಾಸಿಗಳಿಗೆ ಹೆಚ್ಚು ಪೌಷ್ಟಿಕಾಂಶದ ಹಣ್ಣನ್ನು ಬೆಳೆಯಲು ಪ್ರೇರೇಪಿಸುತ್ತಿದ್ದಾರೆ. ಡ್ರ್ಯಾಗನ್ ಫ್ರೂಟ್ ಹೆಚ್ಚು ಪೌಷ್ಟಿಕಾಂಶವಿರುವ ಹಣ್ಣು. ಇನ್ನು ಮಧುಮೇಹ ರೋಗಿಗಳಿಗೆ ಸೇರಿದಂತೆ ವಿವಿಧ ಆರೋಗ್ಯ ಪ್ರಯೋಜನಗಳಿಗಾಗಿ ಶಿಫಾರಸು ಮಾಡಲಾಗಿದೆ. ಹಣ್ಣುಗಳು ಮಧ್ಯ ಅಮೇರಿಕಾಕ್ಕೆ ಸ್ಥಳೀಯವಾಗಿದ್ದರೂ, ಅವುಗಳನ್ನು ಈಗ ನಗರಗಳಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಅದೇ ರೀತಿ, ನಂದಕುಮಾರ್ ಅವರು ಡ್ರ್ಯಾಗನ್ ಫ್ರೂಟ್ ಗಿಡಗಳೊಂದಿಗೆ ಚಿಕ್ಕ ತಾರಸಿ ತೋಟವನ್ನು ಅಭಿವೃದ್ಧಿಪಡಿಸಿದ್ದಾರೆ. ಅಲ್ಲದೆ ಕಳೆದ ಒಂದು ವರ್ಷದಲ್ಲಿ 30 ಕೆಜಿಗೂ ಹೆಚ್ಚು ಇಳುವರಿಯನ್ನು ಪಡೆದಿದ್ದಾರೆ.

ಬೆಳೆಯಲ್ಲಿ ಪ್ರಯೋಗ ಮಾಡಲು, ನಾನು ಬೆಂಗಳೂರಿನಲ್ಲಿರುವ ನನ್ನ ಸಹೋದರಿಯ ಮನೆಯಿಂದ ಡ್ರ್ಯಾಗನ್ ಫ್ರೂಟ್ ಗಿಡವನ್ನು ತಂದಿದ್ದೆ. ಬೆಳೆಗೆ ಹೇರಳವಾದ ಸೂರ್ಯನ ಬೆಳಕು ಬೇಕು. ಹಾಗಾಗಿ ನಮ್ಮ ಮನೆಯ ತಾರಸಿಯಲ್ಲಿ ಒಂದನ್ನು ನೆಟ್ಟಿದ್ದೆ ಎಂದು ನಂದಕುಮಾರ್ ವಿವರಿಸಿದರು. ಪ್ಲಾಸ್ಟಿಕ್ ಡ್ರಮ್ ಕತ್ತರಿಸಿ ಡ್ರ್ಯಾಗನ್ ಫ್ರೂಟ್ ಗಿಡ ನೆಟ್ಟಿದ್ದರು. ನಂತರ ಇಲ್ಲಿಂದ, ಅವರು ಹೆಚ್ಚು ಸಸ್ಯಗಳನ್ನು ಅಭಿವೃದ್ಧಿಪಡಿಸಿದರು. ಈಗ ಮಹಡಿ ತುಂಬಾ ಸುಮಾರು ಮೂವತ್ತು ಡ್ರ್ಯಾಗನ್ ಫ್ರೂಟ್ ಗಿಡಗಳನ್ನು ನೆಟ್ಟಿದ್ದಾರೆ. ನಾನು ಒಂದು ಪ್ಲಾಸ್ಟಿಕ್ ಡ್ರಮ್‌ನಲ್ಲಿ ಸುಮಾರು ನಾಲ್ಕು ಗಿಡಗಳನ್ನು ನೆಟ್ಟಿದ್ದೇನೆ. ಈ ಸಸ್ಯಗಳಿಗೆ ಹೆಚ್ಚು ನೀರು ಅಗತ್ಯವಿಲ್ಲದ ಕಾರಣ, ನಾನು ಟಬ್‌ಗಳಿಗೆ ಸರಿಯಾದ ನೀರು ಹರಿಸುವ ವ್ಯವಸ್ಥೆಯನ್ನು ಸಕ್ರಿಯಗೊಳಿಸಿದ್ದೇನೆ. ಇಲ್ಲಿಯವರೆಗೆ, ನಾನು 30 ಕೆಜಿಗೂ ಹೆಚ್ಚು ಇಳುವರಿ ಪಡೆದಿದ್ದೇನೆ ಎಂದು ನಂದಕುಮಾರ್ ತಿಳಿಸಿದರು.

ಸಸ್ಯಗಳು ಏಪ್ರಿಲ್‌ನಲ್ಲಿ ಮೊಳಕೆಯೊಡೆಯುವ ಪ್ರಕ್ರಿಯೆಯೊಂದಿಗೆ ಪ್ರಾರಂಭವಾಗುತ್ತವೆ. ಅವು ನವೆಂಬರ್‌ವರೆಗೆ ಹಣ್ಣುಗಳನ್ನು ನೀಡುತ್ತವೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕಿಲೋಗೆ 200ರಿಂದ 300 ರೂ. ವಿಶೇಷ ತಳಿಯ ರೆಡ್ ಡ್ರಾಗನ್ ಫ್ರೂಟ್ ಅನ್ನು ನಂದಕುಮಾರ್ ಬೆಳೆದಿದ್ದಾರೆ. ನಾನು ಇಳುವರಿಯನ್ನು ಸ್ನೇಹಿತರು ಮತ್ತು ಕುಟುಂಬಕ್ಕೆ ವಿತರಿಸುತ್ತೇನೆ. ಸರಿಯಾದ ನೀರಿನ ಒಳಚರಂಡಿ ಸೌಲಭ್ಯದೊಂದಿಗೆ ಸೂಕ್ತವಾದ ಭೂಮಿಯ ಅಗತ್ಯವಿರುವುದರಿಂದ ನಾನು ಬೆಳೆಯೊಂದಿಗೆ ವಾಣಿಜ್ಯಕ್ಕೆ ಹೋಗುವ ನಿರ್ಧಾರ ಮಾಡಿಲ್ಲ. ಆದರೆ ವ್ಯವಹಾರಕ್ಕಾಗಿ ಮಾಡಿದರೆ ಲಾಭದಾಯಕ ಬೆಳೆ ಎಂದು ಅಭಿಪ್ರಾಯಪಟ್ಟರು.



ನಂದಕುಮಾರ್ ಕಾಫಿ ಎಸ್ಟೇಟ್ ಹೊಂದಿದ್ದರೂ, ಅವರು ತಮ್ಮ ತಾರಸಿಯಲ್ಲಿ ಹಣ್ಣುಗಳನ್ನು ಬೆಳೆಸಲು ಆಯ್ಕೆ ಮಾಡಿಕೊಂಡರು. ಕಾಫಿ ಎಸ್ಟೇಟ್ ಹೆಚ್ಚು ನೆರಳು ಹೊಂದಿದ್ದು, ಹಣ್ಣುಗಳಿಗೆ ಸೂಕ್ತವಲ್ಲ. ಅಲ್ಲದೆ, ಜನರು ಎಸ್ಟೇಟ್‌ಗಳಲ್ಲಿನ ಹಣ್ಣುಗಳನ್ನು ಸುಲಭವಾಗಿ ಕದಿಯಬಹುದು. ಆದ್ದರಿಂದ ನಾನು ಅವುಗಳನ್ನು ನನ್ನ ಮನೆ ಮಹಡಿಯ ಮೇಲೆ ಬೆಳೆಯಲು ನಿರ್ಧರಿಸಿದೆ ಎಂದರು.

ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ

ಮೈಸೂರು, ಜೂ.19(ಎಸ್‌ಪಿಎನ್)– ರಾಜ್ಯ ಸರ್ಕಾರಕ್ಕೆ ಅಕ್ಕಿ ವಿತರಣೆ ಮಾಡುವಲ್ಲಿ ಭಾರತ ಆಹಾರ ನಿಗಮವು ಒಪ್ಪಿಗೆಯ ಪತ್ರವನ್ನು ನೀಡಿರುವುದನ್ನು ಗಮನಿಸಿದ ನಂತರವೂ ಕೇಂದ್ರ ಸರ್ಕಾರ ಅಕ್ಕಿ ವಿತರಣೆ ಮಾಡುವುದನ್ನು ತಡೆಯುವಂತೆ ಎಫ್‌ಸಿಐಗೆ ನಿರ್ದೇಶಿಸಿ ಷಡ್ಯಂತ್ರ ರೂಪಿಸಿದೆ. ಈ ಹಿನ್ನೆಲೆಯಲ್ಲಿ ಜೂ.20ರಂದು ಬೆಳಗ್ಗೆ 11 ರಿಂದ 2 ಗಂಟೆಯವರೆಗೆ ಕೇಂದ್ರ ಸರ್ಕಾರ ಧೋರಣೆ ಖಂಡಿಸಿ, ಮೈಸೂರಿನ ಗಾಂಧಿಚೌಕದ ಬಳಿ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಗೆ ಪಕ್ಷದ ವಿಧಾನಸಭಾ ಹಾಗೂ ಪರಿಷತ್ ಸದಸ್ಯ, ನಗರಪಾಲಿಕೆ ಸದಸ್ಯರು, ಚುನಾಯಿತ ಪ್ರತಿನಿಧಿಗಳು ಭಾಗವಹಿಸುವಂತೆ ಪ್ರಧಾನ ಕಾರ್ಯದರ್ಶಿ ಡಿ.ಈಶ್ವರ ಚಕ್ಕಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 20 ಜೂನ್ 2023

ಬರಿದಾಗುತ್ತಿರುವ ಕೊಡಗು ಜಿಲ್ಲೆಯ ಜೀವಜಲ

ಡೆಡ್‌ಸ್ಟೋರೇಜ್ ತಲುಪಿದ ಹಾರಂಗಿ ಜಲಾಶಯ



ಜಲವನ್ನು ನಂಬಿರುವ ರೈತರು, ಸಾರ್ವಜನಿಕರಿಗೆ ಸಂಕಷ್ಟ

ಮಡಿಕೇರಿ, ಜೂ.19– ಜೂನ್ ಮುಗಿಯುತ್ತಾ ಬಂದರೂ ಕಾವೇರಿ ತವರು ಕೊಡಗು ಜಿಲ್ಲೆಯಲ್ಲೇ ಮುಂಗಾರು ಮಳೆ ಕೈಕೊಟ್ಟಿದ್ದು, ಜಿಲ್ಲೆಯ ಬಹುತೇಕ ನದಿಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಇಳಿಕೆಯಾಗಿದೆ.

ಮಳೆಯ ಕೊರತೆ ಪರಿಣಾಮ ಜಿಲ್ಲೆಯ ಏಕೈಕ ಜಲಾಶಯವಾದ 'ಹಾರಂಗಿ ಡ್ಯಾಂ' ಬಹುತೇಕ ಖಾಲಿಯಾಗಿದ್ದು 'ಡೆಡ್ ಸ್ಟೋರೇಜ್' ಹಂತ ತಲುಪಿದೆ. ಜಲಾಶಯದ ತಳಭಾಗದಲ್ಲಿ ಮಾತ್ರ ಸ್ವಲ್ಪ ನೀರಿದ್ದು, ಸದಾ ನೀರಿನಲ್ಲಿ ಮುಳುಗಿರುತ್ತಿದ್ದ ಬಂಡೆಗಳೆಲ್ಲ ಕಾಣಿಸುತ್ತಿದೆ. ಹಾರಂಗಿ ಜಲಾನಯನ ಪ್ರದೇಶದ ರೈತರು ಮತ್ತು ಸಾರ್ವಜನಿಕರು ಕುಡಿಯಲು ಹಾರಂಗಿ ನೀರನ್ನೇ ಅವಲಂಬಿಸಿದ್ದು ಈಗ ಸಂಕಷ್ಟ ಎದುರಿಸುವಂತಾಗಿದೆ.

ಒಟ್ಟು 8.5 ಟಿಎಂಸಿ ಸಾಮರ್ಥ್ಯದ ಜಲಾಶಯದಲ್ಲಿ ಕಳೆದ ವರ್ಷ ಈ ವೇಳೆಗೆ 5 ಟಿಎಂಸಿಯಷ್ಟು ನೀರು ಸಂಗ್ರಹವಾಗಿತ್ತು ಆದರೆ ಈ ಬಾರಿ ಮಳೆಯೇ ಬಾರದ ಹಿನ್ನೆಲೆಯಲ್ಲಿ ಜಲಾಶಯ ಬಹುತೇಕ ಖಾಲಿಯಾಗಿದ್ದು, ಡೆಡ್ ಸ್ಟೋರೇಜ್ ನೀರು ಮಾತ್ರ ಸಂಗ್ರಹವಿದೆ. ಜಲಾಶಯದ ಕ್ರಸ್ಟ್ ಗೇಟಿನ ಮಟ್ಟಕ್ಕಿಂತಲೂ ನೀರು ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಈ ನೀರು ರೈತರಿಗಾಗಲೀ ಅಥವಾ ಸೋಮವಾರಪೇಟೆ ಪಟ್ಟಣಕ್ಕೆ ನೀರು ಪೂರೈಕೆ ಮಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಹಲವು ವರ್ಷಗಳಿಗೆ ಹೋಲಿಸಿದರೆ ಮಳೆಗಾಲದ ಈ ಸಮಯದಲ್ಲೇ ಜಲಾಶಯ ಬಹುತೇಕ ಭರ್ತಿಯಾಗಿ ಜುಲೈ ತಿಂಗಳಲ್ಲಿ ಹಾರಂಗಿಗೆ ಬಾಗಿನ ಅರ್ಪಿಸಲಾಗುತ್ತಿತ್ತು.

> ಕಳೆದ ವರ್ಷ ಮಳೆಗಾಲ ಆರಂಭಕ್ಕೂ ಮುನ್ನ ಜಿಲ್ಲೆಯಲ್ಲಿ ಉತ್ತಮ ಮಳೆಯಾದ ಪರಿಣಾಮ ಕಳೆದ ಅವಧಿಯಲ್ಲಿ ಹಾರಂಗಿ ಜಲಾಶಯಕ್ಕೆ ಸಾಕಷ್ಟು ನೀರಿನ ಸಂಗ್ರಹವಿತ್ತು. 2858 ಅಡಿ ಗರಿಷ್ಠ ಸಾಮರ್ಥ್ಯದ ಹಾರಂಗಿ ಜಲಾಶಯದಲ್ಲಿ ಕಳೆದ ವರ್ಷ ಇದೇ ಅವಧಿಗೆ 2851 ಅಡಿ ನೀರು ಸಂಗ್ರಹವಾಗಿತ್ತು. ಆದರೆ ಈ ವರ್ಷ ಇನ್ನೂ ಕೂಡ 2818 ಅಡಿಯಷ್ಟು ಅಂದರೆ 0.85 ಟಿಎಂಸಿ ಮಾತ್ರವೇ ನೀರಿದ್ದು, ಇದು ಉಪಯೋಗಕ್ಕೆ ಬಾರದಾಗಿದೆ.

ಹಾರಂಗಿ ಜಲಾಶಯದ ನೀರನ್ನು ಹೆಬ್ಬಾಲೆ, ಶಿರಂಗಾಲ, ತೊರೆನೂರು ಸೇರಿದಂತೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಸಾಕಷ್ಟು ಹಳ್ಳಿಗಳ ಲಕ್ಷಾಂತರ ಎಕರೆ ಭೂಮಿಗೆ ನೀರು ಪೂರೈಸಲಾಗುತಿತ್ತು. ಜೊತೆಗೆ ಏತ ನೀರಾವರಿ ಮೂಲಕವೂ ಸಾಕಷ್ಟು ರೈತರ ಕೃಷಿ ಭೂಮಿಗೆ ನೀರು ಪೂರೈಸಲಾಗುತಿತ್ತು.

ರೈತರು ಕೂಡ ಜಲಾಶಯದಿಂದ ಸಿಗುವ ನೀರನ್ನು ಉಪಯೋಗಿಸಿಕೊಂಡು ಬೆಳೆ ಬೆಳೆಯುತ್ತಿದ್ದರು. ಜಲಾಶಯದಿಂದ ನೀರು ಸಿಗುತ್ತದೆ ಎಂದು ಆರಂಭದಲ್ಲಿ ಸುರಿದ ಒಂದೆರಡು ಮಳೆಗೆ ರೈತರು ಬೆಳೆ ಹಾಕಿದ್ದರು. ಆದರೆ ಇದೀಗ ಮಳೆಯೂ ಇಲ್ಲ, ಇತ್ತ ಹಾರಂಗಿ ಜಲಾಶಯದ ನೀರು ಕೂಡ ಇಲ್ಲದೇ ಕೃಷಿ ಭೂಮಿಗಳಲ್ಲಿ ಬೆಳೆ ಒಣಗಿ ಹೋಗುತ್ತಿವೆ. ಇನ್ನು ಇದೇ ರೀತಿ ಮಳೆ ಬಾರದಿದ್ದಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೇ ಅಭಾವ ತಲೆದೋರಲಿದೆ. ಮುಂಗಾರಿನ ಮಳೆ ಬಾರದ ಹಿನ್ನೆಲೆಯಲ್ಲಿ ಹಾರಂಗಿ ಜಲಾಶಯವಾದ ಒಳಗೆ ಗಿಡಗಂಟಿಗಳು ಬೆಳೆಯುತ್ತಿದ್ದು, ಜಲಾಶಯದ ಜಾಗದಲ್ಲಿ ಹುಲ್ಲು ಬೆಳೆದು ಬೀಡಾಡಿ ದನಗಳಿಗೆ ಆಹಾರವಾಗಿದೆ.

ಚಿಕ್ಲಿಹೊಳೆ ಜಲಾಶಯಕ್ಕೆ ಅಣೆಕಟ್ಟೆ ಸುರಕ್ಷತಾ ತಪಾಸಣಾ ತಂಡ ಭೇಟಿ, ಪರಿಶೀಲನೆ



> ಪರಿಶೀಲನೆಗೆ ಆಗಮಿಸಿದ್ದ ತಂಡದ ಮುಖ್ಯಸ್ಥ 93 ವರ್ಷ ಪ್ರಾಯದ ಅನುಭವಿ ಅಧಿಕಾರಿ ಎಸ್.ಬಿ.ಕೋಯಿಮತ್ತೂರು ಇಡೀ ಅಣೆಕಟ್ಟೆ ಪ್ರದೇಶವನ್ನು ಕಾಲ್ನಡಿಗೆಯಲ್ಲೇ ಸುತ್ತು ಹಾಕಿ ಇಂಚಿಂಚೂ ಮಾಹಿತಿ ಪಡೆದು ಪರಿಶೀಲನೆ ನಡೆಸಿ ಸಮಸ್ಯೆಗಳನ್ನು ಪಟ್ಟಿ ಮಾಡಿಸುತ್ತಿದ್ದ ಪರಿ ಸ್ಥಳೀಯರಲ್ಲಿ ಅಚ್ಚರಿ ಮೂಡಿಸಿದೆ.

ಕುಶಾಲನಗರ, ಜೂ.19– ಕೊಡಗಿನ ಪ್ರಮುಖ ಪ್ರವಾಸಿ ತಾಣ ಚಿಕ್ಲಿಹೊಳೆ ಅಣೆಕಟ್ಟೆಯ ಫಿಟ್ನೆಸ್ ಪರಿಶೀಲನೆಗೆ ದಶಕಗಳ ನಂತರ ರಾಜ್ಯಮಟ್ಟದ ಅಧಿಕಾರಿಗಳ ತಂಡ ಭೇಟಿ ನೀಡಿ ವೀಕ್ಷಣೆ ನಡೆಸಿತು.

ರಾಜ್ಯದ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಅಣೆಕಟ್ಟೆ ಸುರಕ್ಷತಾ ತಪಾಸಣಾ ತಂಡ (ಡಿಎಸ್‌ಆರ್‌ಟಿ) ಭೇಟಿ ನೀಡಿದ್ದು, ಅಣೆಕಟ್ಟೆಯ ಸಂಪೂರ್ಣ ಮಾಹಿತಿ ಪಡೆದು ಪರಿಶೀಲಿಸಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರಕಾರಕ್ಕೆ ವರದಿ ಸಲ್ಲಿಸಲಿದೆ.

ಅಣೆಕಟ್ಟೆಯ ಸ್ಥಿರತೆ, ಸುರಕ್ಷತೆ ನಿಟ್ಟಿನಲ್ಲಿ ಈ ತಂಡ ಕೂಲಂಕಶವಾದ ಪರಿಶೀಲನೆ ನಡೆಸಿ ತನ್ನ ವರದಿಯನ್ನು ಕೇಂದ್ರ ತಂಡಕ್ಕೆ ಸಲ್ಲಿಕೆ ಮಾಡಲಿದೆ. ಕೇಂದ್ರದ ನಿರ್ದೇಶನದಂತೆ ಜಲಾಶಯಗಳನ್ನು ಪ್ರತಿ 10 ವರ್ಷಕ್ಕೊಮ್ಮೆ ಪರಿಶೀಲನೆ ನಡೆಸಲಾಗುತ್ತದೆ. ಅದರಂತೆ 2012 ರ ಬಳಿಕ 2023 ಕ್ಕೆ ಚಿಕ್ಲಿಹೊಳೆ ಅಣೆಕಟ್ಟೆ ತಪಾಸಣೆ ನಡೆಸಲಾಗಿದೆ. ತಪಾಸಣೆ ನಡೆಸಿ ಸಲ್ಲಿಸಿದ ವರದಿಯ ಮರುಪರಿಶೀಲನೆ ಬಳಿಕ ಅಗತ್ಯವಿರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ಕೇಂದ್ರ ಅನುದಾನ ಒದಗಿಸಲಿದೆ.

ಡಿಎಸ್‌ಆರ್‌ಪಿಯ ವೈಸ್ ಚೇರ್ಮನ್ ಹಾಗೂ ಡಿಎಸ್‌ಆರ್‌ಟಿ ಸಲಹೆಗಾರ ಧಾರವಾಡದ ಎಸ್.ಬಿ.ಕೋಯಿಮತ್ತೂರು ನೇತೃತ್ವದ ತಂಡ ಪರಿಶೀಲನಾ ಕಾರ್ಯ ನಡೆಸಿದೆ. ತಂಡದಲ್ಲಿ ನೀರಾವರಿ ನಿಗಮದ ಮೈಸೂರು ವಿಭಾಗದ ಮುಖ್ಯ ಅಭಿಯಂತರ ವೆಂಕಟೇಶ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಮುಖ್ಯ ಅಭಿಯಂತರ ಎಂ.ಸತೀಶ್, ಕೃಷ್ಣರಾಜ ಸಾಗರದ ಕೆಆರ್‌ಎಸ್ ನಿರ್ದೇಶಕ ಕೆ.ಜಿ.ಮಹೇಶ್, ಡ್ಯಾಂ ಸೇಫ್ಟಿ ಆಫೀಸರ್ ಕೆ.ಶ್ರೀಕಾಂತ್, ಮಲಪ್ರಭಾ ಅಣೆಕಟ್ಟೆ ಯೋಜನೆಯ ಮುಖ್ಯ ಅಭಿಯಂತರ ಅಶೋಕ್ ವಸನಾಡ್, ಬೆಳಗಾವಿ ನೀರಾವರಿ ನಿಗಮದ ಅಧೀಕ್ಷಕ ಅಭಿಯಂತರ ರಾಜೇಶ್ ಅಮ್ಮಿನಬಾವಿ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಅಧೀಕ್ಷಕ ಅಭಿಯಂತರ ವಿಜಯಕುಮಾರ್, ಹಾರಂಗಿ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತೆ ಕೆ.ಕೆ.ರಘುಪತಿ, ಮೈಸೂರಿನ ಜಿಯಾಲಜಿಸ್ಟ್ ಸೌಮ್ಯ, ಅಣೆಕಟ್ಟೆ ಭದ್ರತಾ ಸಂಸ್ಥೆಯ ಕಾರ್ಯಪಾಲಕ ಅಭಿಯಂತರ ತಿಮ್ಮಪ್ಪ, ಎಚ್.ಬಿ.ಕೃಷ್ಣರಾವ್, ಸಿ.ರೂಪೇಂದ್ರ, ಹಾರಂಗಿ ಪುನರ್ವಸತಿ ವಿಭಾಗದ ಪ್ರಮುಖರಾದ ಸುರೇಶ್, ಎಚ್.ಪಿ.ಸುರೇಶ್, ಮಂಜುನಾಥ್, ಪುಟ್ಟಸ್ವಾಮಿ, ಡಿ.ಕಿರಣ್ ಇದ್ದರು.

ಅಣೆಕಟ್ಟೆಯ ಸುರಕ್ಷತೆ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಅಂಶಗಳನ್ನು ಪಟ್ಟಿ ಮಾಡಿ ವರದಿ ಸಿದ್ಧಪಡಿಸಿ ಕೇಂದ್ರ ತಂಡಕ್ಕೆ ಕಳುಹಿಸಿಕೊಡುವುದಷ್ಟೆ ನಮ್ಮ ಕೆಲಸ ಎಂದು ಅಧಿಕಾರಿಗಳು ತಿಳಿಸಿದರು.

ಮೈಸೂರು ಕಾವೇರಿ ಕಾಲೇಜಿಗೆ ಸಂಕಲ್ಪ್-2K23 ರನ್ನರ್ ಅಪ್ ಪ್ರಶಸ್ತಿ



ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಕಾಲೇಜಿನ ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗವು ಇತ್ತೀಚೆಗೆ ಏರ್ಪಡಿಸಿದ್ದ 'ಸಂಕಲ್ಪ್–2K23'ಯಲ್ಲಿ ಮೈಸೂರಿನ ಶ್ರೀ ಕಾವೇರಿ ಪ್ರಥಮದರ್ಜೆ ಕಾಲೇಜಿನ ಬಿಕಾಂ ಮತ್ತು ಬಿಬಿಎಂ ವಿದ್ಯಾರ್ಥಿಗಳು ಪಾಲ್ಗೊಂಡು ಸಮಗ್ರ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿದ್ದು, ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳು ಅಭಿನಂದಿಸಿದರು. (ಕುಳಿತವರು ಎಡದಿಂದ) ಶ್ರೀಮತಿ ಪದ್ಮಾವತಿ ಕೆ.ಎಂ. (ಪ್ರಿನ್ಸಿಪಾಲ್), ಕೆ.ಎಂ. ಬೆಳ್ಳಿಯಪ್ಪ (ಚೇರ್ಮನ್), ಎಂ.ಎಂ. ಪೊನ್ನಪ್ಪ (ವೈಸ್ ಚೇರ್ಮನ್), ಡಾ. ಸುಬ್ರಹ್ಮಣ್ಯ ಸಿ.ಇ.(ಆಡಳಿತಾಧಿಕಾರಿ), ಶ್ರೀಮತಿ ಸಚಿನ್ ಎ.ಕೆ (ಅಸಿಸ್ಟೆಂಟ್ ಪ್ರೊಫೆಸರ್), (ಪ್ರಶಸ್ತಿ ವಿಜೇತರು ಎಡದಿಂದ) ದೀಪಕ್ ಎಸ್, ನಯನ ಇ, ಬಿ. ಸುಚಿತ್ರಾ, ಬಿ.ಎ. ಅಂಕಿತ, ಎನ್. ದರ್ಶನ್, ಎಂ.ಆರ್. ಕಿರಣ, ಬಿ.ಎಸ್. ಸುಹಾಸ್, ಕೆ.ರಾಹುಲ್, ಕೆ. ಸುರೇಂದ್ರ, ಎಂ.ಪಿ. ಅಬ್ದುಲ್ ರಹೀಂ ಶೇಕ್ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು.

ಹುಲಿಗಳ ಕಾದಾಟದಿಂದ ಗಾಯಗೊಂಡಿದ್ದ ಹುಲಿ ಸಾವು



ಸಿದ್ದಾಪುರ, ಜೂ.19– ಹುಲಿಗಳ ಕಾದಾಟದಿಂದ ಗಂಭೀರ ಸ್ವರೂಪದಲ್ಲಿ ಗಾಯಗೊಂಡ ಗಂಡು ಹುಲಿಯೊಂದು ಮಾಲ್ದಾರೆ ಸಮೀಪದ ಆಸ್ತಾನ ಹಾಡಿ ಸಮೀಪದ ಕೆರೆಯ ಬಳಿ ಮೃತಪಟ್ಟಿದೆ.

ಮಾಲ್ದಾರೆ ದುಬಾರೆ ಅರಣ್ಯ ವ್ಯಾಪ್ತಿಯ ಕೆರೆಯ ಬಳಿ ಸಂಪೂರ್ಣ ನಿತ್ರಾಣ ಸ್ಥಿತಿಯಲ್ಲಿ ಹುಲಿ ಕಾಣಿಸಿಕೊಂಡಿತ್ತು. ಗಾಯಗೊಂಡಿದ್ದ ಹುಲಿಯನ್ನ ಸೆರೆಹಿಡಿದು ಆರೈಕೆ ಮಾಡಲು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಕಾಲಿಗೆ ಗಂಭೀರ ಗಾಯಗಳಾಗಿರುವುದರಿಂದ ಕೆರೆಯ ನೀರಿನ ಕೆಸರಿನಲ್ಲಿ ಹುಲಿ ನಿತ್ರಾಣ ಸ್ಥಿತಿಯಲ್ಲಿ ಕಂಡು ಬಂತು. ದುಬಾರೆ ಶಿಬಿರದ ಸಾಕಾನೆಗಳಾದ ಶ್ರೀರಾಮ, ಧನಂಜಯ, ಸುಗ್ರೀವ, ಹರ್ಷ, ಕಂಜನ್ ಆನೆಗಳನ್ನು ಕರತರಲಾಗಿತ್ತು.

ಕಾರ್ಯಾಚರಣೆಗೆ ಇಳಿಯುವ ಮುನ್ನವೇ ಹುಲಿ ಮೃತಪಟ್ಟಿದೆ ಎನ್ನಲಾಗಿದೆ. ಅರಣ್ಯ ಇಲಾಖೆಯ ಡಾ. ರಮೇಶ್, ಡಾ. ಚಟ್ಟಿಯಪ್ಪ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿದರು. ಅಂದಾಜು 5 ವರ್ಷ ಪ್ರಾಯದ ಗಂಡು ಹುಲಿಯಾಗಿದ್ದು, ಗಂಭೀರ ಗಾಯಗಳಾಗಿ ಬೇಟೆಯಾಡಲು ಸಾಧ್ಯವಾಗದೆ ಮೃತಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಡಿಎಫ್‌ಓ ಪೂವಯ್ಯ, ಎಸಿಎಫ್ ಗೋಪಾಲ್, ಆರ್‌ಎಫ್‌ಓ ಶಿವರಾಮ್, ಡಿಆರ್‌ಎಫ್‌ಓ ರಂಜನ್, ಮಂಜುನಾಥ್ ಗೂಳಿ, ಮಾಲ್ದಾರೆ ಗ್ರಾಪಂ ಅಧ್ಯಕ್ಷ ಸಮೀರ್, ಪ್ರಮುಖರಾದ ಬೋಸ್ ಮಾದಪ್ಪ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

ಹಿಂದೆಯೂ ಹುಲಿಯೊಂದು ಗಾಯಗೊಂಡಿತ್ತು...

ಕಳೆದ ಆರು ತಿಂಗಳ ಹಿಂದೆ ಆಸ್ತಾನ ಹಾಡಿಯ ಇದೇ ಕೆರೆಯಲ್ಲಿ ಹುಲಿಯೊಂದು ಗಂಭೀರ ಗಾಯಗಳಾಗಿ ಕೆರೆಯಲ್ಲಿ ಪತ್ತೆಯಾಗಿತ್ತು. ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದುಬಾರೆ ಶಿಬಿರದ ಸಾಕಾನೆಗಳನ್ನು ಕರೆತಂದು ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿದು ಮೈಸೂರು ಕೂರ್ಗಳ್ಳಿಯಲ್ಲಿರುವ ಪ್ರಾಣಿಗಳ ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕೆಲ ದಿನಗಳ ನಂತರ ಹುಲಿ ಮೃತಪಟ್ಟಿತ್ತು. ಮಾಲ್ದಾರೆ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಹುಲಿ ಹಾವಳಿಯಿಂದ ಜಾನುವಾರುಗಳು ಬಲಿಯಾಗುತ್ತಿತ್ತು.

ಜು.3, ಶ್ರೀಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ

• ರಥ ಸಿದ್ಧಪಡಿಸುವ ಕಾರ್ಯ ಆರಂಭ • ಜಿಲ್ಲಾಡಳಿತದಿಂದ ಸಕಲ ಸಿದ್ಧತೆ



ಚಾಮರಾಜನಗರ, ಜೂ.19– ಚಾಮರಾಜನಗರದಲ್ಲಿ ಪ್ರತಿ ವರ್ಷ ಆಷಾಢ ಮಾಸದಲ್ಲಿ ನಡೆಯುವ ಶ್ರೀಚಾಮರಾಜೇಶ್ವರ ರಥೋತ್ಸವವು ಜು.3ರಂದು ನಡೆಯಲಿದೆ. ಇದಕ್ಕಾಗಿ ರಥ ಸಿದ್ಧಪಡಿಸುವ ಕಾರ್ಯ ಆರಂಭವಾಗಿದೆ.

ಆಷಾಢ ಮಾಸವನ್ನು ಶೂನ್ಯ ಮಾಸವೆಂದು ಕರೆಯಲಾಗುತ್ತದೆ. ಹೀಗಾಗಿ ಈ ಮಾಸದಲ್ಲಿ ಮದುವೆ, ಗೃಹಪ್ರವೇಶ ಸೇರಿದಂತೆ ಯಾವುದೇ ಶುಭ ಕಾರ್ಯ ನಡೆಯುವುದಿಲ್ಲ. ಆದರೆ, ಈ ಮಾಸದಲ್ಲಿಯೇ ಚಾಮರಾಜನಗರದಲ್ಲಿ ಶ್ರೀಚಾಮರಾಜೇಶ್ವರಸ್ವಾಮಿ ರಥೋತ್ಸವ ವೈಭವಯುತವಾಗಿ ನಡೆಯುವುದು ಇಲ್ಲಿನ ವಿಶೇಷ.

ರಥೋತ್ಸವ ಹಿನ್ನೆಲೆಯಲ್ಲಿ ಶ್ರೀಚಾಮರಾಜೇಶ್ವರಸ್ವಾಮಿ ದೇವಾಲಯದ ಮುಂಭಾಗ ರಥ ಸಿದ್ಧಪಡಿಸುವ ಕಾರ್ಯ ಈಗಾಗಲೇ ಆರಂಭವಾಗಿದ್ದು, ಈ ಕೆಲಸ ಸುಮಾರು ಏಳೆಂಟು ದಿನಗಳು ನಡೆಯಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷದಿಂದ ಹೊಸ ರಥದಲ್ಲಿ ರಥೋತ್ಸವ ನಡೆಯುತ್ತಿದ್ದು, ಈ ಬಾರಿಯೂ ರಥೋತ್ಸವದಲ್ಲಿ ಹೆಚ್ಚಿನ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಹೀಗಾಗಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ರಥೋತ್ಸವವನ್ನು ಸುಸೂತ್ರವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಂಡಿದೆ.

> ಪ್ರತಿವರ್ಷ ಆಷಾಢ ಮಾಸದಲ್ಲಿ ನಡೆಯುವ ಶ್ರೀಚಾಮರಾಜೇಶ್ವರ ರಥೋತ್ಸವ ಜು.3ರಂದು ನಡೆಯಲಿದೆ. ಈಗಾಗಲೇ ರಥಕ್ಕೆ ಪೂಜೆ ಮಾಡಿದ್ದು, ರಥ ಸಿದ್ಧಪಡಿಸುವ ಕೆಲಸ ಆರಂಭವಾಗಿದೆ. ರಥೋತ್ಸವದ ಹಿನ್ನೆಲೆಯಲ್ಲಿ ಎಲ್ಲಾ ಸಿದ್ಧತಾ ಕಾರ್ಯ ಕೈಗೊಳ್ಳಲಾಗಿದೆ.
> – ರಾಮಕೃಷ್ಣ ಭಾರದ್ವಜ್, ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಅರ್ಚಕರು



2017ರಲ್ಲಿ ಕಿಡಿಗೇಡಿಯೊಬ್ಬ ಹಚ್ಚಿದ ಬೆಂಕಿಗೆ ಚಾಮರಾಜೇಶ್ವರನ ರಥ ಸುಟ್ಟು ಭಸ್ಮವಾಗಿತ್ತು. ಹೀಗಾಗಿ 5 ವರ್ಷಗಳ ಕಾಲ ರಥೋತ್ಸವ ನಡೆದಿರಲಿಲ್ಲ. 1.20 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಿಸಲಾಗಿದ್ದು, ಕಳೆದ ವರ್ಷದಿಂದ ಆಷಾಢ ಮಾಸದ ಪೌರ್ಣಮಿಯ ದಿನದಂದು ಪೂರ್ವಾಷಾಢ ನಕ್ಷತ್ರದಲ್ಲಿ ಚಾಮರಾಜೇಶ್ವರನ ರಥೋತ್ಸವ ಅದ್ಧೂರಿಯಾಗಿ ನಡೆಯುತ್ತಿದೆ.

ಚಾಮರಾಜ ಒಡೆಯರ್ ಹುಟ್ಟಿದ ನಕ್ಷತ್ರದ ಅನುಸಾರವಾಗಿ ಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ಮಹಾರಾಜರು ಹುಟ್ಟಿದ ನಕ್ಷತ್ರ ಆಷಾಢ ಮಾಸದ ಪೂರ್ವಾಷಾಢ ನಕ್ಷತ್ರ ದಿನ. ಹೀಗಾಗಿ, ಅವರು ಹುಟ್ಟಿದ ನಕ್ಷತ್ರದಂದು ರಥೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ.

ಆಷಾಢ ಮಾಸ ಬಂತೆಂದರೆ ನವ ದಂಪತಿ ಬೇರೆ ಇರಬೇಕಾದ ಸಂದರ್ಭ. ಆದರೆ ಇದೇ ಆಷಾಢ ಮಾಸದಲ್ಲಿ ಇಲ್ಲಿ ರಥೋತ್ಸವ ನಡೆಯುವುದರಿಂದ ಇಲ್ಲಿ ಜೋಡಿಯಾಗಿ ಬಂದು ತೇರಿಗೆ ಹಣ್ಣು–ಧವನ ಎಸೆದರೆ ಇಷ್ಟಾರ್ಥ ಸಿದ್ಧಿಸುತ್ತದೆ ಎಂಬ ಪ್ರತೀತಿ ಇದೆ. ಈ ಕಾರಣದಿಂದ ಜಿಲ್ಲೆ ಅಲ್ಲದೇ ಹೊರ ಜಿಲ್ಲೆಗಳಿಂದಲೂ ನವ ದಂಪತಿ ಇಲ್ಲಿಗೆ ಬಂದು ಚಾಮರಾಜೇಶ್ವರ ದರ್ಶನ ಪಡೆಯುವುದು, ರಥಕ್ಕೆ ಹಣ್ಣು ಧವನ ಎಸೆಯುವುದು ವಾಡಿಕೆ. ಹೀಗಾಗಿ ಜಾತ್ರೆಯಂದು ನಗರದೆಲ್ಲೆಡೆ ನವ ದಂಪತಿಗಳದ್ದೇ ಕಲರವ. ಹೀಗಾಗಿ ವರ್ಷದಿಂದ ವರ್ಷಕ್ಕೆ ಚಾಮರಾಜೇಶ್ವರ ಜಾತ್ರೆಯ ಸಂಭ್ರಮ ಹೆಚ್ಚುತ್ತಿದೆ.

ಚಾಮರಾಜೇಶ್ವರಸ್ವಾಮಿ ದೊಡ್ಡ ರಥದ ಮುಂದೆ ಗಣಪತಿ ರಥ, ಸುಬ್ರಹ್ಮಣ್ಯಸ್ವಾಮಿ ಚಿಕ್ಕರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತದೆ. ದೊಡ್ಡರಥದ ಹಿಂದೆ ಶ್ರೀಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಜಾತ್ರೆಯ ಮತ್ತೊಂದು ವಿಶೇಷ.

ಪೌಷ್ಟಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ



ಚಾಮರಾಜನಗರ, ಜೂ.19– ಪ್ರತಿಯೊಬ್ಬರು ಪೌಷ್ಟಿಕ ಆಹಾರ ಸೇವಿಸುವ ಮೂಲಕ ಉತ್ತಮ ಆರೋಗ್ಯ ಪಡೆಯಬಹುದು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಭಾರತ ಸರ್ಕಾರದ ನೆಹರು ಯುವ ಕೇಂದ್ರ, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ, ರೋಟರಿ ಸಂಸ್ಥೆ, ಶ್ರೀವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಆಹಾರ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ತರಕಾರಿ, ಸೊಪ್ಪು ಹೆಚ್ಚಾಗಿ ಸೇವನೆ ಮಾಡುವುದರಿಂದ ಆರೋಗ್ಯ ಉತ್ತಮವಾಗಿರುತ್ತದೆ. ಹೀಗಾಗಿ, ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದು ಸಲಹೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್ ಮಾತನಾಡಿ, ಕಾನೂನನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಕಾನೂನು ಅರಿವು–ನೆರವು ನೀಡಲಾಗುವುದು. ಇದರ ಬಗ್ಗೆ ನಿಮ್ಮ ಪೋಷಕರಿಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಚಂದ್ರು, ರೋಟರಿ ಜಿ.ಅಂಕಶೆಟ್ಟಿ, ಜೆಎಸ್‌ಎಸ್ ಆಸ್ಪತ್ರೆ ಸರ್ಜನ್ ಡಾ.ಗೋವಿಂದಶೆಟ್ಟಿ, ರಾಷ್ಟ್ರೀಯ ಸೇವಾ ಯೋಜನೆ ಜಿಲ್ಲಾ ಸಂಯೋಜನೆ ಅಧಿಕಾರಿ ಡಾ.ಮಹೇಶ್, ಜೆಎಸ್‌ಎಸ್ ಮಹಿಳಾ ಕಾಲೇಜು ಉಪನ್ಯಾಸಕ ಕೆ.ಎಸ್.ಮಹೇಶ್, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಗೌರವಾಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ, ಅಧ್ಯಕ್ಷ ಜಿ.ಬಂಗಾರು, ನೆಹರು ಯುವ ಕೇಂದ್ರ ಸಹನಾ, ಉಪನ್ಯಾಸಕಿ ಮೇಘಶ್ರೀ, ಕಲಾವಿದರಾದ ರಂಜಿತಾ, ಹರ್ಷಿತಾ, ಹೇಮಲತಾ, ರೇಖಾ, ಪ್ರಿಯಾ, ಚೈತ್ರ ಇದ್ದರು.

ಜೂ. 27ರೊಳಗೆ ಪಡಿತರ ಪಡೆಯಲು ಮನವಿ

ಚಾಮರಾಜನಗರ, ಜೂ.19– ಆಹಾರ ಇಲಾಖೆಯ ಸರ್ವರ್ ನಿರ್ವಹಣಾ ಕಾರ್ಯವನ್ನು ಜೂನ್ 28 ರಂದು ಕೈಗೊಳ್ಳಲಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಪಡಿತರ ಚೀಟಿದಾರರು ಜೂನ್ 27ರೊಳಗೆ ಪಡಿತರ ಪಡೆಯುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ತಿಳಿಸಿದೆ. ಸರ್ವರ್ ನಿರ್ವಹಣಾ ಕಾರ್ಯದ ಕಾರಣದಿಂದ ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಜೂನ್ ಮಾಹೆಯ ಆಹಾರ ಧಾನ್ಯದ ಹಂಚಿಕೆ ವಿತರಣೆಯನ್ನು ಜೂನ್ 27ರೊಳಗೆ ಮುಕ್ತಾಯಗೊಳಿಸಲಾಗುವುದು. ಜಿಲ್ಲೆಯ ಪಡಿತರ ಚೀಟಿದಾರರು ಜೂ.27ರೊಳಗೆ ಪಡಿತರ ಪಡೆದುಕೊಳ್ಳುವಂತೆ ಇಲಾಖೆಯ ಉಪನಿರ್ದೇಶಕ ಯೋಗಾನಂದ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಬೇಗೂರಲ್ಲಿ ಹೆಚ್ಚುವರಿ ಕಟ್ಟಡ ಕಾಮಗಾರಿ ಪರಿಶೀಲನೆ



ಬೇಗೂರು, ಜೂ.19– ಗ್ರಾಮದ ದಾಸ ಬಣಜಿಗ ಶೆಟ್ಟರ ಶ್ರೀರಾಮ ಮಂದಿರದ ಹೆಚ್ಚುವರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಪರಿಶೀಲಿಸಿದರು.

ಬಳಿಕ ಮಾತನಾಡಿದ ಶಾಸಕರು, ಗ್ರಾಮದ ಶ್ರೀರಾಮ ಮಂದಿರದಲ್ಲಿ ಸಭಾಂಗಣ ಹಾಗೂ ಊಟದ ಹಾಲ್ ನಿರ್ಮಾಣವಾಗುತ್ತಿದೆ. ಇದಕ್ಕಾಗಿ ಸರ್ಕಾರದಿಂದ ಅಗತ್ಯ ಅನುದಾನ ನೀಡಲಾಗುವುದು ಎಂದರು. ಈ ವೇಳೆ ವಕೀಲ ಸತೀಶ್, ಶ್ರೀರಾಮ ಮಂದಿರದ ಅಧ್ಯಕ್ಷ ಜಯರಾಮ್, ಭಾಸ್ಕರ್, ಸಿ.ಬಿ.ರಮೇಶ್, ಗ್ರಾಪಂ ಸದಸ್ಯ ಪುನೀತ್ ಕುಮಾರ್, ರಜನಿಕಾಂತ್, ಪಟೇಲ್ ಶಾಂತರಾಜು, ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ಹೆಚ್.ಎಂ. ಬಸವರಾಜು, ರಂಗೂಪುರ ನಾಗರಾಜು, ರಮೇಶ್ ಸೇರಿದಂತೆ ಮತಿತ್ತರರಿದ್ದರು.

ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.19– ಸಿ–ಡಿಎಸಿ (ಸೆಂಟರ್ ಫಾರ್ ಹೆಚ್‌ಪಿಸಿ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್) ಸಂಸ್ಥೆಯವರು ಪರಿಶಿಷ್ಟ ಜಾತಿ,ವರ್ಗದ ಬಿಇ, ಬಿ.ಟೆಕ್, ಬಿಎಸ್‌ಸಿ, ಬಿಸಿಎ ಹಾಗೂ ಎಂಸಿಎ, ಎಂಎಸ್‌ಸಿ ಪದವೀಧರರಿಗೆ ಉಚಿತವಾಗಿ 6 ತಿಂಗಳ ಡಿಪ್ಲೊಮಾ ಕೋರ್ಸ್ (ಸಾಮರ್ಥ್ಯ ವೃದ್ಧಿ ತರಬೇತಿ) ನೀಡುತ್ತಿದ್ದು ಅರ್ಜಿ ಆಹ್ವಾನಿಸಲಾಗಿದೆ. ಕೋರ್ಸ್ ಅವಧಿಯಲ್ಲಿ ಮಾಸಿಕ 10 ಸಾವಿರ ರೂ. ಶಿಷ್ಯವೇತನದ ಜೊತೆಗೆ ಉದ್ಯೋಗಾವಕಾಶ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ಅಥವಾ ವೆಬ್‌ಸೈಟ್ https://internship.aicte-india.org ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಸ್ವಚ್ಛತೆ, ಸುಗಮ ಸಂಚಾರಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸೂಚನೆ



ಗುಂಡ್ಲುಪೇಟೆ, ಜೂ.19– ಪಟ್ಟಣದ ಸ್ವಚ್ಛತೆ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸೂಚನೆ ನೀಡಿದರು.

ಸೋಮವಾರ ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅನಧಿಕೃತ ಪಾರ್ಕಿಂಗ್, ಬೀದಿಬದಿ ವ್ಯಾಪಾರಿಗಳು, ಬೀಡಾಡಿ ದನಗಳಿಂದ ವಾಹನಗಳ ಹಾಗೂ ಪಾದಚಾರಿಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ವಾಹನ ದಟ್ಟಣೆ ಹೆಚ್ಚಾಗಿರುವ ಮಡಹಳ್ಳಿ ರಸ್ತೆ ಅಗಲೀಕರಣ, ಬೀದಿಬದಿ ವ್ಯಾಪಾರಿಗಳಿಗೆ ಸ್ಥಳ ನಿಗದಿಸಿ, ಪ್ಲಾಸ್ಟಿಕ್ ಬಳಕೆ ಹಾಗೂ ಮಾರಾಟ ಮಾಡುವವರಿಗೆ ದಂಡ ಹಾಕುವ ಮೂಲಕ ಪ್ಲಾಸ್ಟಿಕ್ ಮುಕ್ತ ಮಾಡುವಂತೆ ಸೂಚಿಸಿದರು.

ಪಟ್ಟಣ ವ್ಯಾಪ್ತಿಯಲ್ಲಿ ಹಾಡಹಗಲೇ ಕಳ್ಳತನ ಪ್ರಕರಣ ಹೆಚ್ಚಾಗಿದೆ. ಇದನ್ನು ತಡೆಗಟ್ಟಲು ಏನು ಮಾಡಿದ್ದೀರಿ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಮುದ್ದುರಾಜ್ ಅವರನ್ನು ಶಾಸಕರು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುದ್ದುರಾಜ್, ರಾತ್ರಿ ಗಸ್ತಿಗೆ ಈಗಾಗಲೇ 13 ಪೊಲೀಸ್ ಪೇದೆಗಳನ್ನು ನಿಯೋಜಿಸಲಾಗಿದೆ. ಈ ಹಿಂದೆ ನಡೆದ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಣ ಮತ್ತು ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಪುರಸಭೆ ಪಟ್ಟಣದ ವಿವಿಧ ಬಡಾವಣೆಗಳ ನಿವೇಶನಗಳ ಇ–ಸ್ವತ್ತು ಮಾಡುತ್ತಿಲ್ಲ, ಬೀದಿ ನಾಯಿ, ಹಂದಿ ಹಾಗೂ ಬೀಡಾಡಿ ದನಗಳ ಹಾವಳಿ ಮಿತಿಮೀರಿದೆ. ಬೀದಿದೀಪಗಳ ಸಮಸ್ಯೆಯಾಗಿದ್ದು, ರಸ್ತೆ ಬದಿ ಚರಂಡಿ ಸ್ಲ್ಯಾಬ್‌ಗಳು ಕುಸಿದು ಪಾದಚಾರಿಗಳಿಗೆ ಮಾರಕವಾಗಿವೆ. ಮಳೆನೀರು ರಸ್ತೆಯಲ್ಲಿ ನಿಂತು ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಪುರಸಭೆಯ ವಾಣಿಜ್ಯ ಮಳಿಗೆಗಳ ಬಾಡಿಗೆ ವಸೂಲಿಯಾಗದೇ ಬಾಕಿ ಉಳಿದಿದೆ. ಮಳಿಗೆಗಳನ್ನು ಟೆಂಡರ್ ಪಡೆದವರು ಅದನ್ನು ಅನಧಿಕೃತವಾಗಿ ಬೇರೆಯವರಿಗೆ ಹೆಚ್ಚಿನ ಬಾಡಿಗೆಗೆ ನೀಡುತಿದ್ದಾರೆ. ಇದನ್ನು ತಡೆಗಟ್ಟಬೇಕು ಎಂದು ಸದಸ್ಯರು ಒತ್ತಾಯಿಸಿದರು.

ಬೀದಿದೀಪ ಹಾಗೂ ಚರಂಡಿ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು, ಸ್ವಚ್ಛತೆಗೆ ಆದ್ಯತೆ ನೀಡುವ ಜೊತೆಗೆ ಕಸ ವಿಲೇವಾರಿ ಹಾಗೂ ಹಂದಿ, ನಾಯಿ, ಹಸು ಇತರೆ ಪ್ರಾಣಿಗಳಿಂದ ರಸ್ತೆ ಬದಿ, ಬೀದಿಗಳಲ್ಲೇ ಆಗಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮ ಜರುಗಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇತ್ತೀಚೆಗೆ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವಿಚಾರಣೆ ನಡೆಸಲಾಗುವುದು. 160 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದಲ್ಲಿ ಕಬಿನಿ ಕುಡಿಯುವ ನೀರಿನ ಯೋಜನೆ ಶೀಘ್ರ ಆರಂಭವಾಗಲಿದೆ ಎಂದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ವಸಂತ ಕುಮಾರಿ, ಆರೋಗ್ಯಾಧಿಕಾರಿ ಗೋಪಿ, ಇಂಜಿನಿಯರ್ ಮಂಜುನಾಥ್, ಸದಸ್ಯರಾದ ಮಧು, ಎನ್.ರಮೇಶ್, ಶಶಿಧರ್ ದೀಪು, ನಿರ್ಮಲ, ಅಣ್ಣಯ್ಯಸ್ವಾಮಿ, ರಾಜಗೋಪಾಲ, ಕುಮಾರ್, ಹೀನಾಕೌಸರ್ ಸೇರಿದಂತೆ ಹಲವರಿದ್ದರು.

ನಾಳೆ ಅಂತರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ, ಜೂ.19– ಆಯುಷ್ ಮಂತ್ರಾಲಯ, ಜಿಲ್ಲಾಡಳಿತ ಮತ್ತು ಜಿಪಂ, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪತಂಜಲಿ ಯೋಗ ಶಿಕ್ಷಣ ಸಮಿತಿ, ಯೋಗನಿರತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಪ್ರತಿ ಮನೆ ಅಂಗಳದಲ್ಲೂ ಯೋಗ ಎಂಬ ಘೋಷವಾಕ್ಯದಡಿ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ.21 ರಂದು ಬೆಳಗ್ಗೆ 6ರಿಂದ 9 ರವರೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಎಂ.ಆರ್.ಮಂಜುನಾಥ್, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಮಧು. ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ನಗರಸಭಾ ಸದಸ್ಯರಾದ ಸಿ.ಜಿ.ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಆಯುಷ್ ಇಲಾಖೆ ಆಯುಕ್ತ ಜೆ.ಮಂಜುನಾಥ್, ಪತಂಜಲಿ ಯೋಗ ಶಿಕ್ಷಣ ಸಮಿತಿ ಜಿಲ್ಲಾ ಅಧ್ಯಕ್ಷ ಹೆಚ್.ಜಿ.ಕುಮಾರಸ್ವಾಮಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

ಮೈಸೂರು ಮಿತ್ರ

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.19– 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ) ಹೊಸ ಪ್ರವೇಶಾತಿ ಪಡೆಯಲು ಬಯಸುವ ಪ.ಜಾತಿ/ಪ.ವರ್ಗದ ಹಾಗೂ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಗೆ ಸ್ಟೇಟ್ ಹಾಸ್ಟಲ್ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ಡಾ| ಬಾಬು ಜಗಜೀವನ್ ರಾಮ್ ಭವನದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1, ಅಥವಾ ದೂರವಾಣಿ ಸಂಖ್ಯೆ–0821–2520910ಯನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಸಿದ್ದರಾಮಯ್ಯರಿಗೆ ಹೆದರಿಕೆ, ಪುಕ್ಕಲತನ

ಮನಸ್ಸಿನಿಂದ ಎರಡನೇ ಬಾರಿಗೆ ಮುಖ್ಯಮಂತ್ರಿ ಮಾಡಿದೆ. ಆದರೆ ಸಿದ್ದರಾಮಯ್ಯಗೆ ಆ ಧಾರಾಳತನ ಇಲ್ಲ. ಸಿಎಂ ಸ್ಥಾನ ಬಿಟ್ಟು ಕೊಡುವ ಮನಸ್ಸಿಲ್ಲದ ಸಿದ್ದರಾಮಯ್ಯ ಅವರು ತಮ್ಮ ಚೇಲಾ ಪಡೆ ಮೂಲಕ ತಾವೇ ಪೂರ್ಣಾವಧಿ ಸಿಎಂ ಅಂತ ಹೇಳಿಸುತ್ತಿದ್ದಾರೆ. ಎಂ.ಬಿ. ಪಾಟೀಲ್ ಸಿದ್ದರಾಮಯ್ಯ ಅವರ ಚೇಲಾ ಪಡೆ ಅಧ್ಯಕ್ಷ ಎಂದು ಪ್ರತಾಪ್ ಸಿಂಹ ಹೇಳಿದರು. ಸಿದ್ದರಾಮಯ್ಯ ಅವರು ಪೂರ್ಣಾವಧಿ ಸಿಎಂ ಎಂದು ಹೇಳುವ ಮೂಲಕ ಒಕ್ಕಲಿಗರನ್ನು ಮುಗಿ ಸಲು ಹೊರಟಿದ್ದಾರೆ. ಹೀಗೆ ಹೇಳಿದ ನಿಮಗೆ ಡಿ.ಕೆ.ಸುರೇಶ್, ಎಚ್ಚರಿಕೆ ನೀಡಿದ್ದಾರೆ. ಇನ್ನೊಂದು ಬಾರಿ ಹೀಗೆ ಹೇಳಿದ್ರೆ ನಿಮ್ಮ ಕೊರಳ ಪಟ್ಟಿ ಹಿಡಿಯುತ್ತಾರೆ ನೋಡ್ತಾ ಇರಿ ಎಂದು ಪ್ರತಾಪ್ ಸಿಂಹ ಎಂ.ಬಿ.ಪಾಟೀಲ್ ಅವರನ್ನು ಎಚ್ಚರಿಸಿದರು.

ಯತ್ನಾಳ್ ವಿಪಕ್ಷ ನಾಯಕನಾದರೆ ಒಳ್ಳೆಯದು



ಶೀಘ್ರದಲ್ಲೆ ವಿಧಾನಸಭೆ ವಿರೋಧ ಪಕ್ಷದ ನಾಯಕನನ್ನು ಬಿಜೆಪಿ ಹೈಕಮಾಂಡ್ ನೇಮಕ ಮಾಡಲಿದೆ. ರಾಷ್ಟ್ರೀಯತೆ, ಹಿಂದುತ್ವವನ್ನು ಗಟ್ಟಿಯಾಗಿ ಪ್ರತಿಪಾದಿ ಸುವಬಸವನಗೌಡ ಪಾಟೀಲ್ ಯತ್ನಾಳ್ ಅವರನ್ನು ವಿರೋಧ ಪಕ್ಷ ನಾಯಕನಾಗಿ ಆಯ್ಕೆ ಮಾಡಿದರೆ ಒಳಿತು. ಹವಾ ಇಟ್ಟುಕೊಂಡಿರುವ ಯತ್ನಾಳ್ ಅವರಿಗೆ ಕಾಂಗ್ರೆಸ್ ಪಕ್ಷವನ್ನು ಎದುರಿಸುವ ಎದೆಗಾರಿಕೆ ಇದೆ ಎಂದು ಪ್ರತಾಪ್‌ಸಿಂಹ ಅವರು ಬಸವನಗೌಡ ಪಾಟೀಲ್ ಯತ್ನಾಳ್ ಪರ ಬ್ಯಾಟ್ ಬೀಸಿದರು.

ಜನರಿಗೆ ಆ ಹಣ ಕೊಡಿ...

ಜನರ ಬ್ಯಾಂಕ್ ಖಾತೆಗೆ ಹಾಕಿ. ಜನರು ಹಣ ಬೇಡ ಅಂತ ಹೇಳಲ್ಲ ಎಂದು ಪ್ರತಾಪ್‌ಸಿಂಹ ಸಲಹೆ ನೀಡಿದರು. ಕೇಂದ್ರ ಸರ್ಕಾರ ಐದು ಕೆ.ಜಿ. ಅಕ್ಕಿ ಕೊಡುತ್ತಿದೆ ಎಂದು ಈಗಲಾದರೂ ಒಪ್ಪಿಕೊಂಡಿದ್ದೀರಾ. ಕೇಂದ್ರ ಸರ್ಕಾರ ಐದು ಕೆ.ಜಿ.ಕೊಟ್ಟರೆ, ಉಳಿದ ಐದು ಕೆ.ಜೆ. ಅಕ್ಕಿ ಕೊಡಬೇಕಾಗಿರುವುದು ನಿಮ್ಮ ಕರ್ತವ್ಯವಲ್ಲವೆ? ಈಗ ಕೇಂದ್ರ ಸರ್ಕಾರ ಅಕ್ಕಿ ಕೊಡುತ್ತಿಲ್ಲ ಎಂದು ದೂರುತ್ತೀರಾ. ಹಾಗೊಂದು ವೇಳೆ ಹತ್ತು ಕೆ.ಜಿ. ಅಕ್ಕಿ ಕೊಡುವುದಾದರೆ ಮೋದಿ ಸರ್ಕಾರವೇ ಕೊಡುತ್ತಿತ್ತು. ಹಾಗಾದ್ರೆ ಮೋದಿ ಸರ್ಕಾರದ ಅಕ್ಕಿಯಲ್ಲಿ ಸಿದ್ದರಾಮಣ್ಣ ಜಾತ್ರೆ ಮಾಡುವುದೇ? ಎಂದು ಪ್ರತಾಪ್‌ಸಿಂಹ ಪ್ರಶ್ನಿಸಿದರು. ಪ್ರವಾಹ ಸೇರಿದಂತೆ ಹಲವು ತುರ್ತು ಸಮಯದಲ್ಲಿ ಆಹಾರ ಪೂರೈಸುವ ಸಲುವಾಗಿ ಕೇಂದ್ರ ಸರ್ಕಾರ ಸ್ಟಾಕ್ ಮಾಡಿರುತ್ತದೆ. ಆ ಅಕ್ಕಿಯನ್ನು ಕೊಡಲು ಸಾಧ್ಯವೆ? ನೀವು ಹೇಳಿದಂತೆ ಇಡೀ ದೇಶದ ಸಂಸದರು ಒತ್ತಡ ಹಾಕಿ ಅಕ್ಕಿ ಕೊಡಿಸಲು ಕೇಂದ್ರ ಸರ್ಕಾರವೇನು ಅಕ್ಕಿ ಫ್ಯಾಕ್ಟರಿ ಇಟ್ಟುಕೊಂಡು, ಉತ್ಪಾದನೆ ಮಾಡುತ್ತಿದೆಯೇ ಎಂದು ಪ್ರತಾಪ್ ಸಿಂಹ ರಾಜ್ಯ ಸರ್ಕಾರಕ್ಕೆ ಟಾಂಗ್ ಕೊಟ್ಟರು. ವಿದ್ಯುತ್ ದರವನ್ನು ಯದ್ವಾ ತದ್ವಾ ಏರಿಕೆ ಮಾಡಿ, ಕೈಗಾರಿಕೆಗಳಿಗೆ ಅಷ್ಟೆ ಅಲ್ಲದೆ ಜನರಿಗೂ ಬರೆ ಎಳೆದಿದ್ದೀರಾ. ಈಗ ಉದ್ಯಮಿಗಳು ಕೈಗಾರಿಕಾ ಬಂದ್‌ಗೆ ಕರೆ ಕೊಟ್ಟಿದ್ದಾರೆ. 200 ಯೂನಿಟ್ ವಿದ್ಯುತ್ ಕೊಡುತ್ತೇವೆ ಅಂತೀರಲ್ಲ, ನಿಮ್ಮ ಮನೆಯಲ್ಲಿ ಎಷ್ಟು ವಿದ್ಯುತ್ ಖರ್ಚಾಗುತ್ತದೆ ಎಂಬ ಪರಿಜ್ಞಾನ ನಿಮಗೆ ಇದೆಯೇ ಎದು ಪ್ರಶ್ನಿಸಿದರು. ಕಾಂಗ್ರೆಸ್ ಸರ್ಕಾರ ದೋಖಾ ಸರ್ಕಾರ ಅಂತ ಜನರಿಗೆ ಈಗ ಮನವರಿಕೆ ಆಗಿದೆ. ಗ್ಯಾರಂಟಿ ಫ್ರೀ ಸ್ಕೀಂಗಳು ಒಂಥರಾ ಗಂಡನ ದರೋಡೆ ಮಾಡಿ, ಹೆಂಡತಿಗೆ ಕೊಟ್ಟಂತಾಗಿದೆ. ಗಂಡನ ಜೇಬಿಗೆ ಕತ್ತರಿ ಹಾಕಿ ಹೆಂಡತಿಗೆ ಕೊಡುವ ನಿಮ್ಮ ಯೋಜನೆಯಲ್ಲಿ ಯಾವ ಅರ್ಥ ಇದೆ? ಎಂದು ಪ್ರತಾಪ್ ಸಿಂಹ ತರಾಟೆಗೆ ತೆಗೆದುಕೊಂಡರು.

ಚಿಲ್ಲರೆ ಕಾಸು ಸಿಗುತ್ತಿದೆ ಅಂತ ಎಂ.ಬಿ.ಪಾಟೀಲ್ ಒದ್ದಾಡುತ್ತಿದ್ದಾರೆ!

ಭಾವಿಸಿದ್ದಾರೆ. ಡಿ.ಕೆ.ಶಿವಕುಮಾರ್ ಸೇರಿದಂತೆ ಯಾರ ಮೇಲಾದರೂ ಸಿದ್ದರಾಮಯ್ಯನವರು, ಗುಂಡು ಹಾರಿಸಿದೇಕೆಂದರೆ ಅವರ ಬಂದೂಕಿಗೆ ಎಂ.ಬಿ.ಪಾಟೀಲ್ ಹೆಗಲು ಕೊಡುವ ಕೆಲಸವನ್ನಷ್ಟೆ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಲೇವಡಿ ಮಾಡಿದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಬಗ್ಗೆ ವ್ಯಂಗ್ಯಭರಿತವಾಗಿ ಮಾತಾಡಿರುವ ಎಂ.ಬಿ.ಪಾಟೀಲ್ ವಿರುದ್ಧ ಕಿಡಿಕಾರಿದ ಪ್ರತಾಪ್ ಸಿಂಹ, ಬಿ.ಎಲ್.ಸಂತೋಷ್ ಏನಾದರೂ ನಿಮಗೆ ತಿವಿದಿದ್ದಾರಾ ಎಂದು ಹರಿಹಾಯ್ದರು.

ಬ್ರಾಹ್ಮಣರನ್ನು ಏಕೆ ದಿನ ಬೈಯ್ಯುತ್ತೀರಾ. ಬ್ರಾಹ್ಮಣರ ಮೇಲೆ ನಿಮಗೇಕೆ ಇಷ್ಟು ಕೋಪ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಬಸವಣ್ಣನವರು ಮೂಲದಲ್ಲಿ ಬ್ರಾಹ್ಮಣರು ಎಂಬುದನ್ನು ಮರೆಯದಿರಿ ಎಂದು ಸಲಹೆ ನೀಡಿದರು. ಲಿಂಗಾಯಿತ ಮತ್ತು ವೀರಶೈವ ಎಂದು ಭೇದಿಸಿ ಧರ್ಮ ಒಡೆಯುವ ಕೆಲಸ ಮಾಡಿದ್ದು ನೀವಲ್ಲವೆ. ನಿಜವಾಗಿಯೂ ನೀವು ಲಿಂಗಾಯಿತರೆ ಎಂದು ಮತ್ತೊಮ್ಮೆ ಪ್ರಶ್ನಿಸಿದ ಪ್ರತಾಪ್ ಸಿಂಹ, ಯಡಿಯೂರಪ್ಪ ಅವರನ್ನು ಕುತಂತ್ರದಿಂದ ಜೈಲಿಗೆ ಕಳುಹಿಸುವಾಗ, ದಿನೇಶ್ ಗುಂಡೂರಾವ್ ಅವರು ಯಡಿಯೂರಪ್ಪ ಅವರನ್ನು ಹುಚ್ಚ ಎಂದಾಗ ನಿಮ್ಮ ಲಿಂಗಾಯಿತ ಭಾವನೆ ಜಾಗೃತವಾಗಲಿಲ್ಲವೆ? ಯಡಿಯೂರಪ್ಪ ವಿರುದ್ಧ ಷಡ್ಯಂತ್ರ ನಡೆದಾಗ ಸುಪಾರಿ ಹೊಣೆ ಹೊತ್ತ ವ್ಯಕ್ತಿ ನೀವಲ್ಲವೆ? ಎಂದು ಪ್ರಶ್ನಿಸಿದರು.

ಕಾರ್ಯಕ್ರಮ ರದ್ದು

ಅಗ್ರಿಕಲ್ಚರಲ್ ಕೋ–ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ (ನಾಫೆಡ್) ಹಾಗೂ ಕೇಂದ್ರೀಯ ಭಂಡಾರ ಈ ಮೂರು ಭಾರತ ಸರ್ಕಾರಕ್ಕೆ ಸೇರಿರುವುದರಿಂದ ಈ ಈ ಸಂಸ್ಥೆಗಳಿಂದ ಅಕ್ಕಿ ಪಡೆಯಲು ದರಪಟ್ಟಿ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಭಾರತೀಯ ಆಹಾರ ಮಂಡಳಿ(ಎಫ್‌ಸಿಐ) ನಿಂದ 34 ರೂ.ಗೆ ಒಂದು ಕೆ.ಜಿ.ಅಕ್ಕಿ, 2.60 ರೂ. ಸಾಗಾಣಿಕೆ ವೆಚ್ಚ ಸೇರಿ ಒಂದು ಕೆ.ಜಿ. ಅಕ್ಕಿಗೆ ಒಟ್ಟು 36.40 ರೂ. ವೆಚ್ಚ ತಗಲುತ್ತದೆ. ಈ ಮೂರು ಸಂಸ್ಥೆಗಳು ನಮೂದಿಸುವ ದರ, ಸರಬರಾಜು ಮಾಡುವ ಪ್ರಮಾಣಗಳ ವಿವರ ಪಡೆಯಲಾಗುವುದು. ಟೆಂಡರ್ ಮೂಲಕ ಅಕ್ಕಿ ಪಡೆಯಲೂ ಕ್ರಮ ಕೈಗೊಳ್ಳಲಾಗುವುದು ಎಂದರು. ಅನ್ನಭಾಗ್ಯ ಯೋಜನೆಯಡಿ ಪ್ರತಿ ಯುನಿಟ್‌ಗೆ 10 ಕೆಜಿ ಅಕ್ಕಿ ವಿತರಿಸಲು ಒಂದು ತಿಂಗಳಿಗೆ 840 ಕೋಟಿ ರೂ. ವೆಚ್ಚ ತಗುಲಲಿದೆ. ವರ್ಷಕ್ಕೆ 10,092 ಕೋಟಿ ವೆಚ್ಚವಾಗಲಿದೆ.

ಸರ್ಕಾರ ಈ ವೆಚ್ಚವನ್ನು ಭರಿಸಿ ಅಕ್ಕಿಯನ್ನು ವಿತರಿಸಲು ಸಿದ್ಧವಿದೆ. ಅಕ್ಕಿಯ ದಾಸ್ತಾನು ಲಭ್ಯವಿದ್ದರೂ ಕೇಂದ್ರ ಸರ್ಕಾರದವರು ಅಕ್ಕಿ ನೀಡಲು ಒಪ್ಪುತ್ತಿಲ್ಲ.

ರಾಜ್ಯ ಬಿಜೆಪಿ ಪಕ್ಷದವರು ರಾಜ್ಯದ ಬಡವರಿಗೆ ಅನುಕೂಲವಾಗಲು ಅಕ್ಕಿಯನ್ನು ವಿತರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬಹುದಲ್ಲ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು, ರಾಜ್ಯದಲ್ಲಿ ರಾಗಿ, ಜೋಳವನ್ನು 6 ತಿಂಗಳವರೆಗೆ ತಲಾ 2 ಕೆಜಿ ಕೊಡುವಷ್ಟು ಮಾತ್ರ ದಾಸ್ತಾನು ಲಭ್ಯವಿದೆ. ಹಳೇ ಮೈಸೂರು ಭಾಗದ ಜನರಿಗೆ 2 ಕೆಜಿ ರಾಗಿ ಹಾಗೂ ಹೈದ್ರಾಬಾದ್ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಭಾಗದ ಜನರಿಗೆ 2 ಕೆಜಿ ಜೋಳ ನೀಡಬಹುದು. ಇನ್ನುಳಿದ 3 ಕೆಜಿ ಅಕ್ಕಿಯನ್ನು ರಾಜ್ಯದ ಜನರಿಗೆ ನೀಡಬೇಕಾಗುತ್ತದೆ ಎಂದರು. ಪಂಜಾಬ್ ಸರ್ಕಾರ ಕರ್ನಾಟಕಕ್ಕೆ ಅಕ್ಕಿ ಸರಬರಾಜು ಮಾಡಲು ಸಿದ್ಧವಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಪಂಜಾಬ್ ನಿಂದ ಅಕ್ಕಿ ಖರೀದಿ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಚರ್ಚಿಸಿದ್ದಾರೆ. ರಾಜ್ಯ ತಿಳಿಸುವ ದರಕ್ಕೆ ಅಕ್ಕಿ ನೀಡಲು ಪಂಜಾಬ್ ಸರ್ಕಾರದೊಂದಿಗೆ ಮತ್ತೊಮ್ಮೆ ಚರ್ಚಿಸಲಾಗುವುದು ಎಂದರು. ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಅಕ್ಕಿ ಪಡೆಯುವವರೆಗೆ ಸರ್ಕಾರದ ಬಳಿ ಸಮಯವಿದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಜುಲೈ 1 ರಿಂದ ರಾಜ್ಯದ ಜನರಿಗೆ ಅಕ್ಕಿಯನ್ನು ನೀಡಲು ಸರ್ಕಾರ ಪ್ರಮಾಣಿಕವಾಗಿ ಪ್ರಯತ್ನಿಸುತ್ತಿದೆ. ಕೇಂದ್ರ ಸರ್ಕಾರದಲ್ಲಿ ಅಕ್ಕಿಯ ದಾಸ್ತಾನು ಲಭ್ಯವಿದ್ದು, ಅವರು ರಾಜ್ಯಕ್ಕೆ ನೀಡಲು ಮನಸ್ಸು ಮಾಡಬೇಕಿದೆ. ಎಂಎಸ್‌ಪಿ ಮೂಲಕ ಅಕ್ಕಿ ಖರೀದಿಸಬೇಕಾಗಿದೆ. ಬಡವರಿಗೆ ಅಕ್ಕಿ ನೀಡುವ ವಿಷಯದಲ್ಲಿ ಯಾರೇ ಎಷ್ಟೇ ರಾಜಕಾರಣ ಮಾಡಿದರೂ, ನಮ್ಮ ಸರ್ಕಾರ ಅನ್ನಭಾಗ್ಯ ಯೋಜನೆಯನ್ನು ಖಂಡಿತ ಚಾಲನೆಗೊಳಿಸಲಿದೆ ಎಂದರು.

ಕೇಂದ್ರ ಸರ್ಕಾರ ಬಡವರ ಅಕ್ಕಿ ಕೊಡುವುದರಲ್ಲಿ ರಾಜಕಾರಣ ಹಾಗೂ ದ್ವೇಷದ ರಾಜಕಾರಣ ಮಾಡುತ್ತಿದೆ. ಕೇಂದ್ರ ಸರ್ಕಾರವೇನೂ ಭತ್ತ ಬೆಳೆಯಲು ಜಮೀನು ಇಟ್ಟುಕೊಂಡಿಲ್ಲ. ಅವರೂ ರಾಜ್ಯಗಳಿಂದ ಅಕ್ಕಿಯನ್ನು ಪಡೆದಿದ್ದಾರೆ.

ಸಹಕಾರಿ ಒಕ್ಕೂಟದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಪದೇ ಪದೆ ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ. ಕೇಂದ್ರ ಸರ್ಕಾರಕ್ಕೆ ತೆರಿಗೆ ಬರುವುದು ರಾಜ್ಯಗಳಿಂದ. ಹೀಗಾಗಿ ಅವರು ಸಹಕರಿಸಬೇಕು ಎಂದರು. ಕರ್ನಾಟಕಕ್ಕೆ ನೀರು ಬಿಡಬಾರದೆಂದು ಮಹಾರಾಷ್ಟ್ರದ ರೈತರು ಬ್ಯಾರೇಜ್ ಬಂದ್ ಮಾಡಿದ್ದು, ರೈತರು ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಸುದ್ದಿಗಾರರು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಅಲ್ಲಿನ ರೈತರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಮಾತನಾಡಲಾಗುವುದು ಎಂದರು.

ಸರ್ಕಾರ ಐದು ವರ್ಷಗಳ ಅವಧಿ ಮುಗಿಸುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು, ಅಧಿಕಾರ ಹಂಚಿಕೆಯ ಬಗ್ಗೆ ಗೊಂದಲಗಳು ನಮ್ಮಲ್ಲಿಲ್ಲ ಎಂದು ಸ್ಪಷ್ಟಪಡಿಸಿದರು. ಜಿ.ಎಸ್.ಟಿ ಸಮಿತಿಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಬಹುದಿತ್ತು ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಕೃಷ್ಣಬೈರೇಗೌಡರನ್ನು ಕಳಿಸಲು ಅವಕಾಶವಿದೆ. ಅದಕ್ಕೆ ಅವರು ಅರ್ಹರೂ ಕೂಡ ಎಂದರು.

ಈ ಬಾರಿ ಅದ್ದೂರಿಯಾಗಿ ಕೆಂಪೇಗೌಡ ಜಯಂತಿ ಆಚರಣೆ

● ಶಾಸಕ ಕೆ.ಹರೀಶ್‌ಗೌಡರ ಸಲಹೆ ● ಮುಂದಿನ ಪೀಳಿಗೆಗೆ ಶ್ರೀಯುತರ ಕೊಡುಗೆ ಮನವರಿಕೆ ಮಾಡಿಕೊಡುವ ಬಗ್ಗೆಯೂ ವಿವರಣೆ ● ಇಬ್ಬರು ಸಾಧಕರಿಗೆ 'ಕೆಂಪೇಗೌಡ ಪ್ರಶಸ್ತಿ' ಪ್ರದಾನ



ಜೂ.21ಕ್ಕೆ ರಥಯಾತ್ರೆ...

ಜೂ.21ರಂದು ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನಾಡಪ್ರಭು ಕೆಂಪೇಗೌಡರ ರಥಯಾತ್ರೆಗೆ ಚಾಲನೆ ನೀಡಲಾಗುವುದು. ರಥಯಾತ್ರೆ ಸಾಗುವ ಮಾರ್ಗ ಹಾಗೂ ದಿನಾಂಕ ಅಂತಿಮಗೊಳಿಸುವ ಕುರಿತು ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ ಅವರೊಂದಿಗೆ ಚರ್ಚಿಸಿ ನಿರ್ಧರಿಸಲು ತೀರ್ಮಾನಿಸಲಾಯಿತು.

ಮೈಸೂರು, ಜೂ.19(ಎಂಕೆ)– ನಾಡ ಪ್ರಭು ಕೆಂಪೇಗೌಡರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಒಕ್ಕಲಿಗ ಸಮುದಾಯದ ಒಗ್ಗಟ್ಟು, ಶಕ್ತಿ ಪ್ರದರ್ಶನದ ಜೊತೆಗೆ ಸಮುದಾಯದ ಮುಂದಿನ ಪೀಳಿಗೆಗೆ ಕೆಂಪೇಗೌಡರ ಕೊಡುಗೆಯನ್ನು ತಿಳಿಸಬೇಕಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ನಗರದ ವಿದ್ಯಾರಣ್ಯಪುರಂನಲ್ಲಿ ಮೈಸೂರು ಮತ್ತು ಚಾ.ನಗರ ಜಿಲ್ಲಾ ಒಕ್ಕಲಿಗರ ಸಂಘದ ಭವನದಲ್ಲಿ ಸೋಮವಾರ ನಡೆದ ನಾಡ ಪ್ರಭು ಕೆಂಪೇಗೌಡರ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜೂ.27 ರಂದು ಸರ್ಕಾರದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಗುವುದು. ಅದೇ ದಿನ ಮೈಸೂರಿನಲ್ಲಿಯೂ ಅದ್ದೂರಿಯಾಗಿ ಜಯಂತಿ ಆಚರಿಸಬೇಕು. ಇದೇ ಸಂದರ್ಭದಲ್ಲಿ ಒಕ್ಕಲಿಗ ಸಮುದಾಯ ಇಬ್ಬರು ಸಾಧಕರನ್ನು ಗುರ್ತಿಸಿ ಅವರಿಗೆ 'ಕೆಂಪೇಗೌಡ ಪ್ರಶಸ್ತಿ' ನೀಡಿ ಗೌರವಿಸಬೇಕು ಎಂದು ತಿಳಿಸಿದರು.

ಕಳೆದ ವರ್ಷ ಸುಮಾರು 5 ಸಾವಿರ ಜನರು ಸೇರಿದ್ದರು ಎಂಬ ಮಾಹಿತಿ ಇದೆ. ಆದರೆ ಈ ವರ್ಷ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಬಂಧುಗಳು ಒಂದೆಡೆ ಸೇರಬೇಕು. ಇದಕ್ಕಾಗಿ ಸಂಘದಲ್ಲಿನ ಪ್ರತಿಯೊಬ್ಬರು ಶ್ರಮಿಸಬೇಕಾಗಿದೆ. ಕೆಂಪೇಗೌಡರ ಆಚರಣೆ ಮೂಲಕ ಒಕ್ಕಲಿಗ ಸಮುದಾಯದಲ್ಲಿ ಶಕ್ತಿಯಿಲ್ಲದವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸವಾಗಬೇಕಾಗಿದೆ. ಮೈಸೂರಿನಂತಹ ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಅದ್ದೂರಿಯಾಗಿ ನಡೆಯದಿದ್ದರೆ ಸಮುದಾಯಕ್ಕೆ ಶೋಭೆಯಲ್ಲ ಎಂದರು.

2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದಿಂದ ಕೆಂಪೇಗೌಡರ ಜಯಂತಿ ಆಚರಣೆಯ ಘೋಷಣೆ ಮಾಡಿದ್ದರು. ಅದರಂತೆ ಮೈಸೂರಿನಲ್ಲಿ ಜಯಂತಿ ಆಚರಣೆಗೆ ಮಾಜಿ ಶಾಸಕರಾದ ವಾಸು, ಎಲ್.ನಾಗೇಂದ್ರ ಅವರು ಉತ್ತಮ ಸಹಕಾರ ನೀಡಿದ್ದಾರೆ. ಮಾಜಿ ಶಾಸಕರಿಬ್ಬರ ಸಹಕಾರದ ಜೊತೆಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಅವರ ಪುತ್ರ ಹಾಗೂ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಸಾ.ರಾ. ಮಹೇಶ್, ನರಸಿಂಹರಾಜ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಸಂದೇಶ್‌ಸ್ವಾಮಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕವೀಶ್‌ಗೌಡ ಅವರ ಸಹಕಾರವನ್ನು ಪಡೆಯುವುದೂ ಮುಖ್ಯವಾಗಿದೆ ಎಂದು ಅಭಿಪ್ರಾಯಿಸಿದರು.

12 ಲಕ್ಷ ಖರ್ಚು: ಕೆಂಪೇಗೌಡರ ಜಯಂತಿ ಆಚರಣೆಗೆ ಕಳೆದ ವರ್ಷ ಸುಮಾರು 8 ಲಕ್ಷ ರೂ. ಖರ್ಚಾಗಿದೆ ಎಂದು ಸಂಘದ ಲೆಕ್ಕಪತ್ರಗಳು ಹೇಳುತ್ತಿವೆ. ಆದರೆ ಈ ವರ್ಷ ಅದಕ್ಕಿಂತಲೂ ಅಂದರೆ ಅಂದಾಜು 12 ಲಕ್ಷ ರೂ ಖರ್ಚಾಗುವ ಸಾಧ್ಯತೆ ಇದೆ. ಒಕ್ಕಲಿಗ ಸಮುದಾಯದಲ್ಲಿ ಸಾಕಷ್ಟು ಮಂದಿ ದಾನಿಗಳಿದ್ದು, ಅವರಿಂದ ಆರ್ಥಿಕ ಸಹಕಾರ ಪಡೆಯಲು ಸಂಘದೊಂದಿಗೆ ಸಹಕರಿಸುತ್ತೇನೆ. ಹಾಗೆಯೇ ನನ್ನ ಆತ್ಮೀಯರಿಂದ ಸುಮಾರು 2 ಲಕ್ಷ ರೂ. ಕೊಡಿಸುವುದರ ಜೊತೆಗೆ ಸಂಘದ ತೀರ್ಮಾನದಂತೆ ವೈಯುಕ್ತಿಕವಾಗಿ ಬೆಂಬಲ ನೀಡಲಾಗುವುದು. ಆರ್ಥಿಕ ಸಹಕಾರ ಪಡೆಯುವುದರ ಜೊತೆಗೆ ಅವರನ್ನೂ ಜಯಂತಿ ಆಚರಣೆಗೆ ಕರೆತರಬೇಕು ಎಂದು ಸಲಹೆ ನೀಡಿದರು.

2ನೇ ಸ್ಥಾನ: ರಾಜ್ಯದ ಜನಸಂಖ್ಯೆಯಲ್ಲಿ ಒಕ್ಕಲಿಗ ಸಮುದಾಯ 2ನೇ ಸ್ಥಾನದಲ್ಲಿದೆ. ಆದರೂ ಆಚರಣೆ ವೇಳೆ ಸೇರುವುದು ಮಾತ್ರ ಕಡಿಮೆ ಜನ. ಆದ್ದರಿಂದ ಕೆಂಪೇಗೌಡರ ಜಯಂತಿ ವಿಚಾರವನ್ನು ಹಳ್ಳಿ ಹಳ್ಳಿಗೂ ಮುಟ್ಟಿಸುವ ನಿಟ್ಟಿನಲ್ಲಿ ಕಳೆದ ಬಾರಿಯಂತೆ ಈ ವರ್ಷವೂ ರಥಯಾತ್ರೆ ನಡೆಸಿ. ಸಂಘದಲ್ಲಿನ ಎಲ್ಲಾ ಪದಾಧಿಕಾರಿಗಳು ಜವಾಬ್ದಾರಿ ಹಂಚಿಕೊಂಡು ಕೆಲಸ ಮಾಡುವ ಮೂಲಕ 2015ರಲ್ಲಿ ನಡೆದಂತೆಯೇ ಅದ್ದೂರಿಯಾಗಿ ಆಚರಿಸಬೇಕು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಜಯಂತಿ ನಡೆಯಬೇಕು ಎಂದು ಸಲಹೆ ನೀಡಿದರು.

ಮೈಸೂರು ಮತ್ತು ಚಾ.ನಗರ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಮೈಸೂರು ಜಿಲ್ಲಾ ಉಪಾಧ್ಯಕ್ಷ ಮಹೇಶ್, ಕೆ.ಆರ್. ನಗರ ತಾಲೂಕು ಅಧ್ಯಕ್ಷ ಅಣ್ಣೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮುಡಾ ಮಾಜಿ ಸದಸ್ಯೆ ಲಕ್ಷ್ಮಿದೇವಿ, ನಿರ್ದೇಶಕ ನಾಗಣ್ಣ, ಮುಖಂಡರಾದ ಮೋಹನ್ ಕುಮಾರ್‌ಗೌಡ, ರಾಮಣ್ಣ, ಶೇಖರ್, ಗುರುರಾಜ್, ಬೆಟ್ಟೇಗೌಡ, ಹೇಮಾವತಿ, ರವಿಕುಮಾರ್ ಮತ್ತಿತರರಿದ್ದರು.

ಸಮಗ್ರ ಅಧ್ಯಯನಕ್ಕೆ ಆಗ್ರಹ...

ಸಭೆಯಲ್ಲಿ ಮಾತನಾಡಿದ ಒಕ್ಕಲಿಗ ಸಮುದಾಯ ಮುಖಂಡ ಶಿವಶಂಕರ್, ರಾಜ್ಯ ಸರ್ಕಾರ ಶಾಲಾ ಪಠ್ಯಕ್ರಮ ಪರಿಷ್ಕರಣೆ ಮಾಡುತ್ತಿದ್ದು, ನಾಡಪ್ರಭು ಕೆಂಪೇಗೌಡರು, ರಾಷ್ಟ್ರಕವಿ ಕುವೆಂಪು ಹಾಗೂ ಕೆಂಗಲ್ ಹನುಮಂತಯ್ಯ ಅವರ ಕುರಿತು ಸಮಗ್ರ ಅಧ್ಯಯನಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸುವಂತೆ ಶಾಸಕ ಕೆ.ಹರೀಶ್ ಗೌಡ ಅವರಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದರು.

ಮೋದಿ ಅಮೆರಿಕ ಭೇಟಿ: ಸ್ವಾಗತಕ್ಕೆ ಸಜ್ಜಾಗಿರುವ ಭಾರತೀಯ ಸಮುದಾಯ



ವಾಷಿಂಗ್ಟನ್: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ಪ್ರವಾಸದ ವೇಳೆ ಭವ್ಯ ಸ್ವಾಗತ ನೀಡಲು ಭಾರತೀಯ ಸಮುದಾಯ ಸಜ್ಜಾಗಿದೆ.

20ಕ್ಕೂ ಹೆಚ್ಚು ಪ್ರಮುಖ ನಗರಗಳಲ್ಲಿ ಮೋದಿ ಅವರಿಗೆ ಸ್ವಾಗತ ಕೋರಲು, ಏಕತಾ ಅಭಿಯಾನ ಆಯೋಜಿಸಲು ಸಿದ್ಧತೆ ನಡೆದಿದೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಹ್ವಾನದ ಮೇರೆಗೆ ಮೋದಿ ಜೂನ್ 21 ರಿಂದ 24ರವರೆಗೆ ಅಮೆರಿಕ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಮೋದಿ ಪ್ರವಾಸದ ವೇಳೆ 22ರಂದು ಅಮೆರಿಕ ಕಾಂಗ್ರೆಸ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವರು. ಮೋದಿ ಗೌರವಾರ್ಥ ಬೈಡನ್ ದಂಪತಿ ಜೂನ್ 22ರಂದು ಔತಣ ಕೂಟ ಆಯೋಜಿಸಿದ್ದಾರೆ ಅಲ್ಲದೆ, 23ರಂದು ವಾಷಿಂಗ್ಟನ್‌ನ ಅಂತರರಾಷ್ಟ್ರೀಯ ವಾಣಿಜ್ಯ ಕೇಂದ್ರದಲ್ಲಿರುವ ರೊನಾಲ್ಡ್ ರೇಗನ್ ಸಂಕೀರ್ಣದಲ್ಲಿ ಭಾರತ ಸಮುದಾಯದ ಆಯ್ದ ಆಹ್ವಾನಿತರನ್ನು ಉದ್ದೇಶಿಸಿ ಮೋದಿ ಭಾಷಣ ಮಾಡಲಿದ್ದಾರೆ.

ಭಾನುವಾರದಂದೇ ಭಾರತ ಮೂಲದ ಕೆಲ ಅಮೆರಿಕನ್ನರು ವಾಷಿಂಗ್ಟನ್ ಡಿ.ಸಿಯಲ್ಲಿ ಜಾಥಾ ನಡೆಸಿ 'ಮೋದಿ ಭೇಟಿಗೆ ಕಾತುರರಾಗಿದ್ದೇವೆ' ಎಂಬ ಸಂದೇಶ ರವಾನಿಸಿದರು. ಜಾಥಾದಲ್ಲಿ ಸಮೂಹ ನೃತ್ಯ ಇತ್ತು, ಮೋದಿ ಪರ ಘೋಷಣೆಗಳು ಕೇಳಿಬಂದವು.

ಹ್ಯೂಸ್ಟನ್‌ನಲ್ಲಿಯೂ ಶುಗರ್‌ಲ್ಯಾಂಡ್ ಸ್ಮಾರಕ ಉದ್ಯಾನದಲ್ಲಿ ಸೇರಿದ್ದ ಸಮುದಾಯದವರು, ಭಿತ್ತಿಪತ್ರ ಹಾಗೂ ತ್ರಿವರ್ಣ ಧ್ವಜ ಪ್ರದರ್ಶಿಸಿದರು. ಬಾಸ್ಟನ್, ಷಿಕಾಗೊ, ಅಟ್ಲಾಂಟಾ, ಮಿಯಾಮಿ, ಲಾಸ್ ಏಂಜಲೀಸ್, ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್, ಸ್ಯಾನ್ ಫ್ರಾನ್ಸಿಸ್ಕೊದ ಗೋಲ್ಡನ್ ಗೇಟ್ ಬ್ರಿಡ್ಜ್ ಸೇರಿದಂತೆ ಅಮೆರಿಕದ ಪ್ರಮುಖ ತಾಣಗಳ ಬಳಿ ಈ ರೀತಿಯ ಚಿತ್ರಣ ಕಂಡು ಬಂತು. ಇಂಧನ, ಬಾಹ್ಯಾಕಾಶ, ಆರೋಗ್ಯ, ಶಿಕ್ಷಣ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಉದ್ಯಮಗಳ ಪ್ರಮುಖರು, ಭಾರತ ಮೂಲದ ಅಮೆರಿಕನ್ನರ ಸಮುದಾಯ ಮೋದಿ ಭೇಟಿ ಬಗ್ಗೆ ಉತ್ಸುಕವಾಗಿದೆ ಎಂದು ಹ್ಯೂಸ್ಟನ್‌ನ ಕಾನ್ಸುಲ್ ಜನರಲ್ ಅಸೀಮ್ ಮಹಾಜನ್ ಹೇಳಿದ್ದಾರೆ.

ವಾಷಿಂಗ್ಟನ್ ಡಿ.ಸಿಯಲ್ಲಿ ನಡೆಯುವ ಮೋದಿ ಸ್ವಾಗತ ಕಾರ್ಯಕ್ರಮದಲ್ಲಿ ಭಾಗವಹಿಸಲು ಟೆಕ್ಸಾಸ್ ಸೇರಿ ವಿವಿಧೆಡೆಯಿಂದ ಪ್ರಮುಖರು ತೆರಳುವರು. ಇವೆಲ್ಲವೂ ಮೋದಿ ಆಕರ್ಷಣೆ ಎಂದು ಉದ್ಯಮಿ, ಇಂಡಿಯಾಸ್‌ಪೋರಾ ಸ್ಥಾಪಕ ಎಂ.ಆರ್.ರಂಗಸ್ವಾಮಿ ಹೇಳಿದರು.

'ಕಂಪ್ಯೂಟಿಂಗ್-ಹ್ಯುಮ್ಯಾನಿಟೇರಿಯನ್ ಅಪ್ಲಿಕೇಷನ್ಸ್' ಕುರಿತು

ಜೂ.23, 24ರಂದು ಅಂತಾರಾಷ್ಟ್ರೀಯ ಸಮ್ಮೇಳನ



ಮೈಸೂರು,ಜೂ.19(ಪಿಎಂ)– ಅಮೃತ ವಿಶ್ವವಿದ್ಯಾಪೀಠಂ ಕಾಲೇಜಿನ ಸ್ಕೂಲ್ ಆಫ್ ಕಂಪ್ಯೂಟಿಂಗ್ ಅಂಡ್ ಕಂಪ್ಯೂಟರ್ ಸೈನ್ಸ್ ವಿಭಾಗದ ವತಿಯಿಂದ 'ಕಂಪ್ಯೂಟಿಂಗ್ ಮತ್ತು ಹ್ಯುಮ್ಯಾನಿಟೇರಿಯನ್ ಅಪ್ಲಿಕೇಷನ್ಸ್' ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಜೂ.23 ಮತ್ತು 24ರಂದು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಜಿ. ರವೀಂದ್ರನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವು ಬೋಗಾದಿ ಎರಡನೇ ಹಂತದಲ್ಲಿರುವ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಜೂ.23ರಂದು ಬೆಳಗ್ಗೆ 9.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅತಿಥಿಗಳಾಗಿ ಡಿಆರ್‌ಡಿಓನ ಸೆಂಟರ್ ಫಾರ್ ಏರ್‌ಬಾರ್ನ್ ಸಿಸ್ಟಮ್‌ನ ನಿರ್ದೇಶಕಿ ಡಾ.ಕೆ.ರಾಜಲಕ್ಷ್ಮೀ ಮೆನನ್ ಹಾಗೂ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ನಾಲ್ಕು ಮುಖ್ಯ ದಿಕ್ಸೂಚಿ ಭಾಷಣಗಳಿದ್ದು, ವಿಷಯ ತಜ್ಞರು ತಮ್ಮ ವಿಚಾರಗಳನ್ನು ಮಂಡಿಸಲಿದ್ದಾರೆ. ದುಬೈ ನಾಲೆಡ್ಜ್ ಪಾರ್ಕ್‌ನ ಯುಓಡಬ್ಲ್ಯೂಡಿನ ಇಂಜಿನಿಯರಿಂಗ್ ಅಂಡ್ ಇನ್‌ಫಾರ್ಮೇಶನ್ ಸೈನ್ಸ್‌ನ ಅಸೋಸಿಯೇಟ್ ಪ್ರೊಫೆಸರ್ ಡಾ.ಮನೋಜ್ ಕುಮಾರ್, ಮಲೇಶಿಯಾದ ಯುನಿವರ್ಸಿಟಿ ಆಫ್ ಮಲಯ್‌ನ ಕಂಪ್ಯೂಟರ್ ಸೈನ್ಸ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಪಿ.ಶಿವಕುಮಾರ್, ಬೆಂಗಳೂರಿನ ನೈಮೋ ಟೆಕ್ನಾಲಜೀಸ್‌ನ ಸೀನಿಯರ್ ಕನ್ಸಲ್‌ಟೆಂಟ್ ಡಾ.ಪಿ.ಪುನಿತಾ, ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಚರ್ ಫಾರ್ಮಿಂಗ್ ಸಿಸ್ಟಮ್‌ನ ಸ್ಕೂಲ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯ ಉಪನ್ಯಾಸಕ ಡಾ.ಝೊಂಗ್ಲಿನ್ ವಿಚಾರ ಮಂಡಿಸಲಿದ್ದಾರೆ ಎಂದು ವಿವರಿಸಿದರು.

ಜೂ.24ರಂದು ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಂಗಳೂರು ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ.ಬಿ.ಹೆಚ್.ಶೇಖರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಜೂ.22ರಂದು ಸಮ್ಮೇಳನ ಪೂರ್ವ ಕಾರ್ಯಾಗಾರ ನಡೆಯಲಿದೆ. ಸಮ್ಮೇಳನದಲ್ಲಿ ವಿಚಾರ ಮಂಡಿಸಲು ಹಾಗೂ ಪಾಲ್ಗೊಳ್ಳಲು ಪ್ರತ್ಯೇಕ ಶುಲ್ಕ ನಿಗದಿ ಮಾಡಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 88843 44987, 85499 67666 ಸಂಪರ್ಕಿಸಬಹುದು ಎಂದು ಹೇಳಿದರು. ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಅದ್ವಿತೀಯ ಮುಖೋಪಾಧ್ಯಾಯ, ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್. ಮನೋಹರ್, ಎಸ್.ಅಕ್ಷಯ್ ಗೋಷ್ಠಿಯಲ್ಲಿದ್ದರು.

ರೈತರಿಂದಲೇ ಧಾನ್ಯ ಖರೀದಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯ

● ಅಕ್ಕಿ ನೀಡದೇ ದ್ವೇಷ ರಾಜಕಾರಣ; ಕೇಂದ್ರ ಸರ್ಕಾರದ ವಿರುದ್ಧ ರೈತಸಂಘ ಆರೋಪ ● ಆಯಾ ಪ್ರದೇಶಕ್ಕೆ ಅನುಗುಣವಾಗಿ ಪರ್ಯಾಯ ಧಾನ್ಯ ವಿತರಿಸಿ ● ಮುಖ್ಯಮಂತ್ರಿ, ಆಹಾರ ಖಾತೆ ಸಚಿವರು ಈ ನಿಟ್ಟಿನಲ್ಲಿ ಯೋಚಿಸಿ



ಮೈಸೂರು,ಜೂ.19(ಪಿಎಂ)– ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯಡಿ ಪಡಿತರ ವಿತರಿಸಲು ಕೇಂದ್ರ ಬಿಜೆಪಿ ಸರ್ಕಾರವು ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಕ್ಕಿ ಖರೀದಿಗೆ ಅವಕಾಶ ನಿರಾಕರಿಸುವ ಮೂಲಕ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿರುವ ಕರ್ನಾಟಕ ರಾಜ್ಯ ರೈತ ಸಂಘ, ಈ ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಧಾನ್ಯವನ್ನು ನಮ್ಮ ರೈತರಿಂದಲೇ ರಾಜ್ಯ ಸರ್ಕಾರ ಖರೀದಿಸಬೇಕೆಂದು ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಕ್ಕಿ ದಾಸ್ತಾನು ಇಲ್ಲವಾಗಿದ್ದರೆ ಕೇಂದ್ರ ಸರ್ಕಾರದ ನಿಲುವು ಒಪ್ಪಬಹುದಿತ್ತು. ಆದರೆ ದಾಸ್ತಾನು ಇದ್ದೂ ಕೊಡದಿರುವುದು ಅಕ್ಷಮ್ಯ ಅಪರಾಧ. ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿ ಸೋಲಿಸಿದ್ದಕ್ಕೆ ಈ ರೀತಿ ವರ್ತಿಸುತ್ತಿದ್ದು, ಇದರ ಪರಿಣಾಮವನ್ನು ಬಿಜೆಪಿ ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೀಗ ಅಕ್ಕಿ ಖರೀದಿಗೆ ರಾಜ್ಯ ಸರ್ಕಾರ ಬೇರೆ ರಾಜ್ಯಗಳತ್ತ ಮುಖ ಮಾಡಿದೆ. ಆದರೆ ಇದರ ಬದಲು ರಾಜ್ಯದ ರೈತರಿಂದಲೇ ಧಾನ್ಯ ಖರೀದಿಸಲು ಕ್ರಮ ವಹಿಸಬೇಕು. ಅಕ್ಕಿಯ ಬದಲಿಗೆ ರಾಗಿ ಮತ್ತು ಜೋಳವನ್ನು ಖರೀದಿಸಿ ಆಯಾ ಪ್ರದೇಶದಲ್ಲಿ ಸೇವಿಸುವ ಧಾನ್ಯಗಳನ್ನೇ ವಿತರಣೆ ಮಾಡಬೇಕು ಎಂದರು.

ಸರ್ಕಾರಿ ಅಂಕಿ–ಅಂಶಗಳ ಪ್ರಕಾರ ರಾಜ್ಯದಲ್ಲಿ ಕಳೆದ ವರ್ಷ 89 ಲಕ್ಷ ಕ್ವಿಂಟಾಲ್ ಜೋಳ ಮತ್ತು 136 ಲಕ್ಷ ಕ್ವಿಂಟಾಲ್ ರಾಗಿ ಬೆಳೆಯಲಾಗಿದೆ. ಈ ಎರಡೂ ಧಾನ್ಯ ಸೇರಿದಂತೆ ಒಟ್ಟು 225 ಲಕ್ಷ ಕ್ವಿಂಟಾಲ್ ಪ್ರಮಾಣದ ಧಾನ್ಯ ಉತ್ಪಾದನೆಯು ರಾಜ್ಯದಲ್ಲಿ ಕಳೆದ ವರ್ಷ ಆಗಿದೆ. ಅನ್ನಭಾಗ್ಯ ಯೋಜನೆಯಡಿ ಸರ್ಕಾರ ರಾಗಿ ಮತ್ತು ಜೋಳವನ್ನೂ ನೀಡಬಹುದು. ಇದಕ್ಕಾಗಿ ಒಟ್ಟು 250 ಲಕ್ಷ ಕ್ವಿಂಟಾಲ್ ಅಗತ್ಯವಾಗುತ್ತದೆ. ಸ್ವಾಮಿನಾಥನ್ ವರದಿಯ ಶಿಫಾರಸ್ಸಿನ ಮೇರೆಗೆ ಬೆಂಬಲ ಬೆಲೆಯಲ್ಲಿ 250 ಕ್ವಿಂಟಾಲ್ ಪ್ರಮಾಣದ ಧಾನ್ಯಗಳನ್ನು ಖಂಡಿತವಾಗಲೂ ಖರೀದಿಸುತ್ತೇವೆಂಬ ಖಚಿತ ಭರವಸೆಯನ್ನು ಸರ್ಕಾರ ನೀಡಿದರೆ ರೈತರು ಈ ಪ್ರಮಾಣದ ಜೋಳ ಮತ್ತು ರಾಗಿ ಬೆಳೆದು ಪೂರೈಸಲು ಸಿದ್ಧವಿದ್ದಾರೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಅವರು ಆಲೋಚಿಸಬೇಕು. ಈ ಸಂಬಂಧ ರೈತಸಂಘದಿಂದ ಸರ್ಕಾರಕ್ಕೆ ಪತ್ರ ಸಹ ಬರೆಯಲಾಗುವುದು. ರಾಗಿ ಮತ್ತು ಜೋಳ ಅಲ್ಪಾವಧಿ ಬೆಳೆಯಾಗಿದ್ದು, ಇಡೀ ರಾಜ್ಯದಲ್ಲಿ ಶೇ.87ರಷ್ಟು ಸಣ್ಣ ಹಿಡುವಳಿದಾರರು ಈ ಎರಡು ಧಾನ್ಯ ಬೆಳೆಯುತ್ತಿದ್ದಾರೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸಿದರೆ ಈ ಸಣ್ಣ ಹಿಡುವಳಿ ರೈತರಿಗೂ ಅನುಕೂಲವಾಗಲಿದೆ ಎಂದರು.

ರೈತಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಮಾತ ನಾಡಿ, ಅನ್ನಭಾಗ್ಯ ಯೋಜನೆಯ ಅಕ್ಕಿ ಖರೀದಿ ವಿಚಾರದಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಸಂಘರ್ಷಕ್ಕೆ ಇಳಿಯುವ ಬದಲು ಪರ್ಯಾಯ ಮಾರ್ಗಗಳನ್ನು ನೋಡಲಿ ಎಂದು ತಿಳಿಸಿದರು.

ಈ ಸಂಬಂಧ ನಮಗೆ ಗ್ಯಾರಂಟಿ ಕೊಟ್ಟರೆ ರೈತರು ಸರ್ಕಾರ ಅಪೇಕ್ಷಿಸುವ ಕೃಷಿ ಉತ್ಪನ್ನ ಪೂರೈಸಬಹುದು. ಹಾಗಾಗಿ ಸರ್ಕಾರ ಈ ಸಂಬಂಧ ರೈತರೊಂದಿಗೆ ಚರ್ಚೆ ನಡೆಸಬೇಕು. ಇದರಿಂದ ರಾಜ್ಯದ ಬಂಡವಾಳ ಬೇರೆ ರಾಜ್ಯಕ್ಕೆ ಹರಿದು ಹೋಗುವುದು ತಪ್ಪಲಿದೆ. ದುಬಾರಿಯಾಗುವ ಸಾರಿಗೆ ವೆಚ್ಚವೂ ತಗ್ಗಲಿದೆ ಎಂದು ಹೇಳಿದರು.

ಗ್ರಾಪಂಗೆ ಅವಕಾಶ ಕಲ್ಪಿಸಿ: ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ ಮಾತನಾಡಿ, ಅನ್ನಭಾಗ್ಯ ಯೋಜನೆ ಸಂಬಂಧ ಗ್ರಾಮ ಪಂಚಾಯಿತಿಗಳು ಸ್ಥಳೀಯ ರೈತರಿಂದ ಧಾನ್ಯ ಖರೀದಿಸಿ, ವಿತರಣೆ ಮಾಡಲು ಅವಕಾಶ ಕಲ್ಪಿಸಬೇಕು. ಸ್ಥಳೀಯವಾಗಿ ಯಾವ ಧಾನ್ಯ ಎಷ್ಟು ಅಗತ್ಯವಿದೆ ಎಂಬ ಮಾಹಿತಿ ಪಂಚಾಯಿತಿಗಳಿಗೆ ಇರಲಿದೆ. ಇದರಿಂದ ಅನೇಕ ವಿಧದಲ್ಲಿ ಸರ್ಕಾರಕ್ಕೆ ಆರ್ಥಿಕ ಹೊರೆ ತಪ್ಪಲಿದೆ ಎಂದು ತಿಳಿಸಿದರು.

ರೈತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮುಖಂಡರಾದ ರವಿಕಿರಣ್, ಮರಂಕಯ್ಯ, ಮಂಡಕಳ್ಳಿ ಮಹೇಶ್ ಗೋಷ್ಠಿಯಲ್ಲಿದ್ದರು.

ಬಿಜೆಪಿ ಆಡಳಿತಾವಧಿಯಲ್ಲಿ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ರದ್ದುಗೊಳಿಸಿ, ಹಳೆ ಕಾಯ್ದೆಯ ಮೂಲ ಸ್ವರೂಪ ಉಳಿಸಿಕೊಂಡು ಸುಧಾರಿತ ರೂಪದಲ್ಲಿ ತಿದ್ದುಪಡಿ ತರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಕಾಯ್ದೆಗೆ ಅಂತಿಮ ಸ್ವರೂಪ ನೀಡುವ ಮುನ್ನ ರೈತರೊಂದಿಗೂ ಚರ್ಚೆ ನಡೆಸಬೇಕು. ಹೊಸ ಕಾಯ್ದೆಯಿಂದ ಯಾರಿಗೂ ತೊಂದರೆ ಆಗಬಾರದು.
-ಚಾಮರಸ ಮಾಲೀ ಪಾಟೀಲ್

ಶಿಥಿಲಗೊಂಡಿರುವ ಕಪಿಲಾ ನದಿ ಸೇತುವೆ ದುರಸ್ತಿ ಆರಂಭ

ಇಂದಿನಿಂದ ಎಲ್ಲಾ ರೀತಿಯ ವಾಹನಗಳ ಸಂಚಾರ ಬಂದ್

- ಸ್ಥಳಕ್ಕೆ ಅಧಿಕಾರಿಗಳು ಭೇಟಿ
- ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಒತ್ತಾಯ



ನಂಜನಗೂಡು/ಹುಲ್ಲಹಳ್ಳಿ, ಜೂ.19 – ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಕಪಿಲಾ ನದಿ ಸೇತುವೆಯು ಶಿಥಿಲಗೊಂಡಿದ್ದು, ಲೋಕೋಪಯೋಗಿ ಇಲಾಖೆ ವತಿಯಿಂದ ದುರಸ್ತಿ ಕಾಮಗಾರಿ ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ವಾಹನ ಸಂಚಾರವನ್ನು ನಾಳೆ (ಮಂಗಳವಾರ)ಯಿಂದ ಬಂದ್ ಮಾಡಲಾಗಿದೆ.

ಹುಲ್ಲಹಳ್ಳಿ–ಮೈಸೂರು ಮುಖ್ಯ ರಸ್ತೆಯಲ್ಲಿ ಕಪಿಲಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯನ್ನು ಇಂದಿನಿಂದ ಒಂದು ತಿಂಗಳ ಕಾಲ ಬಂದ್ ಮಾಡಿ, ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಕಪಿಲಾ ನದಿ ಸೇತುವೆಯು ಹಲವು ವರ್ಷಗಳಿಂದ ಶಿಥಿಲಗೊಂಡು, ಹಳ್ಳ ಕೊಳ್ಳಗಳಿಂದ ಕೂಡಿದ್ದು ಸೋಮವಾರದಿಂದ ಲೋಕೋಪಯೋಗಿ ಇಲಾಖೆಯ ವತಿಯಿಂದ ಸೇತುವೆ ದುರಸ್ತಿ ಕಾರ್ಯ ಆರಂಭಿಸಲಾಗಿದೆ.

ಮೈಸೂರಿನಿಂದ ಹುಲ್ಲಹಳ್ಳಿಗೆ ಮತ್ತು ಹುಲ್ಲಹಳ್ಳಿಯಿಂದ ಮೈಸೂರಿಗೆ ಸಂಚರಿಸುವ ಎಲ್ಲಾ ವಾಹನಗಳಿಗೆ ನಿರ್ಬಂಧಿಸಲಾಗಿದೆ. ವಾಹನ ಸವಾರರು ಹುಲ್ಲಹಳ್ಳಿಯಿಂದ ಮೈಸೂರಿಗೆ ತೆರಳಬೇಕಾದರೆ ಪರ್ಯಾಯ ಮಾರ್ಗವಾಗಿ ನಂಜನಗೂಡು, ಕಡಕೊಳ ಮಾರ್ಗವಾಗಿ ತೆರಳಬಹುದಾಗಿದೆ.

ಪ್ರತಿ ನಿತ್ಯ ಹುಲ್ಲಹಳ್ಳಿ ಗ್ರಾಮಕ್ಕೆ ಬರುವ ಅಕ್ಕ ಪಕ್ಕದ ಗ್ರಾಮಗಳ ಸಾವಿರಾರು ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ಇದೇ ಸೇತುವೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಸೇತುವೆ ಕಾಮಗಾರಿ ಮುಗಿಯುವುದು ಎರಡ್ಮೂರು ತಿಂಗಳು ಆಗುತ್ತದೆ ಅಲ್ಲಿಯ ತನಕ ವಿದ್ಯಾರ್ಥಿಗಳು, ಸಾರ್ವಜನಿಕರು ನಂಜನಗೂಡು ಮತ್ತು ಹೊಮ್ಮರಗಳ್ಳಿಯಿಂದ ಸುತ್ತಾಡಿಕೊಂಡು ಬರಲು ಸಾಧ್ಯವಿಲ್ಲ ಆದ್ದರಿಂದ ರಾಜ್ಯ ಸರ್ಕಾರ ಪರ್ಯಾಯ ಮಾರ್ಗವಾಗಿ ಕಪಿಲಾ ನದಿಯಲ್ಲಿ ಬೋಟ್ ಅಥವಾ ತೆಪ್ಪದ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ರಾಂಪುರ ಗ್ರಾಮದ ಚಾಮರಾಜ ಒತ್ತಾಯಿಸಿದ್ದಾರೆ

ಕಾಮಗಾರಿ ನಡೆದಿರುವ ಸ್ಥಳಕ್ಕೆ ಭೇಟಿ ನೀಡಿದ್ದ ಪಿಡಬ್ಲ್ಯೂಡಿ ಸಹಾಯಕ ಕಾರ್ಯಪಾಲಕ ನವೀನ್ ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು. ಪಿಡಬ್ಲ್ಯೂಡಿ ಗುತ್ತಿಗೆದಾರ ಕಾಮಗಾರಿ ನಡೆದಿರುವ ಸ್ಥಳದಲ್ಲಿ ಸ್ಥಳದಲ್ಲಿ ಹಾಜರಿದ್ದಾರೆ.



ನಂಜನಗೂಡು ಪಟ್ಟಣದಲ್ಲಿ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿದು ತಂಪನ್ನೆರೆಯಿತು. ಮಳೆಯಿಂದ ಪುಟ್ಟ ಮಗುವನ್ನು ರಕ್ಷಿಸಲು ಮಹಿಳೆ ಪರದಾಡ ಬೇಕಾಯಿತು.

ಕುರಿಹುಂಡಿಯಲ್ಲಿ ಚಿರತೆಯ ಹಾವಳಿ

ಹುಲ್ಲಹಳ್ಳಿ: ಸಮೀಪದ ಕುರಿಹುಂಡಿ ಗ್ರಾಮದ ಪಟೇಲ್ ಬಸವರಾಜಪ್ಪನವರ ಕಬ್ಬಿನ ಗದ್ದೆಯಲ್ಲಿ ಚಿರತೆಯೊಂದು ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಈ ಸಂಬಂಧ ಅರಣ್ಯ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ದೂರನ್ನು ನೀಡಿದ್ದು, ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಇತ್ತ ಗಮನ ಹರಿಸಿ ಚಿರತೆಯನ್ನು ಸೆರೆ ಹಿಡಿಯಬೇಕೆಂದು ಮನವಿ ಮಾಡಿದ್ದಾರೆ.

ದಮ್ಮನಕಟ್ಟೆ ಸಫಾರಿ ವೀಕ್ಷಿಸಿದ ಯಶ್ ಕುಟುಂಬ

ಆನೆ, ಜಿಂಕೆ ನೋಡಿ ಸಂತಸ, ಕಾಣಿಸದ ಹುಲಿ



ಹೆಚ್.ಡಿ.ಕೋಟೆ, ಜೂ.19– ಕನ್ನಡ ಚಿತ್ರರಂಗದ ಹೆಸರಾಂತ ನಟ ರಾಕಿಂಗ್ ಸ್ಟಾರ್ ಯಶ್ ಮತ್ತು ಪತ್ನಿ, ರಾಧಿಕಾ ಪಂಡಿತ್ ಅವರು, ತಮ್ಮ ಕುಟುಂಬದೊಂದಿಗೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ದಮ್ಮನಕಟ್ಟೆ ಸಫಾರಿ ವೀಕ್ಷಿಸಿದರು.

ತಾಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರಕ್ಕೆ ರಾಕಿಂಗ್ ಸ್ಟಾರ್ ಯಶ್, ಪತ್ನಿ ರಾಧಿಕಾ ಪಂಡಿತ್, ಇಬ್ಬರ ಮಕ್ಕಳು ಹಾಗೂ ಅವರ ತಂದೆ–ತಾಯಿ ಜೊತೆಗೂಡಿ ಸೋಮವಾರ ಸಫಾರಿಗೆ ಆಗಮಿಸಿದ್ದರು. ಈ ವೇಳೆ ಸಫಾರಿಗೆ ಆಗಮಿಸಿದ್ದ ಪ್ರವಾಸಿಗರು ಯಶ್ ಹಾಗೂ ಅವರ ಪತ್ನಿ, ರಾಧಿಕಾ ಪಂಡಿತ್ ಮತ್ತು ಕುಟುಂಬದವರನ್ನು ನೋಡಿ ಪ್ರವಾಸಿಗರು ಖುಷಿಪಟ್ಟರು.

ಸಫಾರಿ ಮುಗಿಸಿ ನಂತರ ಕಬಿನಿ ಹಿನ್ನೀರಿನ ಬೀರಂಬಳ್ಳಿ ಗ್ರಾಮದ ಸಮೀಪ ಇರುವ ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ವಾಸ್ತವ ಹೊಡಿದ್ದಾರೆ ಎಂದು ತಿಳಿದುಬಂದಿದೆ.

ಇಂದು ಸಫಾರಿ ವೇಳೆ ಆನೆ, ಜಿಂಕೆ ಮತ್ತಿತರ ಪ್ರಾಣಿಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಯಶ್ ಕುಟುಂಬ ಖುಷಿಪಟ್ಟಿದೆ. ಸಫಾರಿಯಲ್ಲಿ ಹುಲಿ ಕಾಣಿಸಿಕೊಳ್ಳದೆ ಇರುವ ಕಾರಣ ಮಂಗಳವಾರ ಸಫಾರಿಗೆ ತೆರಳುವ ಸಾಧ್ಯತೆಗಳು ಇವೆ ಎಂದು ತಿಳಿದು ಬಂದಿದ್ದು, ಮಂಗಳವಾರ ಕೂಡ ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ವಾಸ್ತವ ಹೂಡಲಿದ್ದಾರೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಮಹಿಳೆಯರಿಗೆ ದಾರಿ ದೀಪ



ಮೂಗೂರು: ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪನೆ ಮಾಡುವ ಮೂಲಕ ಮಹಿಳೆಯರು ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳಲು ದಾರಿ ದೀಪವಾಗಿದ್ದಾರೆ ಎಂದು ಸಂಸ್ಥೆಯ ತಾಲೂಕು ಯೋಜನಾಧಿಕಾರಿ ಹನುಮಂತಪ್ಪ ತಿಳಿಸಿದರು.

ಮೂಗೂರು ಹೋಬಳಿಯ ತಿ.ನರಸೀಪುರ ತಾಲೂಕಿನ ವಾಟಾಳುಪುರ ಗ್ರಾಮದಲ್ಲಿ ನಡೆದ ಜ್ಞಾನ ವಿಕಾಸ ಕಾರ್ಯಕ್ರಮದಡಿ ಮಾದರಿ ಭಾರತಾಂಬೆ ಮಹಿಳಾ ಸ್ವಸಹಾಯ ಸಂಘದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವೀರೇಂದ್ರ ಹೆಗ್ಗಡೆ ಅವರು ಮಹಿಳೆಯರಲ್ಲಿ ತಮ್ಮದೇ ಆದ ಗುರಿ ಉದ್ದೇಶ ಕನಸುಗಳು ಇರುತ್ತವೆ. ಅದು ಈಡೇರಬೇಕಾದರೆ ಮಹಿಳೆಯರು ಮುಖ್ಯ ವಾಹಿನಿಗೆ ಬರಬೇಕು. ಸಮಾಜದಲ್ಲಿ ಕಲ್ಯಾಣ ಕ್ರಾಂತಿಯ ಕಹಳೆ ಮೊಳಗಿಸಿ ಹಲವು ಕಾರ್ಯಕ್ರಮಗಳನ್ನು ಸ್ತ್ರೀಯರಿಗಾಗಿ ಹಮ್ಮಿಕೊಂಡಿದ್ದಾರೆ. ಕೆರೆ ಅಭಿವೃದ್ಧಿ ವೃದ್ಧರಿಗೆ ಮಾಶಸನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಹಲವು ಸಾಮಾಜಿಕ ಕಾರ್ಯಗಳಿಗೆ ಕೈಜೋಡಿಸಿದ್ದಾರೆ ಎಂದು ನೂತನ ಸಂಘದ ಸದಸ್ಯರಿಗೆ ಪರಿಕರಗಳನ್ನು ವಿತರಿಸಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷೆ ಸುಮತಿ, ಗ್ರಾ.ಪಂ ಸದಸ್ಯ ಮಹದೇವಪ್ಪ, ಶಿವಕುಮಾರ್, ಮಹೇಶ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಕಾವೇರಿ, ಪುಟ್ಟರಾಜ್, ಮೇಲ್ವಿಚಾರಣಾದಿಕಾರಿ ಚೆನ್ನಪ್ಪ, ನಿರ್ಮಲಾ, ಸಂಘದ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

ನನ್ನಿಂದ ಅಧಿಕಾರ, ಹಣ ಪಡೆದವರು ಮೋಸ ಮಾಡಿದರು

ತಮ್ಮ ಸೋಲಿಗೆ ಕಾರಣ ತಿಳಿಸಿದ ಮಾಜಿ ಶಾಸಕ ಮಂಜುನಾಥ್



ಹುಣಸೂರು, ಜೂ.19– ನನ್ನಿಂದ ಹಣ ಪಡೆದು, ಅಧಿಕಾರ ಅನುಭವಿಸಿದವರು ಈ ಚುನಾವಣೆಯಲ್ಲಿ ಮಾರಾಟವಾಗಿದ್ದರಿಂದ ನಾನು ಈ ಬಾರಿ ಸೋಲಬೇಕಾಯಿತು ಎಂದು ಮಾಜಿ ಶಾಸಕ ಎಚ್.ಪಿ ಮಂಜುನಾಥ್ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿರುವ ಸಾಯಿ ಬಾಬಾ ಮಂದಿರದ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಲಕ್ಷಾಂತರ ರೂ. ಹಣವನ್ನು ಖರ್ಚು ಮಾಡಿ ಹಲವಾರು ಮುಖಂಡರನ್ನು ಜಿಲ್ಲಾ ಹಾಗೂ ತಾಲೂಕು ಪಂಚಾಯತಿ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಬಡವರಿಗೂ ಅಧಿಕಾರ ಅನುಭವಿಸುವ ಹಾಗೆ ಮಾಡಿದೆ. ಆದರೆ ಚುನಾವಣೆಯಲ್ಲಿ ಹಣದ ಆಸೆಗೆ ಬಿದ್ದು ನಮಗೆ ದ್ರೋಹ ಮಾಡಿದರು ಎಂದರು.

ನನ್ನ ಅಧಿಕಾರ ಅವಧಿಯಲ್ಲಿ ದೇವಸ್ಥಾನಕ್ಕೆ ಹಣಕೊಟ್ಟು ರಸ್ತೆ ಮಾಡಿಸಿದೆ. ಹಾಗೂ ಸಾಗುವಳಿಗೆ ಹಕ್ಕುಪತ್ರ ಕೊಡಿಸಿರುವುದಕ್ಕೆ ಕೆಲವರು ಅವರ ಅಪ್ಪನ ಮನೆಯಿಂದ ಕೊಡುತ್ತಾನಾ ಎಂದು ಮಾತನಾಡುತ್ತಿದ್ದಾರೆ. ಯಾವ ರಾಜಕಾರಣಿಯು ಅವರ ಮನೆಯಿಂದ ಕೊಡುವುದಿಲ್ಲ, 15 ವರ್ಷದಿಂದ ನನ್ನ ಮನೆಯಿಂದ ಹಣವನ್ನು ತಂದು ಬಡವರಿಗೆ ನೀಡಿದ್ದೇನೆ ಎಂದರು.

ನಾನು ಕಳೆದ 15 ವರ್ಷದಿಂದ ಸಾರ್ವಜನಿಕರಿಗೆ ಬಡವರಿಗಾಗಿ ನನ್ನ ಹುಟ್ಟುಹಬ್ಬ ದಿನದಂದು ಆರೋಗ್ಯ ಶಿಬಿರವನ್ನು ನಡೆಸಿಕೊಂಡು ಬರುತ್ತಿದ್ದೇನೆ. ಆ ದಿನ ನಾನು ಸ್ವತಃ ರೋಗಿಗಳಿಗೆ ರಕ್ತ ಕೊಟ್ಟು ಮಾತಾಡುವವರ ಋಣ ತೀರಿಸಿಕೊಂಡು ಬಂದಿದ್ದೇನೆ. ನಾನು ಈ ತಾಲೂಕಿನ ಮಗ, ನನ್ನ ಕೊನೆ ಉಸಿರಿರುವರೆಗೂ ತಾಲೂಕಿನ ಯಶಸ್ಸಿಗೆ ಶ್ರಮಿಸುತ್ತೇನೆ ಎಂದರು.

ಕಡಬೂರಲ್ಲಿ ಆರೋಗ್ಯ ತಪಾಸಣೆ ಶಿಬಿರ



ಹುಲ್ಲಹಳ್ಳಿ, ಜೂ.19– ಸಮೀಪದ ಕಡಬೂರು ಗ್ರಾಮದಲ್ಲಿ ಧರ್ಮಸ್ಥಳ ಮಹಿಳಾ ವಿಕಾಸ ಕಾರ್ಯಕ್ರಮದಡಿಯಲ್ಲಿ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು.

ಧರ್ಮಸ್ಥಳ ಗ್ರಾಮೋದ್ಯೋಗ ಸಂಸ್ಥೆಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ವಿಜ್ಞಾನ ವಿಕಾಸ ಕಾರ್ಯಕ್ರಮವು ಧರ್ಮಸ್ಥಳ ಸಂಸ್ಥೆಯ ಕನಸಾಗಿದ್ದು, ಈ ಕನಸನ್ನು ನನಸು ಮಾಡಲು ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇದರಲ್ಲಿ ಆರೋಗ್ಯ ತಪಾಸಣೆ ಕಾರ್ಯಕ್ರಮವು ಒಂದು. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ತಿಳಿಸಿದರು. ಡಾ.ಮಂಜುನಾಥ್ ಮಾತನಾಡಿ, ಮಹಿಳೆಯರಲ್ಲಿ ಆಗುವ ಆರೋಗ್ಯ ಬದಲಾವಣೆಯ ಬಗ್ಗೆ ಮಾಹಿತಿ ನೀಡಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ತಿಳಿಸಿದರು. ಯೋಜನಾಧಿಕಾರಿ ಗಣೇಶ್ ನಾಯಕ್, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಬೃಂದಶ್ರೀ, ವಲಯ ಮೇಲ್ವಿಚಾರಕರಾದ ಪೂರ್ಣಿಮಾ, ಒಕ್ಕೂಟದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಹೊಸೂರು ಡೈರಿ ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ



ಚುಂಚನಕಟ್ಟೆ, ಜೂ.19– ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಧ್ಯಕ್ಷರಾಗಿ ಲಲಿತಮ್ಮ, ಉಪಾಧ್ಯಕ್ಷರಾಗಿ ಭಾರತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ 2 ತಿಂಗಳಿನಿಂದಲೂ ಚುನಾವಣಾ ಸಭೆಗಳಿಗೆ ಗೈರಾಗುವ ಮೂಲಕ ಚುನಾವಣಾ ಸಭೆ ರದ್ದಾಗುತ್ತಾ ಪಕ್ಷ ರಾಜಕೀಯಕ್ಕೆ ತಿರುಗಿದ್ದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಇಂದು ದಿನಾಂಕ ನಿಗದಿಯಾಗಿತ್ತು. ಇಂದಿನ ಸಭೆಯೂ ರದ್ದಾಗಿದ್ದರೆ ಸಂಘ ಸೂಪರ್‌ಶೀಡ್ ಆಗುವ ಆತಂಕದ ಹಿನ್ನೆಲೆಯಲ್ಲಿ ಈ ಆಯ್ಕೆ ಮಹತ್ವ ಪಡೆದಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಹೆಚ್.ಜೆ ರಮೇಶ್ ಹಾಗೂ ನಾಗರಾಜ ಅವರು ನಾಮಪತ್ರ ವಾಪಸ್ ಪಡೆದ ಕಾರಣ ಲಲಿತಮ್ಮ ಹಾಗೂ ಭಾರತಿ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಗಿರೀಶ್ ಘೋಷಿಸಿದರು.

ಆಯ್ಕೆ ಪ್ರಕಟವಾಗುತ್ತಿದ್ದಂತೆ ಎಪಿಎಂಸಿ ಮಾಜಿ ಅಧ್ಯಕ್ಷ ರಾಜೇಗೌಡ, ಗ್ರಾಪಂ ಮಾಜಿ ಸದಸ್ಯ ಶಿವಣ್ಣ, ಗುತ್ತಿಗೆದಾರರಾದ ಕೀರ್ತಿ, ದರ್ಶನ್, ದೇಸೇಗೌಡ ಅವರು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.


ಸಭೆಯಲ್ಲಿ ಸಂಘದ ನಿರ್ದೇಶಕರಾದ ಸ್ವಾಮಿ, ರಂಗೇಗೌಡ, ಬುದ್ದಿಸಾಗರ, ಆಶಾ, ಅಕ್ಕಮ್ಮ, ಪರಶುರಾಮ್, ಯದುಕುಮಾರ, ನಾಮನಿರ್ದೇಶಿತ ಸದಸ್ಯ ಪ್ರಸನ್ನ, ಸಂಘದ ಕಾರ್ಯದರ್ಶಿ ಶಂಕರ್, ಹಾಲು ಪರೀಕ್ಷಕ ಮಹದೇವ್ ಹಾಜರಿದ್ದರು.



ಲಯನ್ಸ್ ಕ್ಲಬ್, ಸರಗೂರು ಮತ್ತು ತಾಲೂಕು ಆರೋಗ್ಯಾಧಿಕಾರಿಗಳ ಇಲಾಖೆ ವತಿಯಿಂದ ಸರಗೂರು ಲಯನ್ಸ್ ಶಾಲೆಯಲ್ಲಿ, ಶಾಲಾ ಮಕ್ಕಳಿಗೆ ಏರ್ಪಡಿಸಿದ್ದ ಉಚಿತ ಬ್ಲಡ್ ಗ್ರೂಪಿಂಗ್ ಪರೀಕ್ಷೆ ಕಾರ್ಯಕ್ರಮದಲ್ಲಿ 300 ಮಕ್ಕಳಿಗೆ ಬ್ಲಡ್ ಗ್ರೂಪಿಂಗ್ ಪರೀಕ್ಷೆ ನಡೆಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಲಯನ್ಸ್ ಕ್ಲಬ್ ಟ್ರಸ್ಟಿ ಬ್ರಹ್ಮದೇವಯ್ಯ, ಪಟ್ಟಣ ಪಂಚಾಯಿತಿ ಸದಸ್ಯ ಶ್ರೀನಿವಾಸ್, ಲಯನ್ಸ ಪ್ರತಾಪ್ ಅವರುಗಳು ಭಾಗವಹಿಸಿದ್ದರು.

ಸಚಿವ ಡಾ.ಮಹದೇವಪ್ಪ ದಲಿತ ಸಿಎಂಗೆ ಅರ್ಹರು

ಸನ್ಮಾನ ಸಮಾರಂಭದಲ್ಲಿ ಪುರಸಭಾ ಸದಸ್ಯ ಪ್ರತಿಪಾದನೆ



ತಿ.ನರಸೀಪುರ, ಜೂ.19– ನಾಲ್ಕು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಸಚ್ಚಾರಿತ್ರ್ಯ ರಾಜಕಾರಣ ಮಾಡಿರುವ ಸಚಿವ ಮಹದೇವಪ್ಪ ಅವರು ದಲಿತ ಸಿಎಂಗೂ ಅರ್ಹರಾಗಿದ್ದಾರೆ ಎಂದು ಪುರಸಭೆ ಸದಸ್ಯ ಸಿ.ಪ್ರಕಾಶ್ ಪ್ರತಿಪಾದಿಸಿದ್ದಾರೆ.

ಪಟ್ಟಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಮಾಜಿಕ ಚಳವಳಿ, ರೈತಪರ ಹೋರಾಟದ ಹಿನ್ನೆಲೆಯಿರುವ ಮಹದೇವಪ್ಪನವರು ಬದ್ಧತೆಯ ರಾಜಕಾರಣಿ ಆಗಿರುವುದರಿಂದ ದಲಿತರಿಗೆ ಸಿಎಂ ನೀಡುವುದಾದರೆ ಹೆಚ್‌ಸಿಎಂ ಅವರನ್ನೂ ಹೈಕಮಾಂಡ್ ಪರಿಗಣಿಸಬೇಕು ಎಂದರು. ರಾಜಕೀಯ ಅಧಿಕಾರ ಯೋಗ್ಯರು ಹಾಗೂ ವಿವೇಚನೆವುಳ್ಳ ಸಮರ್ಥರ ಕೈಗೆ ನೀಡಬೇಕು ಎಂದು ಚುನಾವಣೆ ಸಂದರ್ಭದಲ್ಲೇ ಮಹದೇವಪ್ಪ ಅವರು ಹೇಳುತ್ತಿದ್ದರು. ಜನರು ಯೋಗ್ಯರನ್ನು ಆಯ್ಕೆ ಮಾಡಿದ್ದಾರೆ. ಪಕ್ಷದ ವರಿಷ್ಠರು ಸಮರ್ಥರ ಕೈಗೆ ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿಯನ್ನು ನೀಡಿದ್ದಾರೆ ಎಂದು ಬಣ್ಣಿಸಿದರು.


ಸಾಮಾಜಿಕ ಅಸಮಾನತೆಯನ್ನು ಸರಿಪಡಿಸಿ, ಸಂವಿಧಾನ ಆಶಯಗಳನ್ನು ಯಥಾವತ್ತಾಗಿ ಜಾರಿಗೆ ತರುವಂತಹ ಸಮಾಜ ಕಲ್ಯಾಣ ಇಲಾಖೆಯನ್ನು ಸಚಿವ ಡಾ. ಮಹದೇವಪ್ಪ ಅವರು ಸಮರ್ಥವಾಗಿ ನಿರ್ವಹಣೆ ಮಾಡಲಿದ್ದಾರೆ ಎಂದರು.

ಅಧಿಕಾರವಿರಲಿ, ಇಲ್ಲದಿರಲಿ ಜನಪರ ನಿಲುವು ಹೊಂದಿರುವ ಮಹದೇವಪ್ಪ ಅವರು ಆರೋಗ್ಯ ಹಾಗೂ ಲೋಕೋಪಯೋಗಿ ಸಚಿವರಾಗಿ ಆ ಎರಡು ಇಲಾಖೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದ್ದಾರೆ. ಆರ್‌ಡಿಪಿ ಸಚಿವರಾಗಿ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯನ್ನು ಬಲಪಡಿಸುವಷ್ಟರಲ್ಲಿ ಅಧಿಕಾರ ಕೈ ತಪ್ಪಿತ್ತು. ಈಗಿನ ಸರ್ಕಾರದಲ್ಲಿಯೂ ಸಮಾಜ ಕಲ್ಯಾಣ ಇಲಾಖೆಯನ್ನು ಜನಪರವಾಗಿ ಮತ್ತಷ್ಟು ಕ್ರಿಯಾಶೀಲಗೊಳಿಸಲಿದ್ದಾರೆ. ಮುನ್ನುಡಿ ಎಂಬಂತೆ ಸಂವಿಧಾನ ಪೀಠಿಕೆ ವಾಚನ, ವಿದ್ಯಾರ್ಥಿ ವೇತನ ನೆಪದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನಿರ್ಬಂಧಿಸದಂತೆ ಸೂಚಿಸಿರುವುದು ಸಾಕ್ಷಿಯಾಗಿದೆ ಎಂದು ಪ್ರಕಾಶ್ ತಿಳಿಸಿದರು.

ನಿವೃತ್ತ ಮುಖ್ಯ ಇಂಜಿನಿಯರ್ ರವಿಕುಮಾರ್, ದಸಂಸ ಜಿಲ್ಲಾ ಸಂಚಾಲಕ ಶಿವಕುಮಾರ್, ಸೋಮನಾಥಪುರ ಗ್ರಾಪಂ ಅಧ್ಯಕ್ಷ ಅರ್ಚನ ಸಂದೀಪ್, ಗ್ರಾಪಂ ಮಾಜಿ ಸದಸ್ಯರಾದ ಹೇಮಂತ್ ಕುಮಾರ್, ಉಕ್ಕಲಗೆರೆ ಎಂ.ರಾಜು, ಮಾಜಿ ಉಪಾಧ್ಯಕ್ಷ ಸಿ.ನಂಜುಂಡಯ್ಯ, ಮುಖಂಡರಾದ ಬನ್ನಹಳ್ಳಿಹುಂಡಿ ಉಮೇಶ್, ಹಿರಿಯೂರು ಸೋಮಣ್ಣ, ಶಾಂತಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

ಬರಿದಾಗುತ್ತಿರುವ ಕಬಿನಿ ಜಲಾಶಯ

ರೈತರು, ಜನ–ಜಾನುವಾರು, ವನ್ಯಜೀವಿಗಳಿಗೂ ನೀರಿನ ಸಮಸ್ಯೆ ಸಾಧ್ಯತೆ



ಹೆಚ್.ಡಿ.ಕೋಟೆ, ಜೂ.19 (ಮಂಜು)– ಮಳೆಗಾಲದಲ್ಲಿ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಭರ್ತಿಯಾಗುವ ಜಲಾಶಯ ಎಂದೇ ಪ್ರಸಿದ್ಧಿಯಾಗಿರುವ ಕಬಿನಿ ಜಲಾಶಯ ದಿನದಿಂದ ದಿನಕ್ಕೆ ಬರಿದಾಗುತ್ತಿದೆ. ಈ ಬಾರಿ ಜೂನ್ ತಿಂಗಳು ಕಳೆಯುತ್ತ ಬಂದರೂ ಮುಂಗಾರು ಮಳೆ ಬಾರದ ಕಾರಣ ಜಲಾಶಯದ ನೀರಿನ ಮಟ್ಟ ಇಳಿಮುಖವಾಗುತ್ತಿದೆ.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯ ಇಡೀ ರಾಜ್ಯದಲ್ಲಿ ಮುಂಗಾರು ಮಳೆ ಆರಂಭಗೊಳ್ಳುತ್ತಿದ್ದಂತೆಯೇ ಮೊದಲು ಭರ್ತಿಯಾಗುತ್ತಿತ್ತು. ನೀರಿಗಾಗಿ ಪ್ರತಿ ಬಾರಿ ಕ್ಯಾತೆ ತೆಗೆಯುತ್ತಿದ್ದ ತಮಿಳುನಾಡಿಗೆ ಸಾಕಷ್ಟು ಪ್ರಮಾಣದ ನೀರು ಜಲಾಶಯದಿಂದ ಹರಿಸಲಾಗುತ್ತಿತ್ತು. ಆದರೆ ಈ ಬಾರಿ ಜಲಾಶಯದ ಮಟ್ಟ ಕುಸಿತಗೊಂಡಿರುವುದರಿಂದ ನೀರಿಗೆ ಹಾಹಾಕಾರ ಉಂಟಾಗುವ ಸಾಧ್ಯತೆಗಳಿವೆ.

ಕಳೆದ ವರ್ಷ ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ 2261 ಅಡಿಗಳಿದ್ದು, ಹೊರಹರಿವು 1000 ಕ್ಯೂಸೆಕ್ಸ್ ನೀರನ್ನು ಕಬಿನಿ ಶುಭಾಷ್ ಪವರ್ ಪ್ರಾಜೆಕ್ಟ್ ಮೂಲಕ ನದಿಗೆ ಬಿಡಲಾಗುತ್ತಿತ್ತು. ಆದ್ದರಿಂದ ಕಬಿನಿ ಸುಭಾಷ್ ಪವರ್ ಪ್ರಾಜೆಕ್ಟ್‌ನಲ್ಲಿ 20 ಮೆಗಾ ವ್ಯಾಟ್ ವಿದ್ಯುತ್ ತಯಾರಿಕೆ ಆಗುತ್ತಿತ್ತು. ಆದರೆ ಈ ಬಾರಿ ಜಲಾಶಯದ ಮಟ್ಟ 2250 ಅಡಿಗಳಿಗೆ ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಜಲಾಶಯದಿಂದ ಹೊರಹರಿವು ನೀರನ್ನು ಸ್ಥಗಿತಗೊಳಿಸಲಾಗಿರುವ ಕಾರಣ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಲ್ಲಿ ಈ ಬಾರಿ ವಿದ್ಯುತ್ ತಯಾರಿಕೆ ಸ್ಥಗಿತಗೊಂಡಿದೆ ಎನ್ನಲಾಗಿದೆ.

ಕೇರಳದ ವೈನಾಡಿನಲ್ಲಿ ಮಳೆ ಶುರುವಾಗುತ್ತಿದ್ದಂತೆ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಳವಾಗುತ್ತಿತ್ತು. ಆದರೆ ಈ ಬಾರಿ ಕೇರಳ ವೈನಾಡಿನಲ್ಲಿ ಮುಂಗಾರು ಮಳೆ ಬಾರದ ಕಾರಣ ಜಲಾಶಯದ ಮಟ್ಟ 2250 ಅಡಿಗೆ ಇಳಿಮುಖವಾಗಿದೆ. ಕಳೆದ ವರ್ಷ ಜಲಾಶಯದ ಮಟ್ಟ 2261 ಅಡಿಗಳಿತ್ತು ಇದರಿಂದ ಕುಡಿಯುವ ನೀರಿಗೆ, ರೈತರಿಗೆ, ಜನ–ಜಾನುವಾರು ಹಾಗೂ ಕಬಿನಿ ಹಿನ್ನೀರಿನ ಅರಣ್ಯ ವ್ಯಾಪ್ತಿಯ ವನ್ಯ ಜೀವಿಗಳಿಗೂ ಕೂಡ ನೀರಿಗಾಗಿ ಹಾಹಾಕಾರ ಉಂಟಾಗಲಿದೆ.

ಇದರೊಂದಿಗೆ ಮೈಸೂರು ಜಿಲ್ಲೆ ಸೇರಿದಂತೆ ನಾನಾ ಭಾಗಗಳಿಗೆ ಕಬಿನಿ ಜಲಾಶಯದಿಂದ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು, ಇದೀಗ ಜಲಾಶಯದ ನೀರಿನ ಮಟ್ಟ ಕುಸಿತಗೊಂಡಿರುವ ಕಾರಣ ನೀರಿಗೆ ಹಾಹಾಕಾರ ಉಂಟಾಗಿದೆ. ಕೆಲವೆಡೆ ದಿನವಿಡೀ ಬಿಡುತ್ತಿದ್ದ ನೀರನ್ನು ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗುತ್ತಿದೆ. ಶೀಘ್ರದಲ್ಲಿ ಮುಂಗಾರು ಆರಂಭವಾಗದಿದ್ದರೆ ಪರಿಸ್ಥಿತಿ ಬಿಗಾಡಯಿಸುವ ಸಾಧ್ಯತೆ ಇದೆ.

ಕಳೆದ ವರ್ಷ ನೀರಿನ ಮಟ್ಟ

ಗರಿಷ್ಠ ಮಟ್ಟ 2284 ಅಡಿ
ಅಂದಿನ ಮಟ್ಟ 2261 ಅಡಿ
ಒಳಹರಿವು 1141 ಕ್ಯೂಸೆಕ್ಸ್
ಹೊರಹರಿವು 1000 ಕ್ಯೂಸೆಕ್ಸ್

ಪ್ರಸಕ್ತ ಜಲಾಶಯ ನೀರಿನ ಮಟ್ಟ

ಗರಿಷ್ಠ ಮಟ್ಟ 2284 ಅಡಿ
ಇಂದಿನ ಮಟ್ಟ 2250 ಅಡಿ
ಒಳಹರಿವು 457 ಕ್ಯೂಸೆಕ್ಸ್
ಹೊರಹರಿವು 000.

ಅಪಘಾತ ನೆಪದಲ್ಲಿ ಹಿರಿಯ ನಾಗರಿಕರ ಸುಲಿಗೆ

● ಮೈಸೂರಲ್ಲಿ ಬೈಕ್ ಸವಾರರಿಂದ ಕೃತ್ಯ ಬಯಲಿಗೆ ● ಕಾರು ಚಾಲನೆ ಮಾಡುವ ಹಿರಿಯರೇ ಇವರ ಟಾರ್ಗೆಟ್



ಮೈಸೂರು ಜೂ.19(ಆರ್‌ಕೆ)–ಅಪಘಾತದ ನೆಪದಲ್ಲಿ ವಯಸ್ಸಾದ ಕಾರು ಚಾಲಕರ ಸುಲಿಗೆ ಮಾಡುವ ಬೈಕ್ ಸವಾರರ ಸುಲಿಗೆ ದಂಧೆ ಮೈಸೂರಲ್ಲಿ ನಡೆಯುತ್ತಿದೆ. ಕಾರಿನಲ್ಲಿ ಹೋಗುತ್ತಿರುವವರನ್ನು ತಡೆದು ನಿಲ್ಲಿಸಿ, ನೀವು ನಮ್ಮ ಬೈಕ್‌ಗೆ ಡಿಕ್ಕಿ ಹೊಡೆದು ಹೋಗುತ್ತಿದ್ದೀರಿ, ಹಿಂಬದಿ ಸವಾರನಿಗೆ ಗಾಯವಾಗಿದೆ. ಚಿಕಿತ್ಸೆಗೆ ಹಣ ಕೊಡಿ ಎಂದು ಧಮ್ಕಿ ಹಾಕಿ, ಹಣ ಪೀಕುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಇದುವರೆಗೆ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಇಂತಹ ದಂಧೆ ಹೆಚ್ಚಾಗಿ ನಡೆಯುತ್ತಿದ್ದವು.

ಕಳೆದ 15 ದಿನಗಳಿಂದೀಚೆಗೆ ಮೈಸೂರಲ್ಲಿ ಮೂರು ಪ್ರಕರಣಗಳು ಬಯಲಾಗಿದ್ದು, ಬೈಕ್ ಸವಾರರು ಹಿರಿಯ ನಾಗರಿಕರನ್ನೇ ತಮ್ಮ ವಸೂಲಿ ದಂಧೆಗೆ ಟಾರ್ಗೆಟ್ ಮಾಡಿದ್ದಾರೆ. ಕುವೆಂಪು ನಗರದ 'ಇ' ಎಂಡ್ 'ಎಫ್' ಬ್ಲಾಕ್ ಅಗ್ನಿಹಂಸ ರಸ್ತೆ ನಿವಾಸಿಯಾದ ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಪಿ. ಮಹದೇವಪ್ಪ ಅವರು, ಮೇ 26ರಂದು ತಮ್ಮ ಕಾರಿನಲ್ಲಿ ವಿಜಯನಗರ 2ನೇ ಹಂತದ ಬ್ಯಾಂಕ್‌ಗೆ ಹೋಗುತ್ತಿದ್ದರು. ವಿಶ್ವ ಮಾನವ ಜೋಡಿ ರಸ್ತೆಯಿಂದ ಕುಕ್ಕರಹಳ್ಳಿ ಮಾರ್ಗವಾಗಿ ಮಾನಸ ಗಂಗೋತ್ರಿಯ ಮೈಸೂರು ವಿಶ್ವವಿದ್ಯಾನಿಲಯದ ಗೆಸ್ಟ್ ಹೌಸ್ ಬಳಿ ಹೋಗುವಾಗ ಶಬ್ಧ ಕೇಳಿಸಿದೆ. ಆದರೂ ಮಹದೇವಪ್ಪ ಅವರು ನಿಧಾನವಾಗಿಯೇ ಕಾರು ಚಾಲನೆ ಮಾಡಿಕೊಂಡು ಸಾಗಿದ್ದಾರೆ. ಪಡುವಾರಹಳ್ಳಿ ಸಿಗ್ನಲ್ ಲೈಟ್ ಸರ್ಕಲ್ ಸಮೀಪಿಸುತ್ತಿದ್ದಂತೆಯೇ ಹಿಂದಿನಿಂದ ಬೈಕ್‌ನಲ್ಲಿ ಬಂದ ಇಬ್ಬರು ಯುವಕರ ಪೈಕಿ ಒಬ್ಬ ಕಾರು ತಡೆದು ನಿಲ್ಲಿಸಿದ್ದಾನೆ. ಮತ್ತೊರ್ವ ರಸ್ತೆ ಬದಿ ಕುಳಿತ. ಬಂದವನೇ 'ಏನ್ ಸಾರ್, ಬೈಕ್‌ಗೆ ಡಿಕ್ಕಿ ಹೊಡೆದು ನಿಲ್ಲಿಸದೇ ಹೋಗುತ್ತಿದ್ದೀರಲ್ಲಾ' ಎಂದಿದ್ದಾನೆ.

ಆ ವೇಳೆ ಏನಾಗುತ್ತಿದೆ ಎಂಬುದು ತಿಳಿಯದ ಮಹದೇವಪ್ಪ ಗಾಬರಿಯಾದರು. ಮುಂದುವರೆದು ಆತ ಕಾರಿನಲ್ಲಿ ನೀರು ಇದ್ದರೆ ಕೊಡಿ ಎಂದ. ನೀರು ಇಲ್ಲದಿದ್ದರಿಂದ ಪಕ್ಕದಲ್ಲೇ ಇದ್ದ ಪಾನಿಪೂರಿ ಅಂಗಡಿಯವನಿಂದ ಬಾಟಲಿಯಲ್ಲಿ ನೀರು ಪಡೆದು ಕುಳಿತಿದ್ದ ಮತ್ತೊರ್ವನ ಕಾಲಿಗೆ ಸುರಿದು, ಅವನಿಗೆ ಗಾಯವಾಗಿದೆ, ಏನು ಮಾಡೋದು ಹೇಳಿ ಎಂದ.

ನಾನು ಡಿಕ್ಕಿ ಹೊಡೆದಿಲ್ಲ, ನನಗೆ ಏನೂ ಗೊತ್ತಿಲ್ಲಪ್ಪಾ ಎಂದು ಹೇಳಿದ ಮಹದೇವಪ್ಪ ಅವರಿಗೆ, ಅವನನ್ನು ಕಾರಲ್ಲಿ ಕೂರಿಸಿಕೊಳ್ಳಿ, ಆಸ್ಪತ್ರೆಗೆ ಹೋಗೋಣ ಎಂದು ಹೇಳಿದ ಆತ ಕಾರಲ್ಲಿ ಕೂರಿಸಿ ಬೈಕ್‌ನಲ್ಲಿ ಹಿಂಬಾಲಿಸಿದ್ದಾನೆ.

ಮುಂದೆ ಹುಣಸೂರು ರಸ್ತೆಯಲ್ಲಿ ಸಾಗಿ ಸೆಂಟ್ ಜೋಸೆಫ್ ಶಾಲೆ ಬಳಿ ಟೆಂಪಲ್ ರಸ್ತೆಗೆ ತಿರುಗುತ್ತಿದ್ದಂತೆಯೇ ಮತ್ತೆ ಕಾರು ನಿಲ್ಲಿಸುವಂತೆ ಹೇಳಿ, ನಿಲ್ಲಿಸಿದ ಯುವಕ, ನಾವೇ ಟ್ರೀಟ್‌ಮೆಂಟ್ ಮಾಡಿಸಿಕೊಳ್ಳುತ್ತೇವೆ. ಅವನು ಕೂಲಿ ಕೆಲಸ ಮಾಡುವವನು. ನೀವು ಆಕ್ಸಿಡೆಂಟ್ ಮಾಡಿ ಗಾಯಗೊಳಿಸಿದ್ದೀರಿ, ಅವನ ಜೀವನ ಹೇಗೆ ನಡೀಬೇಕು ಎಂದು ಪ್ರಶ್ನಿಸಿದ್ದಾನೆ.

ಕಡೆಗೆ ನಾನೇನು ಮಾಡಲಿ, ಚಿಕಿತ್ಸೆ ಕೊಡಿಸುತ್ತೇನೆ ಎಂದು ಹೇಳಿದರೂ, ಬೇಡ, ನೀವೂ ಅರ್ಜೆಂಟ್‌ನಲ್ಲಿದ್ದೀರಿ, ಅದೇನ್ ಕೊಡ್ತೀರೋ ಕೊಡಿ ಎಂದ ಯುವಕ, 30,000 ರೂ.ಗಳಿಗೆ ಬೇಡಿಕೆ ಇಟ್ಟಿದ್ದಾನೆ. ನನ್ನ ಹತ್ತಿರ ಹಣ ಇಲ್ಲ. ನಾನೇಕೆ ಕೊಡಲಿ ಎಂದ ಮಹದೇವಪ್ಪ, 1,400 ರೂ. ಮಾತ್ರ ಪರ್ಸ್‌ನಲ್ಲಿದೆ ಎಂದಿದ್ದಾರೆ. ಕಡೆಗೆ 5,000 ರೂ. ಆದರೂ ಕೊಡಿ ಎಂದು ದುಂಬಾಲು ಬಿದ್ದ ಕಾರಣ, ಬೇಕಾದರೆ ಗೂಗಲ್ – ಪೇ, ಫೋನ್–ಪೇ ಮಾಡುತ್ತೇನೆಂದರೂ, ನಮ್ಮ ಫೋನ್‌ನಲ್ಲಿ ಆ ಸೌಲಭ್ಯವಿಲ್ಲ ಎಂದಿದ್ದಾರೆ. ಕಡೆಗೆ 1,400 ರೂ. ಹಣವನ್ನೇ ಪಡೆದುಕೊಂಡು ಹೋದರು ಎಂದು ಮಹದೇವಪ್ಪ ತಿಳಿಸಿದ್ದಾರೆ.

ಅದೇ ರೀತಿ ರಾಮಕೃಷ್ಣನಗರ, ಕುವೆಂಪು ನಗರ ಪೊಲೀಸ್ ಠಾಣೆ ರಸ್ತೆಯ ಚರ್ಚ್ ಎದುರಿನ ನಿವಾಸಿಯಾದ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ರಾಮಯ್ಯ ಅವರನ್ನು ಮೂರು ದಿನಗಳ ಹಿಂದೆ ಕುವೆಂಪು ನಗರದ ವಿಜಯ ಬ್ಯಾಂಕ್ ಸರ್ಕಲ್ ಸಮೀಪ ಕಾರು ತಡೆದು ಆಕ್ಸಿಡೆಂಟ್ ಮಾಡಿದ್ದೀರಿ ಎಂದು ಧಮ್ಕಿ ಹಾಕಿ 500 ರೂ. ಹಣ ಕಿತ್ತಿರುವ ಬೈಕ್ ಸವಾರರು, ವಾರದ ಹಿಂದೆ ಕುವೆಂಪುನಗರ ನವಿಲು ರಸ್ತೆ ನಿವಾಸಿಯಾದ ನಿವೃತ್ತ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕ ಎ.ಚಂದ್ರಪ್ಪ ಅವರಿಗೂ ಇದೇ ಅನುಭವವಾಗಿದೆ. 60 ರಿಂದ 70 ವರ್ಷದ ಹಿರಿಯ ನಾಗರಿಕರನ್ನೇ ಟಾರ್ಗೆಟ್ ಮಾಡಿ, ಅಪಘಾತ (ಹಿಟ್ ಅಂಡ್ ರನ್) ನೆಪ ಹೇಳಿ ಬೆದರಿಸಿ ಹಣ ಕೀಳುತ್ತಿರುವ ತಂಡವೊಂದು ಮೈಸೂರಲ್ಲಿ ಕಾರ್ಯಾಚರಣೆ ಮಾಡುತ್ತಿದೆ ಎಂದು ಮಹದೇವಪ್ಪ ತಿಳಿಸಿದ್ದಾರೆ.

ಗ್ಯಾರಂಟಿಗಳಿಗೆ ಹಣ ಹೊಂದಿಸಲು ಆಸ್ತಿ ಮಾರ್ಗಸೂಚಿ ದರ ಹೆಚ್ಚಳಕ್ಕೆ ಸರ್ಕಾರ ನಿರ್ಧಾರ

● ಕಂದಾಯ ಸಚಿವ ಕೃಷ್ಣಭೈರೇಗೌಡ ಮಾಹಿತಿ ● ರೈತರು, ಆಸ್ತಿ ಮಾರಾಟಗಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ನಿರ್ಧಾರವಂತೆ ● ಸಬ್ ರಿಜಿಸ್ಟ್ರಾರ್ ಕಚೇರಿ ಭ್ರಷ್ಟಾಚಾರ ತಡೆಗೆ ಕಾವೇರಿ–2 ತಂತ್ರಾಂಶ ಜಾರಿ



ಬೆಂಗಳೂರು, ಜೂ.19(ಕೆಎಂಶಿ)– ರಾಜ್ಯದ ಜನತೆಗೆ ನೀಡಿರುವ ಐದು ಗ್ಯಾರಂಟಿ ಯೋಜನೆಗೆ ಅಗತ್ಯವಿರುವ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಸರ್ಕಾರ ಇದೀಗ ಆಸ್ತಿ ಮಾರ್ಗಸೂಚಿ ದರ ಹೆಚ್ಚಳಕ್ಕೆ ಮುಂದಾಗಿದೆ.

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಜುಲೈ 7ರಂದು ಮುಂಗಡಪತ್ರ ಮಂಡಿಸಿ ಯೋಜನಾ ಗಾತ್ರ ಹೆಚ್ಚಿಸಲಿರುವ ಬೆನ್ನಲ್ಲೇ ಕಂದಾಯ ಇಲಾಖೆ ಆಸ್ತಿ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಲು ಹೊರಟಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಂದಾಯ ಸಚಿವ ಕೃಷ್ಣಭೈರೇಗೌಡ, ಆಸ್ತಿ ಮೌಲ್ಯ ದರ ಹೆಚ್ಚಿಸಲು ಸಿದ್ಧತೆ ನಡೆಸಿರುವುದಾಗಿ ತಿಳಿಸಿದರು.

ಪ್ರತಿ ಎರಡು ವರ್ಷಕ್ಕೊಮ್ಮೆ ಆಸ್ತಿಗಳ ಮಾರ್ಗಸೂಚಿ ಪರಿಷ್ಕರಣೆ ಮಾಡಬೇಕು. ಆದರೆ, ಕಳೆದ ನಾಲ್ಕೂವರೆ ವರ್ಷದಿಂದ ಇಲಾಖೆ ಇದರ ಗೋಜಿಗೆ ಹೋಗಿಲ್ಲ.

ಮಾರ್ಗಸೂಚಿ ಪರಿಷ್ಕರಣೆ ಮಾಡದಿರುವುದರಿಂದ ದಳ್ಳಾಳಿ ಮತ್ತು ಭೂದಾಹಿಗಳಿಗೆ ಅನುಕೂಲವಾಗಲಿದೆ. ಇದೇ ಕಾಲಕ್ಕೆ ರೈತರು ಹಾಗೂ ಆಸ್ತಿ ಮಾರಾಟಗಾರರಿಗೆ ತಮಗೆ ಆಸ್ತಿಗೆ ದೊರೆಯಬೇಕಾದ ಮೌಲ್ಯ ದಕ್ಕುವುದಿಲ್ಲ. ಈ ಕಾರಣಕ್ಕಾಗಿ ಮಾರ್ಗಸೂಚಿ ಪರಿಷ್ಕರಣೆ ಮಾಡಲಾಗುವುದು. ಇದೇ ಕಾಲಕ್ಕೆ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಭ್ರಷ್ಟಾಚಾರ ಮತ್ತು ಆಸ್ತಿ ಮೌಲ್ಯಗಳ ಬಗ್ಗೆ ಇರುವ ಲೋಪ ಸರಿಪಡಿಸಲು ಕಾವೇರಿ–2 ತಂತ್ರಾಂಶಗಳನ್ನು ರಾಜ್ಯದ ಎಲ್ಲಾ ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ವಾರಾಂತ್ಯದೊಳಗೆ ಜಾರಿಗೆ ತರಲಾಗುವುದು. ಆನ್‌ಲೈನ್ ಮೂಲಕ ಈ ತಂತ್ರಾಂಶದಲ್ಲಿ ದಾಖಲೆ ಸಲ್ಲಿಸಿದರೆ, ಉಪನೋಂದಾಣಾಧಿಕಾರಿ ಪರಿಶೀಲಿಸಿ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸುತ್ತಾರೆ. ಆನಂತರ ನೋಂದಣಿ ಮಾಡುವವರು ಭಾವಚಿತ್ರ ಹಾಗೂ ಹೆಬ್ಬೆಟ್ಟಿನ ಗುರುತು ಸೆರೆಹಿಡಿಯುವ ದಿನಾಂಕ ಹಾಗೂ ಸಮಯ ನಿಗದಿ ಮಾಡಿಕೊಳ್ಳಬಹುದು.

ಕೇವಲ ಹತ್ತು ನಿಮಿಷದಲ್ಲಿ ನೋಂದಣಿ ಮುಗಿಯಲಿದೆ. ಈ ತಂತ್ರಾಂಶ ಏಪ್ರಿಲ್‌ನಿಂದ ಜಾರಿಯಾಗಲ್ಲಿದ್ದು, ಸರಾಸರಿ ನೋಂದಣಿಗಳಾಗುತ್ತಿವೆ. ಆದಾಯವೂ ಹೆಚ್ಚಿದೆ. ಅಲ್ಲದೆ, ಅಧಿಕ ಪ್ರಮಾಣದ ನೋಂದಣಿಗೂ ಅವಕಾಶವಿದೆ ಎಂದರು.

ನಾನಾ ಆರೋಪಕ್ಕೆ ಒಳಗಾಗಿರುವವರ ವಿಚಾರಣಾ ವಿಳಂಬವಾಗಿದ್ದು, ತ್ವರಿತವಾಗಿ ಮಾಡಲು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಐಜಿಆರ್ ಅವರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಇನ್ನೆರಡು ವಾರದಲ್ಲಿ ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಜುಲೈ ಮೊದಲ ವಾರದಲ್ಲಿ ಬರ ಘೋಷಣೆ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದರು.

ನಿನ್ನೆಯಿಂದ ಮುಂಗಾರು ಚುರುಕಾಗಿದೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಶೇ.96ರಿಂದ 104ರಷ್ಟು ವಾಡಿಕೆ ಪ್ರಮಾಣದ ಮಳೆಯಾಗಲಿದೆ. ಹೀಗಾಗಿ ಸದ್ಯಕ್ಕೆ ಮೋಡ ಬಿತ್ತನೆ ಮಾಡುವ ಬಗ್ಗೆ ಯಾವುದೇ ನಿರ್ಧಾರ ಮಾಡಿಲ್ಲ. ರಾಜ್ಯ 806 ಜನವಸತಿ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ನೀರಿನ ಸಮಸ್ಯೆ ಉಂಟಾದ 24 ಗಂಟೆಯಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಮುಖ್ಯಮಂತ್ರಿ ಸೂಚಿಸಿದ್ದಾರೆ. ಇನ್ನೊಂದು ವಾರದಲ್ಲಿ ವಿಭಾಗವಾರು ಸಭೆ ನಡೆಸಿ ಮಳೆ, ಬೆಳೆ, ಕುಡಿಯುವ ನೀರು ಮೊದಲಾದ ವಿಚಾರಗಳ ಬಗ್ಗೆ ಪ್ರಗತಿ ಪರಿಶೀಲನೆ ಮಾಡಲಾಗುವುದು ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

'ಶಕ್ತಿ' ಬಂದ ಮೇಲೆ ಐಷಾರಾಮಿ ಪ್ರೀಮಿಯಂ, ಎಲೆಕ್ಟ್ರಿಕ್ ಬಸ್‌ಗಳಿಗೆ ಡಿಮ್ಯಾಂಡ್ ಕುಸಿತ

10–15 ಪ್ರಯಾಣಿಕರ ಹೊತ್ತು ಸಾಗುತ್ತಿವೆ



ಮೈಸೂರು, ಜೂ.19(ಎಂಕೆ)– ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆ ಜಾರಿಯಾದ ಬಳಿಕ ಐಷರಾಮಿ ಪ್ರೀಮಿಯಂ ಮತ್ತು ಎಲೆಕ್ಟ್ರಾನಿಕ್ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಹೆಚ್ಚಾಗಿ ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಈ ಐಷರಾಮಿ ಪ್ರೀಮಿಯಂ(ಐರಾವತ, ರಾಜಹಂಸ ಇತರೆ ಎಸಿ ಒಳಗೊಂಡ ಬಸ್‌ಗಳು) ಹಾಗೂ ಎಲೆಕ್ಟ್ರಾನಿಕ್ ಬಸ್‌ಗಳು ಖಾಲಿ ಹೊಡೆಯುತ್ತಿದ್ದು, ಪ್ರಯಾಣಿಕರ ಬರುವಿಕೆಗಾಗಿ ಕಾಯುವಂತಾಗಿದೆ. ಬಹುತೇಕ ಮಹಿಳೆಯರು ಉಚಿತ ಬಸ್ ಪ್ರಯಾಣದ ಯೋಜನೆ ಬಳಕೆ ಮಾಡಿಕೊಳ್ಳುತ್ತಿರುವ ಪರಿಣಾಮ ಐಷರಾಮಿ ಮತ್ತು ಎಲೆಕ್ಟ್ರಾನಿಕ್ ಬಸ್‌ಗಳು ಖಾಲಿ ಖಾಲಿಯಾಗಿ ಸಂಚರಿಸುವಂತಾಗಿದೆ.

ಪ್ರಯಾಣಿಕರ ಸಂಚಾರ ಹೆಚ್ಚಾಗಿರುವ ಮತ್ತು ವಾರ್‍ಯಾಂತಗಳಲ್ಲಿ ಪ್ರತೀ 15 ನಿಮಿಷಕ್ಕೆ ಒಂದರಂತೆ ಮೈಸೂರಿಂದ ಬೆಂಗಳೂರಿಗೆ ಭರ್ತಿಯಾಗಿ ತೆರಳುತ್ತಿದ್ದ ಈ ಐಷಾರಾಮಿ ಪ್ರೀಮಿಯಂ ಬಸ್‌ಗಳು ಖಾಲಿಯಾಗಿ ಸಾಗುತ್ತಿವೆ. ಅಲ್ಲದೆ ಕೆಲ ತಿಂಗಳ ಹಿಂದೆಯಷ್ಟೇ ಮೈಸೂರು–ಬೆಂಗಳೂರು ನಡುವೆ ಸಂಚಾರ ಆರಂಭಿಸಿ, ಪ್ರಯಾಣಿಕರಿಂದ ಬೇಡಿಕೆ ಗಿಟ್ಟಿಸಿಕೊಂಡಿದ್ದ ಎಲೆಕ್ಟ್ರಾನಿಕ್ ಇವಿ ಬಸ್‌ಗಳು 10–15 ಪ್ರಯಾಣಿಕರಿಂದ ಸಂಚರಿಸುತ್ತಿವೆ.

ಶೇ.25ರಷ್ಟು ಮಾತ್ರ: ಐಷರಾಮಿ ಪ್ರೀಮಿಯಂ ಹಾಗೂ ಎಲೆಕ್ಟ್ರಾನಿಕ್ ಬಸ್‌ಗಳು ವೇಗವಾಗಿ ಹಾಗೂ ಕೈಗೆಟುಕುವ ದರದಲ್ಲಿ ಸೇವೆ ನೀಡುತ್ತಿದ್ದವು. ಆದರೆ ಕಳೆದ ಜೂ.11ರಂದು ರಾಜ್ಯ ಸರ್ಕಾರ 'ಶಕ್ತಿ' ಯೋಜನೆ ಜಾರಿಯಾದಾಗಿನಿಂದ ಮಹಿಳಾ ಪ್ರಯಾಣಿಕರು ಉಚಿತ ಬಸ್ ಪ್ರಯಾಣದ ಮೊರೆ ಹೋಗಿದ್ದಾರೆ. ಐಷರಾಮಿ ಮತ್ತು ಎಲೆಕ್ಟ್ರಾನಿಕ್ ಬಸ್‌ಗಳಲ್ಲಿ ಶೇ.25 ರಷ್ಟು ಮಂದಿಯಷ್ಟೇ ಪ್ರಯಾಣ ಮಾಡುತ್ತಿದ್ದಾರೆ.

ಆರ್ಥಿಕ ಸ್ಥಿತಿ ಚೆನ್ನಾಗಿರುವ ಮಹಿಳೆಯರು ಸಹಿತ ಶಕ್ತಿ ಯೋಜನೆ ಜಾರಿ ಬಳಿಕ ಉಚಿತವಾಗಿ ಸಂಚರಿಸಲು ಆಸಕ್ತಿ ತೋರುತ್ತಿದ್ದಾರೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವಾದ್ದರಿಂದ ಅವರೊಂದಿಗೆ ಪುರುಷ ಪ್ರಯಾಣಿಕರು ಸಾಮಾನ್ಯ ಬಸ್ ಸೇವೆಗಳನ್ನು ಬಳಸುವುದು ಈಗ ಹೆಚ್ಚಾಗಿದೆ. ಈ ಕಾರಣದಿಂದ ಐಷರಾಮಿ ಮತ್ತು ಇವಿ ಬಸ್‌ಗಳಿಗೆ ಪ್ರಯಾಣಿಕರ ಸಂಖ್ಯೆ ಇಳಿಕೆ ಆಗಿದೆ. ಕೆಎಸ್‌ಆರ್‌ಟಿಸಿ ಪ್ರೀಮಿಯಂ ಬಸ್ ಸೇವೆಗಳು ಸಾರಿಗೆ ನಿಗಮಕ್ಕೆ ಹೆಚ್ಚಿನ ಲಾಭವನ್ನು ನೀಡಲಿವೆ. ಇದೀಗ ಜನರು ಸಾಮಾನ್ಯ ಸಾರಿಗೆ ಬಸ್‌ಗಳತ್ತ ಮುಖ ಮಾಡಿದ್ದರಿಂದ ನಿಗಮದ ಲಾಭದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಮತ್ತೆ ಬೇಡಿಕೆ ಬರಲಿದೆ: ಉಚಿತ ಬಸ್ ಪ್ರಯಾಣದ ನಡುವೆಯೂ ಕೆಲ ಮಂದಿ ಐಷರಾಮಿ ಪ್ರೀಮಿಯಂ ಮತ್ತು ಎಲೆಕ್ಟ್ರಾನಿಕ್ ಬಸ್‌ಗಳಿಗೆ ಬರುತ್ತಿದ್ದಾರೆ. ಸದ್ಯಕ್ಕೆ ಪ್ರಯಾಣಿಕರಿಗಾಗಿ ಕಾಯುವ ಪರಿಸ್ಥಿತಿ ಬಂದಿದ್ದರೂ ಮುಂದಿನ ದಿನಗಳಲ್ಲಿ ಮತ್ತೆ ಬೇಡಿಕೆ ಹೆಚ್ಚಾಲಿದೆ. ಇವಿ ಮತ್ತು ಐಷರಾಮಿ ಪ್ರೀಮಿಯಂ ಬಸ್‌ಗಳು ಮೈಸೂರು–ಬೆಂಗಳೂರಿನ ಜನರಿಗೆ ಉತ್ತಮ ಸೇವೆ ನೀಡುತ್ತಿವೆ. ಅದರಲ್ಲೂ ಎಕ್ಸ್‌ಪ್ರೆಸ್ ವೇ ಆರಂಭವಾದ ನಂತರ ನಾನ್ ಸ್ಟಾಪ್ ಬಸ್ ಸೇವೆ ಲಭ್ಯವಿದೆ. ತ್ವರಿತ ವಾಗಿ ಬೆಂಗಳೂರಿಗೆ ಹೋಗಬೇಕಾದರು ಬಂದೆ ಬರುತ್ತಾರೆ ಎಂದು ಐಷಾರಾಮಿ ಪ್ರೀಮಿಯಂ ಹಾಗೂ ಎಲೆಕ್ಟ್ರಾನಿಕ್ ಬಸ್‌ಗಳ ಕಂಡಕ್ಟರ್ ಮತ್ತು ಡ್ರೈವರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಲ್ಲಿ ಮದ್ಯದ ಅಮಲಿನಲ್ಲಿ ಅಡ್ಡಾದಿಡ್ಡಿ ಕಾರು ಚಾಲನೆ: ಹೆಚ್.ಡಿ.ಕೋಟೆ ಮೂಲದ ಫುಡ್ ಡೆಲಿವರಿ ಬಾಯ್ ಸಾವು

ಬೆಂಗಳೂರು, ಜೂ.19– ಮದ್ಯದ ಅಮಲಿನಲ್ಲಿ ಅಡ್ಡಾದಿಡ್ಡಿ ಕಾರು ಚಾಲಿಸಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ಮೂಲದ ಯುವಕ ಸಾವನ್ನಪ್ಪಿರುವ ಘಟನೆ ಬೆಂಗಳೂರಿನಲ್ಲಿ ನಿನ್ನೆ ಮಧ್ಯರಾತ್ರಿ ನಡೆದಿದೆ.

ಯುವಕ–ಯುವತಿಯರು ಪಾರ್ಟಿ ಮುಗಿಸಿಕೊಂಡು ಅಡ್ಡಾದಿಡ್ಡಿ ಕಾರು ಚಾಲಿಸಿಕೊಂಡು ಬರುವಾಗ ಆರ್.ಆರ್.ನಗರ ಮೆಟ್ರೊ ನಿಲ್ದಾಣ ಸಮೀಪದ ವಿಶ್ವಪ್ರಿಯ ಅಪಾರ್ಟ್‌ಮೆಂಟ್ ಬಳಿ ಫುಡ್ ಡೆಲಿವರಿ ಸಿಬ್ಬಂದಿ, ಹೆಚ್.ಡಿ.ಕೋಟೆ ಮೂಲದ ಪವನ್ ಕುಮಾರ್ ಬೈಕ್‌ಗೆ ಡಿಕ್ಕಿ ಹೊಡೆಸಿದ್ದಾರೆ. ಘಟನೆ ಬಳಿಕ ಪರಾರಿಯಾಗಲು ಕಾರಿನ ವೇಗವನ್ನು ಮತ್ತಷ್ಟು ಹೆಚ್ಚಿಸಿದ್ದು, ಬೈಕ್ ಅನ್ನು ಸುಮಾರು 100 ಮೀಟರ್ ಎಳೆದೊಯ್ದಿದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಪವನ್‌ಕುಮಾರ್‌ನನ್ನು ಅಲ್ಲಿಯೇ ಬಿಟ್ಟು ಪರಾರಿಯಾಗುವಾಗ ಸ್ಥಳೀಯರು ಅವರ ಹಿಡಿದು ಧರ್ಮದೇಟು ನೀಡಿದ್ದಾರೆ. ಈ ಸಂಬಂಧ ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರು ಚಾಲಕ ವಿನಾಯಕ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ರಾಜಾಜಿನಗರದ ಶೋ ರೂಂನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿದ್ದ ವಿನಾಯಕ್‌ಗೆ ನಿನ್ನೆ ಪ್ರೋತ್ಸಾಹಕ ಭತ್ಯೆ ಸಿಕ್ಕಿದ್ದರಿಂದ ಆ ಹಣದಲ್ಲಿ ಸ್ನೇಹಿತರಿಗೆ ಪಾರ್ಟಿ ಕೊಡಿಸಿ, ವಾಪಸ್ಸಾಗುವಾಗ ಕುಡಿದ ನಶೆಯಲ್ಲಿ ಅಪಘಾತವೆಸಗಿದ್ದಾರೆ. ಸಾರ್ವಜನಿಕರು ಬೆನ್ನತ್ತಿದಾಗ ಮೂವರು ಯುವತಿಯರು ಹಾಗೂ ಯುವಕ ಪರಾರಿಯಾಗಿದ್ದು, ಚಾಲಕ ಸಿಕ್ಕಿಹಾಕಿಕೊಂಡಿದ್ದಾನೆ ಎನ್ನಲಾಗಿದೆ.

ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು

ನಂ. ಎಸ್‌ಎಸ್‌ಟಿ/2/ಸಿಆರ್/ಗಿ.ಕ.13/2023–24 ದಿನಾಂಕ: 16–06–2023

2023ನೇ ಸಾಲಿನ ಶ್ರೀ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳ ವಿವರ:–

ಕ್ರ.ಸಂ.	ದಿನಾಂಕ	ಸಮಯ	ಕಾರ್ಯಕ್ರಮದ ವಿವರ
1	ದಿ: 22–06–2023 ಗುರುವಾರ	ರಾತ್ರಿ 8.00 ಗಂಟೆಗೆ	ವರಪೂಜಾ ಮಹೋತ್ಸವ
2	ದಿ: 23–06–2023 ಶುಕ್ರವಾರ	ಸಂಜೆ: 5.00 ಗಂಟೆಗೆ	"ಕಾಶಿಯಾತ್ರೆ" ಮಹೋತ್ಸವ ಮತ್ತು ರಾತ್ರಿ 6.30 ರಿಂದ 7.30 ಗಂಟೆಯೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ "ಧಾರಾಮಹೋತ್ಸವ"
3	ದಿ: 27–06–2023 ಮಂಗಳವಾರ ದಿ: 28–06–2023 ಬುಧವಾರ ದಿ: 29–06–2023 ಗುರುವಾರ	ಸಂಜೆ: 7.00 ಗಂಟೆಗೆ	ಕಪಿಲಾ ನದಿಯಲ್ಲಿ "ತೆಪ್ಪೋತ್ಸವ" ನಡೆಯಲಿದೆ

ದಿನಾಂಕ: 24–06–2023 ರಿಂದ ದಿನಾಂಕ: 29–06–2023 ರ ವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಶ್ರೀಯವರ ಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ. ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸಹಿ/– ಜಗದೀಶ್ ಕುಮಾರ್ ಎಂ., ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ಕವಿತ ರಾಜಾರಾಂ (ಆಯ್ಕೆ ಶ್ರೇಣಿ) ಕ.ಆ.ಸೇ, ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಡಾ. ರಾಜೇಂದ್ರ ಕೆ.ವಿ. ಭಾ.ಆ.ಸೇ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಬಸವರಾಜೇಂದ್ರ ಹೆಚ್., ಭಾ.ಆ.ಸೇ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ: ಕರಾಮುವಿ/ಡೀನ್(ಶೈ)/ಡಿಎಸಿ–07/ಪಿಹೆಚ್.ಡಿ/2023–24 ದಿನಾಂಕ: 16–06–2023

ಅಧಿಸೂಚನೆ

ಪಿಹೆಚ್.ಡಿ ಕಾರ್ಯಕ್ರಮದ ಪ್ರವೇಶಾತಿ 2023–24 (ರೆಗ್ಯುಲರ್ ಮೋಡ್)

ಉಲ್ಲೇಖ: (1) ಯುಜಿಸಿ ಸಾರ್ವಜನಿಕ ಪತ್ರ ಸಂಖ್ಯೆ F:No.2–1/2017(DEB-III) ದಿನಾಂಕ 14.09.2018. (2) 26ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ದಿನಾಂಕ: 08–06–2023. (3) 172ನೇ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ದಿನಾಂಕ: 13–06–2023. (4) ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (4ನೇ ತಿದ್ದುಪಡಿ 2023) (5) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16–06–2023.

ಈ ಕೆಳಕಂಡ ಅಧ್ಯಯನ ವಿಭಾಗಗಳಲ್ಲಿ ಪಿ.ಹೆಚ್.ಡಿ ಪದವಿ ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

• ಕನ್ನಡ • ರಾಜ್ಯಶಾಸ್ತ್ರ • ಭೂಗೋಳಶಾಸ್ತ್ರ • ಸೂಕ್ಷ್ಮ ಜೀವಶಾಸ್ತ್ರ • ಹಿಂದಿ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ • ರಸಾಯನಶಾಸ್ತ್ರ • ಜೈವಿಕ ತಂತ್ರಜ್ಞಾನ • ತೆಲುಗು • ವಾಣಿಜ್ಯಶಾಸ್ತ್ರ • ಜೀವ ರಸಾಯನಶಾಸ್ತ್ರ • ಶಿಕ್ಷಣಶಾಸ್ತ್ರ • ಅರ್ಥಶಾಸ್ತ್ರ

ಸಾಮಾನ್ಯ ಪ್ರವೇಶ ಪರೀಕ್ಷೆ (CET): • ಅರ್ಹ ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಬೇಕು. • UGC / UGC-CSIR, JRF Test / NET / GATE / GRE / M.Phil ತೇರ್ಗಡೆಯಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷಾ ವಿನಾಯಿತಿ ಇರುತ್ತದೆ. ಆದಾಗ್ಯೂ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು.

ಸಾಮಾನ್ಯ ಪ್ರವೇಶ ಪರೀಕ್ಷೆ (CET) ಯ ಕೇಂದ್ರ: ಕರಾಮುವಿ ನಿಲಯ, ಮೈಸೂರಿನಲ್ಲಿ ಮಾತ್ರ ನಡೆಸಲಾಗುವುದು.

ಶುಲ್ಕ ಪಾವತಿ: ಅರ್ಜಿ ಸಂಸ್ಕರಣೆ ಶುಲ್ಕ: ರೂ.2000/–. (ರೂ.1000/–ಪ.ಜಾ/ಪ.ಪಂ/ಪ್ರವರ್ಗ–1) ಹೆಚ್ಚಿನ ಮಾಹಿತಿಗೆ ಕರಾಮುವಿ ಜಾಲತಾಣ ಪರಿಶೀಲಿಸುವುದು. ಕರಾಮುವಿ ಪೋರ್ಟಲ್ ಮುಖಾಂತರ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಸಂಬಂಧಿಸಿದ ದಾಖಲಾತಿಗಳ ಧೃಡೀಕೃತ ನಕಲು ಪ್ರತಿಗಳ ಜೊತೆ ಜಾಲತಾಣದಿಂದ ಡೌನ್‌ಲೋಡ್ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಅಂಚೆ ಮೂಲಕ ಅಥವಾ ಖುದ್ದಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.

ಭಾಷೆಗಳು, ಶಿಕ್ಷಣಶಾಸ್ತ್ರ, ಸಮಾಜ ವಿಜ್ಞಾನ ವಿಷಯಗಳು ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು
ಅಧ್ಯಕ್ಷರು, --------------- ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ ಮೈಸೂರು – 570 006.

ವಾಣಿಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಪಟ್ಟ ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.
ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾಶಾಸ್ತ್ರ ಬ್ಲಾಕ್, 18ನೇ ಮುಖ್ಯ ರಸ್ತೆ, ವಿಜಯನಗರ 3ನೇ ಹಂತ, 'ಬಿ' ಬ್ಲಾಕ್, ಮೈಸೂರು – 570030.

ಪ್ರಮುಖ ದಿನಾಂಕಗಳು:	
ಜಾಲತಾಣದಲ್ಲಿ ಅರ್ಜಿ ಲಭ್ಯವಾಗಲಿರುವ ದಿನಾಂಕ	19–06–2023
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ)	30–06–2023
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಶುಲ್ಕ ರೂ 500/–ರೊಂದಿಗೆ)	15–07–2023
ಸಾಮಾನ್ಯ ಪ್ರವೇಶಾತಿ ಪರೀಕ್ಷೆ ದಿನಾಂಕ	23–07–2023
ಪ್ರವೇಶಾತಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ	31–07–2023
ಆಯ್ಕೆ ಪಟ್ಟಿ ಪ್ರಕಟಣೆ	07–08–2023
ಮಾರ್ಗದರ್ಶಕರ ಹಂಚಿಕೆಯ ಕೌನ್ಸಿಲಿಂಗ್	14–08–2023
ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳ ಪ್ರಾರಂಭ	04–09–2023

ವಿವರಣಾ ಪುಸ್ತಕ, ವಿಷಯವಾರು ಖಾಲಿ ಇರುವ ಸೀಟುಗಳು (Seat matrix) ಪ್ರವೇಶಾರ್ಹತೆ, ಸಾಮಾನ್ಯ ಪ್ರವೇಶ ಪರೀಕ್ಷೆ ವಿವರ, ಪಠ್ಯಕ್ರಮ ಮತ್ತು ಪರೀಕ್ಷೆ ಪತ್ರಿಕೆಯ ನಮೂನೆ ಹಾಗೂ ಇತರೆ ನಿಯಮಗಳಿಗೆ ಕರಾಮುವಿ ವೆಬ್‌ಸೈಟ್ www.ksoumysuru.ac.in ನಲ್ಲಿ ವೀಕ್ಷಿಸುವುದು.

ಸಹಿ/– ಕುಲಸಚಿವ